# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಅದಾನಿಗೆ ಬಲಿಯಾದ EPW ಸಂಪಾದಕ

**ಪರಂಜೋಯ್ ಠಾಕುರ್ತಾ**




ಸಂಪುಟ 11 | ಸಂಚಿಕೆ 31 | ಪುಟ 16 | ಜುಲೈ 24-30, 2017 | ರೂ. 10/-

web: www.janashakthi.co.in | e-mail : js_weekly@yahoo.com


# ಭಾಷೆ, ಸ್ವಾಯತ್ತತೆ ಮೇಲೆ ದಾಳಿಗೆ ತುರ್ತು ಪ್ರತಿರೋಧ ಬೇಕು









## ಜೈಲಿನಲ್ಲಿ ವಿ.ಐ.ಪಿ. ಖೈದಿಗಳು ಕರಾಳ ಸತ್ಯಗಳು, ಕಾಣದ ಕೈಗಳು

## ಕಾರ್ಮಿಕ ವರ್ಗದ ಜಾಗೃತಿ ಜಾಥಾ

ವಿದುರಾಶ್ವತ್ಥದಿಂದ ಕುಂದಾಪುರ ವಧಿ






## ಒಂದು ತೆರಿಗೆ ಒಂದು ದೇಶ: ಗೆದ್ದವರಾರು, ಸೋತವರಾರು?



## ಮಲಬಾರ್ ಕವಾಯತು ಯಾರಿಗಾಗಿ?

## ಆರ್ಯರು ವಲಸೆಗಾರರು: ತಳಿವಿಜ್ಞಾನದ ನಿರ್ಣಯ



# ರೈತ-ವಿರೋಧಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟ

## ಕಿಸಾನ್ ಮುಕ್ತಿ ಸಂಸದ್ ನಿರ್ಧಾರ

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಆರಂಭವಾಗಿರುವ ದೇಶದ ರೈತರ ಐಕ್ಯ ಹೋರಾಟ ಜುಲೈ 18ರಂದು ದೇಶದ ರಾಜಧಾನಿಯ ಜಂತರ್‌ಮಂತರ್‌ನಲ್ಲಿ ನಡೆದ ಕಿಸಾನ್ ಮುಕ್ತಿ ಸಂಸದ್‌ನೊಂದಿಗೆ ತನ್ನ ಮೊದಲ ಘಟ್ಟವನ್ನು ಪೂರ್ಣಗೊಳಿಸಿದೆ.

ದೇಶಾದ್ಯಂತ ರೈತರ ಸಂಕಟಗಳು ಇನ್ನಷ್ಟು ತೀವ್ರಗೊಳ್ಳುತ್ತಿರುವುದರಿಂದಾಗಿ ಹಲವು ರಾಜ್ಯಗಳಲ್ಲಿ ರೈತರ ಆಕ್ರೋಶ ಭುಗಿಲೆದ್ದ ಹಿನ್ನೆಲೆಯಲ್ಲಿ 162ಕ್ಕೂ ಹೆಚ್ಚು ರೈತರ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ರಚಿಸಿಕೊಂಡ ಈ ಸಮನ್ವಯ ಸಮಿತಿ ಮಧ್ಯಪ್ರದೇಶದ ಬಿಜೆಪಿ ಸರಕಾರದ ಪೋಲೀಸ್ ಆರು ರೈತರನ್ನು ಬಲಿ ತೆಗೆದುಕೊಂಡ ಮಂದಸೌರ್‌ನಿಂದ ಆರಂಭಿಸಿದ ಕಿಸಾನ್ ಮುಕ್ತಿಯಾತ್ರಾ ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ, ಉತ್ತರಪ್ರದೇಶ ಮತ್ತು ಹರ್ಯಾಣದ ಮೂಲಕ ಜುಲೈ 18ರಂದು ದಿಲ್ಲಿ ತಲುಪಿ ಈ ಕಿಸಾನ್ ಮುಕ್ತಿ ಸಂಸದ್‌ಅನ್ನು ನಡೆಸಿತು. ರೈತರ ಸಾಲಮನ್ನಾ ಮತ್ತು ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಬೆಳೆಗಳಿಗೆ ಫಲದಾಯಕ ಬೆಲೆ ನಿಗದಿ ಈ ಎರಡು ಪ್ರಮುಖ ಬೇಡಿಕೆಗಳ ಮೇಲೆ ಈ ಜಾತಾ ನಡೆದಿದೆ.

ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಭೂಮಿ ಅಧಿಕಾರ್ ಆಂದೋಲನ್‌ನ ಪರವಾಗಿ ಮೇಧಾ ಪಾಟ್ಕರ್ ಮತ್ತು ಡಾ. ಸುನೀಲಂ, ಸಂಸದ್ ಸದಸ್ಯ ರಾಜು ಶೆಟ್ಟಿ, ಯೋಗೇಂದ್ರ ಯಾದವ್ ಮತ್ತಿತರ ಹಲವು ರೈತ ಮುಖಂಡರು ಮಾತನಾಡಿದರು.

ರೈತರ ಐಕ್ಯ ಹೋರಾಟಕ್ಕೆ ಬೆಂಬಲ ಸೂಚಿಸುತ್ತ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಈ ವಿಷಯವನ್ನು ಸಂಸತ್ತಿನಲ್ಲಿ ಎತ್ತುವುದಾಗಿ ತಿಳಿಸಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್‌ನ ಸಂಯೋಜಕ ಜಿತೇಂದ್ರ ಚೌಧರಿ, ಜೆಡಿ(ಯು) ಮುಖಂಡ ಶರದ್ ಯಾದವ್, ಎಎಪಿ ಸಂಸದ್ ಸದಸ್ಯ ಧರ್ಮವೀರ್ ಗಾಂಧಿ ಮತ್ತಿತರರೂ ರೈತರ ಹೋರಾಟಕ್ಕೆ ಸೌಹಾರ್ದ ಬೆಂಬಲವನ್ನು ಸೂಚಿಸಿ ಮಾತನಾಡಿದರು.

ಈ ನಡುವೆ ಜುಲೈ 17ರಂದು ರಾಜಸ್ತಾನದಲ್ಲಿ ಚಾರಿತ್ರಿಕ ಎನ್ನಬಹುದಾದ 'ಕಿಸಾನ್ ಕರ್ಫ್ಯೂ' ನಡೆದಿದೆ. ಕಿಸಾನ್ ಸಭಾ ಇದಕ್ಕೆ ನೇತೃತ್ವ ನೀಡಿದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ವಿಶ್ವಾಸಘಾತದ ವಿರುದ್ಧ ರಾಜ್ಯವ್ಯಾಪಿಯಾಗಿ ಯಾತ್ರೆಗಳು, ಸಮಾವೇಶಗಳು ನಡೆಯುತ್ತಿವೆ.



## ಭಾರತದ ನೂತನ ರಾಷ್ಟ್ರಪತಿ ರಾಮನಾಥ ಕೊವಿಂದ್

ಭಾರತದ 14ನೇ ರಾಷ್ಟ್ರಪತಿಯಾಗಿ ಎನ್‌ಡಿಎ ಅಭ್ಯರ್ಥಿ ರಾಮನಾಥ ಕೊವಿಂದ್ ಆಯ್ಕೆಯಗಿದ್ದಾರೆ. ಅವರಿಗೆ 65% ಮತಗಳು ದೊರೆತಿವೆ, ಹಾಗೂ ಪ್ರತಿಪಕ್ಷಗಳ ಅಭ್ಯರ್ಥಿ ಮೀರಾ ಕುಮಾರ್ ಅವರಿಗೆ 35% ಮತಗಳು ಸಿಕ್ಕಿವೆ ಎಂದು ವರದಿಯಾಗಿದೆ.

ರಾಮನಾಥ ಕೊವಿಂದ್ ಅವರನ್ನು ಅಭಿನಂದಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಒಂದು ಬಹುತ್ವದ, ಸಮರಸಪೂರ್ಣ, ನ್ಯಾಯಯುತ ಮತ್ತು ಸಮಾನಾತ್ಮಕ ಭಾರತಕ್ಕಾಗಿ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದಿದ್ದಾರೆ. ಒಂದು ಭವ್ಯ ಸ್ಪರ್ಧೆ ನೀಡಿದ್ದಕ್ಕಾಗಿ ಮೀರಾ ಕುಮಾರ್ ರವರನ್ನು ಅವರು ಅಭಿನಂದಿಸಿದ್ದಾರೆ.

ಮೀರಾ ಕುಮಾರ್ ಅವರು ತಮ್ಮನ್ನು ಬೆಂಬಲಿಸಿದವರಿಗೆ ಕೃತಜ್ಞತೆ ಸಲ್ಲಿಸುತ್ತ "ಜಾತ್ಯತೀತತೆಗಾಗಿ, ದಮನಕ್ಕೊಳಗಾದವರು ಮತ್ತು ಅಂಚಿಗೆ ತಳ್ಳಲ್ಪಟ್ಟವರಿಗಾಗಿ ನನ್ನ ಹೋರಾಟ ಮುಂದುವರೆಯುತ್ತದೆ" ಎಂದಿದ್ದಾರೆ.

## ಡಾರ್ಜಿಲಿಂಗ್‌ನಲ್ಲಿ ಗಂಭೀರ ಪರಿಸ್ಥಿತಿ: ತ್ರಿಪಕ್ಷೀಯ ಸಭೆ ಕರೆಯಲು ಗೃಹಮಂತ್ರಿಗಳಿಗೆ ಯೆಚುರಿ ಪತ್ರ

ಪಶ್ಚಿಮ ಬಂಗಾಲದ ಡಾರ್ಜಿಲಿಂಗ್ ಮತ್ತು ಕಾಲಿಪೊಂಗ್‌ನ ಬೆಟ್ಟ ಪ್ರದೇಶಗಳಲ್ಲಿ ತೀವ್ರ ಗಂಭೀರ ಪರಿಸ್ಥಿತಿ ಉಂಟಾಗಿದೆ. ಜುಲೈ 8 ರಿಂದ ಪೋಲಿಸ್ ಗೋಲೀಬಾರಿನಲ್ಲಿ 8 ಜನ ಸತ್ತಿದ್ದಾರೆ, ಹಲವರು ಗಾಯಗೊಂಡಿದ್ದಾರೆ. ಬಂಗಾಲಿ ಭಾಷೆಯನ್ನು ಕಡ್ಡಾಯಗೊಳಿಸುವ ರಾಜ್ಯ ಸರಕಾರದ ಪ್ರಕಟಣೆಯ ವಿರುದ್ಧ ಈ ಪ್ರತಿಭಟನೆಗಳು ನಡೆಯುತ್ತಿವೆ. ಆರ್ಥಿಕ ದಿಗ್ಬಂಧನದಂತಹ ಪರಿಸ್ತಿತಿ ಉಂಟಾಗಿರುವುದರಿಂದಾಗಿ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಯಾಗುತ್ತಿದೆ, ತುರ್ತು ವೈದ್ಯಕೀಯ ಚಿಕಿತ್ಸೆ ಬೇಕಾಗಿರುವವರಿಗೆ ಅದು ಲಭ್ಯವಾಗದಂತಹ ಪರಿಸ್ಥಿತಿ ಉಂಟಾಗಿದೆ ಎಂಬ ವರದಿಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ತಕ್ಷಣ ಮಧ್ಯಪ್ರವೇಶಿಸಬೇಕಾಗಿದೆ ಎಂದು ಜುಲೈ 13ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಕೇಂದ್ರ ಗೃಹಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

ಗೂರ್ಖಾಲ್ಯಾಂಡ್ ಪ್ರಾದೇಶಿಕ ಆಡಳಿತ (ಜಿಟಿಎ) ಕೇಂದ್ರ ಸರಕಾರದ ಗಜೆಟ್ ಮಾರ್ಚ್ 14, 2012ರ ಅಧಿಸೂಚನೆಯ ಮೂಲಕ ರಚನೆಗೊಂಡಿದೆ. ಇದು ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಗೂರ್ಖಾಲ್ಯಾಂಡ್ ಜನಮುಕ್ತಿ ಮೋರ್ಚಾ(ಜಿಎಂ) ನಡುವಿನ ತ್ರಿಪಕ್ಷೀಯ ಒಪ್ಪಂದದ ಫಲಶೃತಿಯಾಗಿತ್ತು.

ಡಾರ್ಜಿಲಿಂಗ್‌ನ ಒಬ್ಬ ಮಾಜಿ ಸಂಸದರಾದ ಸಮನ್ ಪಾಠಕ್ ಅವರ ಎರಡು ಪತ್ರಗಳನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿದ್ದ ಯೆಚುರಿಯವರು, ಈ ಪ್ರದೇಶದ ಜನಗಳು ಈಗ ಎಂತಹ ಅಪಾರ ಸಂಕಷ್ಟಗಳನ್ನು ಎದುರಿಸಬೇಕಾಗಿದೆ ಎಂಬುದನ್ನು ಗೃಹಮಂತ್ರಿಗಳು ಗ್ರಹಿಸಬಹುದಾಗಿದೆ ಎನ್ನುತ್ತ ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಪ್ರತಿನಿಧಿಗಳು ಮತ್ತು ಪ್ರತಿಭಟನಾ ಚಳುವಳಿಯ ಮುಖಂಡರ ಒಂದು ತ್ರಿಪಕ್ಷೀಯ ಸಭೆಯನ್ನು ತುರ್ತಾಗಿ ಕರೆಯಬೇಕು, ಈ ಪ್ರದೇಶದಲ್ಲಿ ಸಾಮಾನ್ಯ ಪರಿಸ್ಥಿತಿ ಮತ್ತು ಶಾಂತಿ ಮತ್ತೆ ನೆಲೆಸುವಂತಾಗಬೇಕಾದರೆ ತ್ರಿಪಕ್ಷೀಯ ಸಂವಾದದ ಪ್ರಕ್ರಿಯೆಯನ್ನು ತಕ್ಷಣವೇ ಆರಂಭವಾಗಬೇಕು ಎಂದು ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ.

## 14 ದಿನಗಳ ಅತ್ಯಂತ ಚಿಕ್ಕ ಮಳೆಗಾಲದ ಸಂಸತ್ ಅಧಿವೇಶನದಲ್ಲಿ 26 ಮಸೂದೆಗಳನ್ನು ಪಾಸು ಮಾಡಿಸಿಕೊಳ್ಳುವ ಕಪಟತನ

ಬಹುಶಃ ಸಂಸತ್ತಿನ ಪ್ರಸಕ್ತ ಮಳೆಗಾಲದ ಅಧಿವೇಶನ ಭಾರತೀಯ ಸಂಸದೀಯ ಇತಿಹಾಸದಲ್ಲೇ ಅತ್ಯಂತ ಚಿಕ್ಕ ಅಧಿವೇಶನವಾಗಿರಬಹುದು. ಸರಕಾರ 16 ಹೊಸ ಮಸೂದೆಗಳ ಪಟ್ಟಿಯನ್ನು ಕೊಟ್ಟಿದೆ. ಈಗಾಗಲೇ ಲೋಕಸಭೆಯಲ್ಲಿ 10 ಮತ್ತು ರಾಜ್ಯಸಭೆಯಲ್ಲಿ 8 ಮಸೂದೆಗಳು ಬಾಕಿ ಇವೆ. ಆದರೆ ಇವನ್ನೆಲ್ಲ ಚರ್ಚಿಸಲು ಸಿಗುವ ಅವಧಿ ಕೇವಲ 14 ದಿನಗಳು. ಇವಲ್ಲದೆ ಇದೇ 14 ದಿನಗಳಲ್ಲಿ ಪೂರಕ ವಿನಿಯೋಗದ ಕೇಳಿಕೆಗಳನ್ನೂ ಸಂಸತ್ತು ಚರ್ಚಿಸಬೇಕಾಗಿದೆ.

14 ದಿನಗಳಲ್ಲಿ ಇಷ್ಟೊಂದು ವ್ಯವಹಾರ ಅಸಾಧ್ಯ. ಬಹುಶಃ ಗದ್ದಲಗಳ ನಡುವೆ ಚರ್ಚೆಯಿಲ್ಲದೇ ಇವನ್ನೆಲ್ಲ ಪಾಸು ಮಾಡಿಸಿಕೊಳ್ಳುವುದು ಸರಕಾರದ ಹುನ್ನಾರವಾಗಿರಬಹುದು. ಇದು ಪ್ರಜಾಪ್ರಭುತ್ವಕ್ಕೆ ವಿನಾಶಕಾರಿ ಎಂದು ಅಧಿವೇಶನ-ಪೂರ್ವ ಸರ್ವಪಕ್ಷಗಳ ಸಭೆಯಲ್ಲಿ ಸಿಪಿಐ(ಎಂ) ಹೇಳಿದೆ.

ಸದನವನ್ನು ಸುಲಲಿತವಾಗಿ, ಪರಿಣಾಮಕಾರಿಯಾಗಿ ನಡೆಸುವ ಹೊಣೆ ಸರಕಾರದ್ದು. ತನ್ನ ಶಾಸನ ರಚಿಸುವ ಕೆಲಸದಲ್ಲಿ ಆದ್ಯತೆಗಳನ್ನು ಅದು ಗುರುತಿಸಿಕೊಳ್ಳಬೇಕು. ಗಮನಾರ್ಹ ಸಂಗತಿಯೆಂದರೆ 16 ಹೊಸ ಮಸೂದೆಗಳಲ್ಲಿ ರಾಜ್ಯಸಭೆ ಈಗಾಗಲೇ ಅಂಗೀಕರಿಸಿರುವ, ಆದರೆ ಲೋಕಸಭೆ ಚರ್ಚಿಸಬೇಕಾದ ಮಹಿಳಾ ಮೀಸಲಾತಿ ಮಸೂದೆಯ ಪ್ರಸ್ತಾಪವಿಲ್ಲ. ಇದರ ಜೊತೆಗೆ ರೈತರಿಗೆ ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚಿನ ದರಗಳಲ್ಲಿ ಮಾರುವ ಹಕ್ಕು ನೀಡುವ ಮಸೂದೆ ತರಬೇಕಾಗಿದೆ, ಆಧಾರ್ ಮತ್ತು ಇತ್ತೀಚೆಗೆ ಜಿಯೊ ವಿಷಯದಲ್ಲಿ ಮುಖ್ಯವಾಗಿರುವ ಏಕಾಂತತೆಯ ಹಕ್ಕು ಇವನ್ನೂ ತುರ್ತಾಗಿ ಪರಿಶೀಲಿಸಿಬೇಕಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಸಿಪಿಐ(ಎಂ) ಅದಾಗಲೇ ದೇಶದಲ್ಲಿ ಹದೆಗೆಡುತ್ತಿರುವ ಆಂತರಿಕ ಭದ್ರತಾ ಪರಿಸ್ಥಿತಿ, ಬಡಿದು ಸಾಯಿಸುವ ಘಟನೆಗಳು ಹೆಚ್ಚುತ್ತಿರುವುದು, ಮತ್ತು ಜನಗಳ ಮೇಲೆ ಹೆಚ್ಚುತ್ತಿರುವ ಆರ್ಥಿಕ ಹೊರೆಗಳ ಪ್ರಶ್ನೆಯನ್ನು ಎತ್ತುವುದಾಗಿ ಹೇಳಿದೆ.

2014ರ ಚುನಾವಣೆಗಳ ಮೊದಲು ಬಿಜೆಪಿ ತನಗೆ ಲೋಕಸಭೆಯಲ್ಲಿ ಬಹುಮತ ಸಿಕ್ಕರೆ ಮಹಿಳಾ ಮೀಸಲಾತಿ ತರುವುದಾಗಿ ಹೇಳಿತ್ತು. ಬಹುಮತ ಸಿಕ್ಕಿ ಮೂರು ವರ್ಷಗಳಾಗಿವೆ. ಆದರೂ ಇದುವರೆಗೂ ಈ ಕುರಿತು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿಲ್ಲ ಏಕೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೇಳಿದ್ದಾರೆ.

ಅವರು ಜುಲೈ 15ರಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಏರ್ಪಡಿಸಿದ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಈ ಪ್ರಶ್ನೆ ಕೇಳಿದ್ದಾರೆ. ಸಂಸತ್ತಿನ ಪ್ರಸಕ್ತ ಮಳೆಗಾಲದ ಅಧಿವೇಶನದಲ್ಲಿ ಈ ಮಸೂದೆಯನ್ನು ತರಲೇಬೇಕು ಎಂದು ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆಗೆ ನೀಡಿರುವ ಕರೆಯ ಭಾಗವಾಗಿ ಈ ಪ್ರತಿಭಟನೆಯನ್ನು ಏರ್ಪಡಿಸಲಾಗಿತ್ತು.

ಮುಂದುವರೆದು ಅವರು, ಮೂಲಭೂತವಾಗಿ ಬಿಜೆಪಿಗೆ ಮಹಿಳೆಯರ ಸಾಮರ್ಥ್ಯ ಅರಳಬೇಕು, ಅವರಿಗೆ ಸಲ್ಲತಕ್ಕದ್ದನ್ನು ಲಭ್ಯಗೊಳಿಸಬೇಕು ಎಂಬ ವಿಚಾರದಲ್ಲಿ ನಂಬಿಕೆಯಿಲ್ಲ, ಮಹಿಳಾ ಮೀಸಲಾತಿ ಅವರಿಗೆ ಕೇವಲ ಚುನಾವಣಾ ವಿಷಯ ಮಾತ್ರ ಎಂದು ಅಭಿಪ್ರಾಯ ಪಟ್ಟರು.

1996ರಲ್ಲಿ ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರ ಮೊದಲ ಬಾರಿಗೆ ಈ ಮಸೂದೆಯನ್ನು ಮಂಡಿಸಿತ್ತು. ಆದರೆ ಅದನ್ನು ಪಾಸು ಮಾಡಿಸಿಕೊಳ್ಳಲಾಗಲಿಲ್ಲ. 2003ರಲ್ಲಿ ಸಂಸತ್ತಿನಲ್ಲಿ ಈ ಮಸೂದೆಯ ಪರವಾಗಿ ಮೂರನೇ ಎರಡರಷ್ಟು ಬಹುಮತ ಇದ್ದರೂ ಆಗಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅದನ್ನು ಬದಿಗೊತ್ತಿಸಿಟ್ಟಿತು. ನಂತರದ ಯುಪಿಎ ಸರಕಾರ ಕೂಡ ಇದನ್ನು ಎತ್ತಿಕೊಳ್ಳಲಿಲ್ಲ. ನರೇಂದ್ರ ಮೋದಿ ಸರಕಾರ ಕೂಡ ಈ ವಿಷಯದಲ್ಲಿ ಭಿನ್ನವಾಗಿಲ್ಲ. ಈಗ ರಾಜ್ಯಸಭೆಯಲ್ಲಿ ಬಹುಮತ ಬಂದರೆ ತರುತ್ತೇವೆ ಎನ್ನುತ್ತಿರುವುದು ಅದರ ಗೋಸುಂಬೆತನದ ಮಾತು, ಏಕೆಂದರೆ ಈಗಾಗಲೇ 2010ರಲ್ಲಿ ಎಡಪಕ್ಷಗಳ ಹೋರಾಟದ ಒತ್ತಡದಿಂದಾಗಿ ರಾಜ್ಯಸಭೆ ಈ ಮಸೂದೆಯನ್ನು ಅಂಗೀಕರಿಸಿದೆ ಎಂದು ಅವರು ನೆನಪಿಸಿದರು.




## ಬಹುಮತ ಸಿಕ್ಕಿ ಮೂರು ವರ್ಷಗಳಾಗಿವೆ, ಮಹಿಳಾ ಮೀಸಲಾತಿ ಮಸೂದೆ ಇನ್ನೂ ಏಕಿಲ್ಲ?–ಸೀತಾರಾಮ್ ಯೆಚುರಿ

ವಾಸ್ತವವಾಗಿ ಮಹಿಳೆಯರನ್ನು ಎರಡನೇ ದರ್ಜೆಯಲ್ಲಿಡುವ ಮನುಸ್ಮೃತಿಯನ್ನು ಎತ್ತಿ ಹಿಡಿಯುವ ಆರೆಸ್ಸೆಸ್‌ನ ರಾಜಕೀಯ ಅಂಗವಾಗಿರುವ ಬಿಜೆಪಿಗೆ ಇದು ಬೇಕಾಗಿಯೂ ಇಲ್ಲ. ಇಂತಹ ವಿಚಾರದ ವಿರುದ್ಧವೇ ಸಿಪಿಐ(ಎಂ) ದೇಶಾದ್ಯಂತ ಹೋರಾಟವನ್ನು ಬಲಪಡಿಸುತ್ತದೆ, ನಾವು ಇದನ್ನು ಪಡೆದೇ ಪಡೆಯುತ್ತೇವೆ ಎಂದು ಯೆಚುರಿಯವರು ಹೇಳಿದರು.

ಈ ಧರಣಿ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಸದಸ್ಯರಾದ ಆಶಾಶರ್ಮ, ಮೈಮುನಾ ಮೊಲ್ಲ ಮತ್ತಿತರ ಸಿಪಿಐ(ಎಂ) ಮುಖಂಡರೂ ಮಾತಾಡಿದರು.

# ಭಾಷೆ, ರಾಜ್ಯದ ಸ್ವಾಯತ್ತತೆಗಳ ಮೇಲೆ ದಾಳಿಗೆ ತುರ್ತು ಪ್ರತಿರೋಧ ಬೇಕು

ಸಂಪಾದಕೀಯ

ಕರ್ನಾಟಕಕ್ಕೆ ಅಧಿಕೃತ ನಾಡ ಬಾವುಟ ಸೂಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 9 ಮಂದಿಯ ಸಮಿತಿ ರಚಿಸಿರುವುದು ಚರ್ಚೆಗೆ ಗ್ರಾಸವಾಗಿದೆ. ಇತ್ತೀಚೆಗೆ "ನಮ್ಮ ಮೆಟ್ರೊ", ರೈಲ್ವೇ, ಬ್ಯಾಂಕು ಮುಂತಾಥ ಹಲವೆಡೆ ಹಿಂದಿ ಹೇರಿಕೆಯ ವಿರುದ್ಧ ಆಕ್ರೋಶದ ಹಿನ್ನೆಲೆಯಲ್ಲಿ ಇದಕ್ಕೆ ರಾಜ್ಯದಲ್ಲಿ ಬೆಂಬಲ–ವಿರೋಧ ಎರಡೂ ವ್ಯಕ್ತವಾಗಿದೆ. ಚರ್ಚೆ ರಾಜ್ಯದಲ್ಲಿ ಮಾತ್ರವಲ್ಲ, ರಾ?ಷ್ಟ್ರೀಯ ಮಟ್ಟದಲ್ಲಿ ಕೂಡಾ ದೊಡ್ಡ ವಿವಾದ ಎಬ್ಬಿಸಿದೆ. ಬಿಜೆಪಿ ಕೇಂದ್ರೀಯ ಮತ್ತು ರಾಜ್ಯದ ನಾಯಕರು ಮತ್ತು ಸಂಘ ಪರಿವಾರದ ಪಡೆಗಳೂ ಬೆಂಬಲಿಗರು ಕರ್ನಾಟಕ ಸರಕಾರವನ್ನು ಬಡಿಯಲು ಇನ್ನೊಂದು ಬಡಿಗೆ ಸಿಕ್ಕಿತು ಎಂದು ಹಿಗ್ಗಿ, ಈ ವಿವಾದ ಬಳಸಿ ಕಾಂಗ್ರೆಸ್ ಮತ್ತು ಕರ್ನಾಟಕ ಸರಕಾರಕ್ಕೆ "ದೇಶದ್ರೋಹಿ' 'ಸಂವಿಧಾನ–ವಿರೋಧಿ" "ಕಾಶ್ಮೀರ ಮಾದರಿ ಪ್ರತ್ಯೇಕತಾವಾದಿ", ಎಂದೆಲ್ಲಾ ಲೇಬಲ್ಲು ಹಚ್ಚತೊಡಗಿದರು. ಈಗ ಬಿಜೆಪಿಯ ಮಾತುಗಳನ್ನೇ ಮಾರ್ದನಿಸುವ ಇಂಗ್ಲಿಷ್, ಹಿಂದಿ ಟಿವಿ/ಪತ್ರಿಕಾ ಮಾಧ್ಯಲಮಗಳಲ್ಲಿ, ಕರ್ನಾಟಕದ ನಾಡಬಾವುಟದ ವಿರುದ್ಧ ನಡೆದ ದಾಳಿ ಕನ್ನಡಿಗರನ್ನು ಕೆರಳಿಸಿದೆ. ಸಾಮಾಜಿಕ ಮಾಧ್ಯಲಮಗಳಲ್ಲಿ ಕರ್ನಾಟಕ ಸರಕಾರದ ಕ್ರಮದ ವಿರುದ್ಧ ಟ್ರೆಂಡಿಂಗ್ ನಲ್ಲಿ ಬಂದ #ಔಟಿಜಓಚಿಣುಠಟಔಟಿಜಈಟಚಿರ ಎಂಬ ಕೇಸರಿ ಪಡೆಗಳ, ಹುಸಿ ರಾಷ್ಟ್ರವಾದಿಗಳ ಮತ್ತು ಹಿಂದಿ ಭಾಷಾಂಧರ ಆಂದೋಲನದ ವಿರುದ್ಧ, ರಾಜ್ಯದಲ್ಲಿ ಪ್ರತಿ–ಚಳುವಳಿ ನಡೆದು, #ಒಥಿಖಣಚಿಣಜಒಥಿಈಟಚಿರ ಟ್ರೆಂಡಿಂಗ್ ನಲ್ಲಿ ಬಂತು.

ಮೊದಲನೆಯದಾಗಿ ಕೇಸರಿ ಪಡೆಗಳು ಮತ್ತು ಅವರ ಬೆಂಬಲಿಗ "ರಾಷ್ಟ್ರವಾದಿಗಳು" ನಾಡ ಬಾವುಟದ ಬಗ್ಗೆ ಮಾಡಿದ ಕೆಲವು ವಾದಗಳು ಮತ್ತು ಧೋರಣೆಗಳನ್ನು ವಿಶ್ಲೇಷಿಸಬಹುದು. ಅಧಿಕೃತವಾಗಿ ಅಥವಾ ಅನಧಿಕೃತವಾಗಿ ನಾಡ ಬಾವುಟ ಹೊಂದುವುದು "ದೇಶದ್ರೋಹ" ಅಥವಾ "ಪ್ರತ್ಯೇಕತಾವಾದಿ" ಖಂಡಿತಾ ಅಲ್ಲ. ಅಮೆರಿಕ, ಜರ್ಮನಿ, ಬ್ರಿಟನ್, ಸೋವಿಯೆಟ್ ಒಕ್ಕೂಟ ಮುಂತಾದ ದೇಶಗಳ ರಾಜ್ಯಗಳಿಗೆ ಪ್ರತ್ಯೇಕ ಬಾವುಟ ಇತ್ತು. ಅಥವಾ ಈಗಲೂ ಇದೆ. ಯುರೋಪಿಯನ್ ಫುಟ್ ಬಾಲ್ ಪಂದ್ಯದಲ್ಲಿ ಬ್ರಿಟನಿನ ರಾಜ್ಯಗಳಾಥ ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್ ಗಳು ಪ್ರತ್ಯೇಕ ತಂಡಗಳಾಗಿ ಸಹ ಸ್ಪರ್ಧಿಸುತ್ತವೆ ಎಂದೂ ನಮ್ಮ "ಕ್ರಿಕೆಟ್–ರಾಷ್ಟ್ರವಾದಿ"ಗಳು ಗಮನಿಸಬೇಕು. ಒಂದು ರಾಜ್ಯ ಅದರ ಚರಿತ್ರೆ, ಸಂಸ್ಕೃತಿ, ಅಸ್ಮಿತೆಗಳ ಸಂಕೇತವಾಗಿ ಒಂದು ಬಾವುಟ ಹೊಂದುವುದು ಜಗತ್ತಿನಾದ್ಯಂತ ಸಹಜ ಸಂಗತಿ.

ಭಾರತದಂತಹ ದೇಶದಲ್ಲಿ ಇದು ಇನ್ನೂ ಸಹಜವಾಗಬೇಕಾಗಿತ್ತು. ಯಾಕೆಂದರೆ ಭಾರತ ಬಹು–ರಾಷ್ಟ್ರೀಯತೆಗಳು ಇರುವ ಒಂದು ದೇಶ ಮತ್ತು ಪ್ರಭುತ್ವ. ಹಿಂದಿ ಒಂದೇ ರಾ?ಷ್ಟ್ರಭಾಷೆ ಅಲ್ಲ. ಎಲ್ಲಾ ಭಾರತದ ಭಾಷೆಗಳೂ ರಾಷ್ಟ್ರಭಾಷೆಗಳೇ. ಬಲಯುತವಾದ ಭಾಷಾವಾರು ರಾಜ್ಯಗಳ ಬಲವಾದ ಒಕ್ಕೂಟವೇ ನಮ್ಮ ದೇಶದ ಬುನಾದಿ. ಇದನ್ನೇ ಒಕ್ಕೂಟ ತತ್ವವಾಗಿ ನಾವೆಲ್ಲರೂ ಒಪ್ಪಿಕೊಂಡಿರುವುದು. ಭಾಷಾವಾರು ರಾಜ್ಯಗಳ ರಚನೆಯ ಒತ್ತಾಯ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿತ್ತು. ಕಾಂಗ್ರೆಸ್, ಕಮ್ಯುನಿಸ್ಟ್ ಮುಂತಾದ ರಾಷ್ಟ್ರೀಯವಾದಿ ಪಕ್ಷಗಳು (ಆಗ ಅಂತಹ ರಾಜಕೀಯ–ಆಡಳಿತ ಘಟಕಗಳು ಇಲ್ಲದಿದ್ದರೂ) ಭಾಷಾವಾರು ರಾಜ್ಯಗಳ ಆಧಾರದ ಮೇಲೆ ಘಟಕಗಳನ್ನು ಹೊಂದಿದ್ದವು, ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಭಾಷಾವಾರು ರಾಜ್ಯಗಳ ವಿಂಗಡಣೆ ಆದಾಗ ಆಗಲಿ, ಆ ಮೇಲಾಗಲಿ ರಾಜ್ಯಕ್ಕೆ ಒಂದು ಅಧಿಕೃತ ಬಾವುಟದ ಪ್ರಶ್ನೆ ಎಲ್ಲೂ ಎದ್ದಿರಲಿಲ್ಲ. ಅನಧಿಕೃತವಾಗಿಯೂ ಕರ್ನಾಟಕ ಬಿಟ್ಟರೆ ಇತರ ರಾಜ್ಯಗಳಲ್ಲಿ ಯಾವುದೇ ಬಾವುಟ ಹೊಂದಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಸಂವಿಧಾನ ಈ ಬಗ್ಗೆ ಏನೂ ಹೇಳುವುದಿಲ್ಲ. ರಾಜ್ಯ ಅಧಿಕೃತ ಭಾವುಟ ಹೊಂದಿರಬಾರದು ಎಂದೂ ಹೇಳುವುದಿಲ್ಲ. ಆದ್ದರಿಂದ ನಾಡ ಬಾವುಟದ ಬಗ್ಗೆ ಚರ್ಚೆಯೇ "ಸಂವಿಧಾನ–ವಿರೋಧಿ" ಎಂಬುದೂ ಸರಿಯಲ್ಲ.

ಇಂತಹ ಆಪಾದನೆಗಳನ್ನು ಮಾಡುತ್ತಿರುವ ಬಿಜೆಪಿ ರಾಜ್ಯ ಸರಕಾರದ ಮುಖ್ಯಮಂತ್ರಿಯಾಗಿದ್ದ ಡಿ.ವಿ. ಸದಾನಂದಗೌಡ 2012ರಲ್ಲಿ ಮಂಡಿಸಿದ್ದ ಬಜೆಟ್ನಲ್ಲಿ 'ನವೆಂಬರ್ 1 ರಂದು ರಾಜ್ಯದ ಎಲ್ಲ ಸರ್ಕಾರಿ ಕಚೇರಿ, ಶಾಲಾ ಕಾಲೇಜುಗಳಲ್ಲಿ ಕನ್ನಡ ಧ್ವಜಾರೋಹಣ ಕಡ್ಡಾಯ' ಎಂದು ಘೋಷಿಸಿದ್ದರು. ಅದಕ್ಕೆ ಪೂರಕವಾಗಿ ಸುತ್ತೋಲೆಯನ್ನೂ ಹೊರಡಿಸಲಾಗಿತ್ತು. ಹೈಕೋರ್ಟ್ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದ ಪ್ರಕಾಶ ಶೆಟ್ಟಿ ಎಂಬುವರು, 'ಕನ್ನಡ ಧ್ವಜವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಕೋರಿದ್ದರು. ಈ ಸಂಬಂಧ ವಿಚಾರಣೆ ಕೈಗೆತ್ತಿಕೊಂಡಿದ್ದ ಹೈಕೋರ್ಟ್, ಕನ್ನಡ ಧ್ವಜ ಅಧಿಕೃತವೇ ಎಂಬ ಬಗ್ಗೆ ಸ್ಪಷ್ಟನೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿತ್ತು. 2012ರ ಅಕ್ಟೋಬರ್ 4ರಂದು ಕೋರ್ಟ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದ ಜಗದೀಶ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ, 'ಕನ್ನಡ ಧ್ವಜಾರೋಹಣ ಕಡ್ಡಾಯಗೊಳಿಸಿದ ಆದೇಶ ವಾಪಸ್ ಪಡೆಯಲಾಗಿದೆ' ಎಂದು ಹೇಳಿತ್ತು. ಈಗ ರಾಜ್ಯ ಬಿಜೆಪಿ "ದೇಶದ್ರೋಹ", "ಪ್ರತ್ಯೇಕತಾವಾದಿ", "ಸಂವಿಧಾನ–ವಿರೋಧಿ" ಎಂದೆಲ್ಲಾ ಪ್ರಲಾಪ ಮಾಡುವುದು ಎರಡು–ನಾಲಗೆಗಳ ಮಾತಿನ ಪರಮಾವಧಿ.

ರಾಜ್ಯಗಳು ಬಲವಾಗಿರುವುದು ಮತ್ತು ಎಲ್ಲ ರಾಷ್ಟ್ರಭಾಷೆಗಳು ಶಿಕ್ಷಣದ , ನ್ಯಾಯಾಂಗದ, ಆಡಳಿತದ ಜನಜೀವನದ ವಿವಿಧ ಆಯಾಮಗಳಲ್ಲಿ ಹಾಗೂ ಎಲ್ಲಾ ಹಂತಗಳಲ್ಲಿ ಉಪಯೋಗಿಸುವುದು, ಉಪಯೋಗಿಸುವ ಸಾಮರ್ಥ್ಯವನ್ನು ಬೆಳಸುವುದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯವಾಗಿತ್ತು. ವಿವಿಧ ರಾಜ್ಯಗಳಲ್ಲಿ ಅಲ್ಲಿಯ ಉದ್ಯಮಗಳು ಬೆಳೆದು ಅಲ್ಲಿಯ ಜನರಿಗೆ ಕೆಲಸ ದೊರೆಯಲು ಇದರಿಂದ ಪ್ರಯೋಜನವಾಗುತ್ತಿತ್ತು. ಆದರೆ ಇದು ದೊಡ್ಡ ಕಾರ್ಪೋರೆಟ್ ಗಳು ಭಾರತಾದ್ಯಂತ ವಿಸ್ತರಿಸಿ ಬೃಹತ್ತಾಗಿ ಬೆಳೆಯಲು ದೊಡ್ಡ ಅಡ್ಡಿ ಎಂದು ಭಾವಿಸಿದುವು. ಈ ಕಾರ್ಪೊರೇಟ್ ಗಳ ಮರ್ಜಿ ಹಿಡಿದ ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ರಾಜ್ಯಗಳಿಗೆ ಸ್ವಾಯತ್ತ ಅಧಿಕಾರ ನೀಡಲಿಲ್ಲ. ಬದಲಾಗಿ ಇದ್ದ ಸ್ವಲ್ಪ ಅಧಿಕಾರವನ್ನು ಕಿತ್ತುಕೊಂಡವು , ಭಾಷಾ ಬೆಳವಣಿಗೆಯನ್ನೂ ಹತ್ತಿಕ್ಕಿದವು. ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳ ನೇತೃತ್ವದ ಕೇಂದ್ರ ಸರಕಾರಗಳು ಸತತವಾಗಿ ರಾಜ್ಯಗಳ ಅಧಿಕಾರಗಳನ್ನು ಮೊಟಕುಗೊಳಿಸುತ್ತಾ ನಡೆದಿವೆ. ರಾಜ್ಯಗಳ ಸ್ವಾಯತ್ತತೆಯ ಆರ್ಥಿಕ್ಕು ಅಡಿಪಾಯವನ್ನೇ ನಾಶ ಮಾಡಿದ ಯೋಜನಾ ಆಯೋಗದ ವಿಸರ್ಜನೆ ಕಾಂಗ್ರೆಸ್ ಆರಂಭಿಸಿ ಬಿಜೆಪಿ ಜಾರಿ ಮಾಡಿದ ಕ್ರಮ. ಮೋದಿ ಸರಕಾರ ಮುಂದುವರೆದು ಜಿ.ಎಸ್.ಟಿ. ಮೂಲಕ ರಾಜ್ಯಗಳ ಸ್ವಾಯತ್ತತೆಗೆ ಮಾರಣಾಂತಿಕ ಏಟು ಕೊಟ್ಟಿದೆ. ರೇಗಾ, ರೈತರ ಬೆಂಬಲ ಬೆಲೆ, ಐಸಿಡಿಎಸ್ ಗೆ ಅನುದಾನ ಮುಂತಾದ ಜನಕಲ್ಯಾಣ ಯೋಜನೆಗಳನ್ನು ಮಾಡಬಹುದಾದ ಅಧಿಕಾರ/ಸಾಮರ್ಥ್ಯಗಳನ್ನು ಕಿತ್ತುಕೊಂಡಿದೆ. ಹಿಂದಿ ಹೇರಿಕೆಯಲ್ಲೂ ಕಾಂಗ್ರೆಸ್, ಬಿಜೆಪಿ ಕೇಂದ್ರ ಸರಕಾರಗಳ ಧೋರಣೆಗಳಲ್ಲಿ ಯಾವುದೇ ವ್ಯತ್ಯಾಸಗಳು ಇರಲಿಲ್ಲ. ಕೇಂದ್ರ ಸರಕಾರದ ಇಲಾಖೆಗಳು, ಕೇಂದ್ರೀಯ ವಿದ್ಯಾಲಯಗಳು, ರೈಲ್ವೇ, ಬ್ಯಾಂಕುಗಳ ಮೂಲಕ ಹಿಂದೀ ಹೇರಿಕೆ ಸತತವಾಗಿ ನಡೆದಿದೆ. ಇವೆಲ್ಲದರಿಂದ ಆಕ್ರೋಶಕ್ಕೆ ಒಳಗಾದ ಕನ್ನಡಿಗರು ನಾಡ ಬಾವುಟದ ವಿವಾದಕ್ಕೆ ಭಾವನಾತ್ಮಕವಾಗಿ ಪ್ರತಿಕ್ರಿಯಿಸಿರುವುದು ಸಹಜವೇ ಆಗಿದೆ.

ರಾಜ್ಯ ಸರ್ಕಾರದ ಈ ಕ್ರಮ ರಾಜ್ಯಗಳ ಸ್ವಾಯತ್ತತೆ, ಭಾಷೆಯ ಬೆಳವಣಿಗೆ, ಹಿಂದಿ ಹೇರಿಕೆಯ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದ್ದು ಒಳ್ಳೆಯ ಬೆಳವಣಿಗೆಯೇ. ಯಾಕೆಂದರೆ ನಾಡ ಬಾವುಟ ಇವೆಲ್ಲದರ ಸಂಕೇತವಾಗಬಲ್ಲುದು. ಆದರೆ ರಾಜ್ಯಗಳ ಸ್ವಾಯತ್ತತೆ, ಭಾಷೆಯ ಬೆಳವಣಿಗೆ, ಹಿಂದಿ ಹೇರಿಕೆ ಬಗ್ಗೆ ನಿರ್ದಿಷ್ಟ ದೂರಗಾಮಿ ನೀತಿ, ಸ್ಪಷ್ಟ ಕಾರ್ಯಕ್ರಮ ಇಲ್ಲದೆ ಬರಿಯ ಬಾವುಟದ ಬೋರ್ಡುಗಳ ಬಗ್ಗೆ ಗುದ್ದಾಟ ಈ ನಿಟ್ಟಿನಲ್ಲಿ ಯಾವುದೇ ಪ್ರಗತಿಗೆ ಪೂರಕವಾಗದು.

ವಿಶ್ವ ಕನ್ನಡ ಸಮ್ಮೇಳನ ಸಂದರ್ಭದಲ್ಲಿ ಕನ್ನಡದ ಹಿರಿಯ ಮನಸ್ಸುಗಳು ಹೇಳಿದಂತೆ "ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಕನ್ನಡ ಭಾಷಾ ಬಳಕೆಯ ಪ್ರಮಾಣ ಮತ್ತು ಗುಣಮಟ್ಟಗಳೆರಡೂ ಅವನತಿಯ ಹಾದಿ ಹಿಡಿದಿವೆ. ಕನ್ನಡದ ಮಕ್ಕಳಿಗೆ ಕರ್ನಾಟಕದಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನಾದರೂ ಕನ್ನಡ ಮಾಧ್ಯಮದ ಮೂಲಕ ಒದಗಿಸಲಾಗದ ದುಃಸ್ಥಿತಿ ನಮ್ಮ ಸರ್ಕಾರಕ್ಕೆ ಎದುರಾಗಿದೆ. ಕರ್ನಾಟಕ ಸರ್ಕಾರ ಹೊರಡಿಸಿದ ಶಿಕ್ಷಣ ಮಾಧ್ಯಮ ಕುರಿತ ಆಜ್ಞೆಯನ್ನು, ಎರಡೂವರೆ ವರ್ಷಗಳ ಹಿಂದೆ ಸರ್ವೋಚ್ಚ ನ್ಯಾಯಾಲಯವು ಪ್ರಜೆಗಳ ಮೂಲಭೂತ ಹಕ್ಕಿನ ಹೆಸರಲ್ಲಿ ಅಸಿಂಧುಗೊಳಿಸಿದೆ. ಹಾಗಾಗಿ ಕನ್ನಡಿಗರನ್ನು ಪ್ರತಿನಿಧಿಸುವ ಕರ್ನಾಟಕ ಸರ್ಕಾರದ ಮೊದಲ ಆದ್ಯತೆ, ಈ ಸಾಂವಿಧಾನಿಕ ಸಂಕಷ್ಟದಿಂದ ಕನ್ನಡವನ್ನು ಹೇಗೆ ಪಾರು ಮಾಡುವುದು ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವುದು ಆಗಿರಬೇಕಿತ್ತು. ಆದರೆ ನ್ಯಾಯಾಲಯದ ತೀರ್ಪು ಬಂದ ಹೊಸತರಲ್ಲಿ, ಅದಕ್ಕೆ ಪರಿಹಾರ ರೂಪಿಸುವ ಪ್ರಯತ್ನಗಳ ಬಗ್ಗೆ ಔಪಚಾರಿಕ ಮಾತುಗಳನ್ನಾಡಿದ ಸರ್ಕಾರ ಈಗ ಕನ್ನಡಿಗರನ್ನು ಗಾಬರಿಪಡಿಸುವಂತಹ ಮೌನವನ್ನು ತಳೆದಿದೆ. ಕನ್ನಡ ಪ್ರಾಥಮಿಕ ಶಿಕ್ಷಣ ಎಂದರೆ ಕನ್ನಡ ಸಂಸ್ಕೃತಿಯ, ಪ್ರಜ್ಞೆಯ ಅಡಿಗಲ್ಲು ಇದ್ದಂತೆ. ಆದರೆ ಅದಕ್ಕೇ ಧಕ್ಕೆ ಒದಗಿರುವಾಗ ಆ ಬಗ್ಗೆ ಕಾಳಜಿಯನ್ನೇ ವಹಿಸದೆ ಸರ್ಕಾರ" ಬರಿಯ ಬಾವುಟ, ವಿಶ್ವ ಕನ್ನಡ ಸಮ್ಮೇಳನ ಮುಂತಾದ ಸಂಕೇತಗಳಲ್ಲಿ ಮುಳುಗಿದೆ. ಯೋಜನಾ ಆಯೋಗದ ವಿಸರ್ಜನೆ, ಆರ್ಥಿಕ ಅಧಿಕಾರಗಳ ಮೇಲೆ ಜಿ.ಎಸ್,ಟಿ.ಯ ಪ್ರಹಾರ, – ಇವುಗಳ ಬಗ್ಗೆ ಜನಜಾಗ್ರತಿ ಮೂಡಿಸದೆ ಬರಿಯ ಸಂಕೇತಗಳ ಬಗ್ಗೆ ಗುಲ್ಲೆಬ್ಬಿಸುವುದು ಬಿಜೆಪಿಯ ಹುಸಿ ರಾಷ್ಟ್ರಪ್ರೇಮದಂತೆ ಚುನಾವಣೆಗಾಗಿ ಹುಸಿ ಭಾಷಾಪ್ರೇಮ, ಹುಸಿ ಸ್ವಾಯತ್ತತೆ ಯ ಆಪಾದನೆಗೆ ಒಳಗಾಗುತ್ತದೆ.

ಭಾಷೆಯ ಬೆಳವಣಿಗೆ, ಹಾಗೂ ಸ್ವಾಯತ್ತತೆ ಮೇಲೆ ದಾಳಿ ಮತ್ತು ಹಿಂದಿ ಹೇರಿಕೆಗಳ ವಿರುದ್ಧ ಪ್ರತಿರೋಧಧ ನೀತಿಗಳನ್ನು ಕ್ರಮಗಳನ್ನು ಎತ್ತಿ ಹಿಡಿಯುವ ಚಳುವಳಿಯ ಸಂಕೇತವಾಗಿ ಮಾತ್ರ ಅಧಿಕೃತ ಅಥವಾ ಅನಧಿಕೃತ ನಾಡ ಬಾವುಟದ ಬಗ್ಗೆ ಅಭಿಮಾನ, ಅರ್ಥಪೂರ್ಣವಾಗುತ್ತದೆ, ಇಲ್ಲದಿದ್ದರೆ ಅದು ಬರಿಯ ಟೊಳ್ಳು ಸಂಕೇತವಾಗಿ ಉಳಿಯುತ್ತದೆ.

# ಕಾರಾಗೃಹದಲ್ಲಿನ ಕರಾಳ ಸತ್ಯಗಳು ಕಾಣದ ಹಿತಾಸಕ್ತಿಗಳು

**ಎಸ್.ವೈ. ಗುರುಶಾಂತ್**

ಆ ನೆಲದ ಕಾನೂನಿನ ಕಣ್ಣಲ್ಲಿ ವ್ಯಕ್ತಿಯೊಬ್ಬನ ಕೃತ್ಯ ಅಪರಾಧವೆಂದು ಪರಿಗಣಿಸಲ್ಪಟ್ಟಾಗ ಆತನಿಗೆ/ಆಕೆಗೆ ಶಿಕ್ಷೆಯನ್ನು ವಿಧಿಸುವ ಭಾಗವಾಗಿಯೇ ಜೈಲು ಶಿಕ್ಷೆ ವಿಧಿಸುವುದು ನಡೆಯುತ್ತಿರುವ ವಿದ್ಯಾಮಾನ. ಅಂ–ದರೆ ಜೈಲು ಒಂದೆಡೆ ಶಿಕ್ಷೆ ವಿಧಿಸುವ ದಂಡನೆಯ ಕೇಂದ್ರ. ಹಾಗೆಯೇ ಆಧುನಿಕವಾಗಿ ಚಿಂತನೆಗಳು ವಿಸ್ತಾರಗೊಂಡಂತೆ ಇದು ಖೈದಿಯೊಬ್ಬನ ಮನ ಪರಿವರ್ತನೆಗೆ ಕಾರಣವಾಗುವ 'ಚಿಕಿತ್ಸಾ' ಕೇಂದ್ರವೂ ಆಗಿದೆ ಅಥವಾ ಆಗಬೇಕಿದೆ ಎಂಬ ಆಶಯ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಜೈಲುಗಳ ಸ್ಥಿತಿ ಗತಿ, ವಿದ್ಯಾಮಾನಗಳನ್ನು ನೋಡಿದಾಗ ಬರುವ ಕಲ್ಪನೆ ಏನು?

ಒಂದು ದೇಶದ ಜೈಲುಗಳ ಪ್ರಮಾಣ, ಕೈದಿಗಳ ಸಂಖ್ಯೆ, ಅಪರಾಧದ ಸ್ವರೂಪಗಳನ್ನು ಗಮನಿಸಿದರೆ ಅದು ವ್ಯವಸ್ಥೆಯ ನೈಜ ಮುಖವನ್ನು, ದಮನ ಕಾಂಡವನ್ನೂ ಅನಾವರಣಗೊಳಿಸಬಲ್ಲುದು. 'ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಣ್ಣ ಪುಟ್ಟ ಕಳ್ಳರು ಜೈಲಿನಲ್ಲಿರುತ್ತಾರೆ, ಆದರೆ ದೊಡ್ಡ ಕಳ್ಳರು, ಲೂಟಿಗಾರರು ಹೊರಗೆ ಪ್ರತಿಷ್ಠಿತರಾಗಿ, ನಾಯಕರಾಗಿ ಅಧಿಕಾರ ಕೇಂದ್ರದಲ್ಲಿರುತ್ತಾರೆ' ಎಂಬುದು ಜನಪ್ರಿಯವಾದ ಮಾತು. (–ಮಾವೋ). ಈ ಮಾತು ಉದಾರೀಕರಣ, ಜಾಗತೀಕರಣದ ಈ ಅವಧಿಯಲ್ಲಿ ಒಂದಿಷ್ಟು ವಿಸ್ತಾರಗೊಂಡಿದೆ. ಆ 'ಪ್ರತಿಷ್ಠಿತ ಕಳ್ಳರೂ' ಸಾರ್ವಜನಿಕ ಒತ್ತಡ, ವರ್ಗಗಳೊಳಗಿನ ಕಿತ್ತಾಟಗಳ ಕಾರಣಗಳಿಂದಲೂ ಆಗಾಗ ಜೇಲಿಗೆ ಹೋಗಿ ಒಂದಿಷ್ಟು ದಿನ ಇದ್ದು ಬರುವ ಪ್ರಸಂಗಗಳೂ ನಡೆಯುತ್ತವೆ. ನಾಚಿಕೆಗೇಡಿನ ವಿಷಯವೆಂದರೆ ಇವರು ಅದನ್ನು ಅವಮಾನವೆಂದಾಗಲೀ, ಶಿಕ್ಷೆಯಿಂದ ಮನ ಪರಿವರ್ತನೆಯಾಯಿತೆಂದಾಗಲೀ ಭಾವಿಸದೇ ಅದೂ ಕೂಡ ಪ್ರತಿಷ್ಟೆಯ ವಿಷಯವೆಂದು ಪರಿಗಣಿಸುವ ಭಂಡತನ ಬೆಳೆದಿರುವುದು. ಆದ್ದರಿಂದಲೇ ಇಂತಹ ಕೋಮುಗಲಭೆಗಳ, ಗಣಿ–ಭೂಗಳ್ಳ ಕ್ರಿಮಿನಲ್‌ಗಳು, ಭ್ರಷ್ಟರೂ ಜಾಮೀನು ಪಡೆದು ಹೊರ ಬರುವಾಗ ನಡೆಸಿಕೊಳ್ಳುವ ಮೆರವಣಿಗೆ, ಚೇಲಾಗಳ ಸ್ವಾಗತದ ರೀತಿ ಹೇಸಿಗೆ ಹುಟ್ಟಿಸುತ್ತವೆ.

ಪ್ರಶ್ನೆ, ತೆಲಗಿ, ಯಡಿಯೂರಪ್ಪ, ಜನಾರ್ಧನ ರೆಡ್ಡಿ, ಈಗ ಶಶಿಕಲಾ ಇಂತಹ **ಪುಟ 4 ಕ್ಕೆ**

# ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಸಮರಶೀಲ ಹೋರಾಟಕ್ಕೆ ಮುಂದಾಗಿ – ವಿ.ಅಂಬರೀಶ್




ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಸಮರಶೀಲ ಹೋರಾಟಕ್ಕೆ ಮುಂದಾಗಿ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯಾಧ್ಯಕ್ಷರಾಧ ವಿ.ಅಂಬರೀಶ್ ಹೇಳಿದರು. ಶಿಕ್ಷಣ ರಾಷ್ಟ್ರೀಕರಣಕ್ಕಾಗಿ, ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ ಹಾಗೂ ಮಹದಾಯಿ, ಕೃಷ್ಣ ಏತ ನೀರಾವರಿ ಯೋಜನೆ ಜಾರಿಗಾಗಿ ಗಜೇಂದ್ರಗಡ ನಡೆದ ಎಸ್.ಎಫ್.ಐ ರಾಜ್ಯಮಟ್ಟದ ಅಧಯನ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಇಂದು ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹಕ್ಕುಗಳ ಮೇಲೆ ಧಾಳಿ ನಡೆಯುತ್ತಿದೆ, ಅಭಿಪ್ರಾಯ, ಹಾಗೂ ಅಹಾರದ ಹಕ್ಕನ್ನು ಕಿತ್ತುಕೊಳ್ಳುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ ಎಂದು ದೂರಿದ ಅವರು ಶಿಕ್ಷಣವನ್ನು ಕೇಂದ್ರ ಸರ್ಕಾರ ಕೇಸರೀಕರಣ ಮಾಡಲು ಹೊರಟಿದೆ ಆಮೂಲಕ ದೇಶವನ್ನು ವರ್ಣಾಶ್ರಮ ವ್ಯವಸ್ಥೆಗೆ ಒಯ್ಯುವ ಮೂಲಕ ಸಮಾನತೆ ಪ್ರತಿಪಾಧಿಸುವ ಸಂವಿಧಾನ ಆಶಯಗಳನ್ನ ಗಾಳಿಗೆ ತೂರಲಾಗುತ್ತಿದೆ. ಇಂದು ಕೆಲವು ಕೋಮುವಾದಿ ಸಂಘಟನೆಗಳು ಹಾಗೂ ಪಕ್ಷಗಳು ಹುಸಿ ದೇಶ ಪ್ರೇಮವನ್ನು ಮೆರೆಸಿ ಈ ದೇಶದ ಜನರ ನಿಜವಾದ ದೇಶ ಪ್ರೇಮವನ್ನು ದೇಶದ್ರೋಹಕ್ಕೆ ಹೋಲಿಸುತ್ತಿರುವುದು ಖಂಡನೀಯ. ಆಡಳಿತರೂಢ ಪಕ್ಷದ ನೀತಿಯನ್ನು ವಿರೋಧಿಸಿದವರು ದೇಶದ್ರೋಹಿಗಳು, ಆಡಳಿತರೂಢ ಪಕ್ಷದ ನೀತಿಯನ್ನು ಬೆಂಬಲಿಸುವವರು ದೇಶಪ್ರೇಮಿಗಳು ಎಂದು ಸರ್ಟಿಫಿಕೇಟನ್ನು ನೀಡುವುದನ್ನು ನೋಡಿದರೆ ಮುಂದೊಂದು ದಿನ ಇವರು ಹಿಟ್ಲರನಂತೆ ವರ್ತಿಸಬಹುದು ಎಂದು ಆತಂಕ ವ್ಯಕ್ತಪಡಿಸಿದ ಅವರು ಹುಸಿ ದೇಶ ಪ್ರೇಮದ ಬಗ್ಗೆ ಪ್ರಚಾರ ಮಾಡುತ್ತಿರುವವರ ವಿರುದ್ಧ ಹೋರಾಟ ನಡೆಸಿ ಈ ದೇಶದ ನಿಜವಾದ ದೇಶ ಪ್ರೇಮ ಜನಸಾಮಾನ್ಯರ ಅಭಿವೃದ್ಧಿಯಲ್ಲಿದೆ ಎಂದು ಹೇಳಿದರು. ಆದ್ದರಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿ ವಿರುದ್ದ ವಿದ್ಯಾರ್ಥಿಗಳು ಎಸ್.ಎಫ್.ಐ ನೇತೃತ್ವದಲ್ಲಿ ಸಮಾನ ಶಿಕ್ಷಣಕ್ಕಾಗಿ ಹಾಗೂ ನೀರಾವರಿ ಸಮಸ್ಯೆ ಪರಿಹಾರಕ್ಕಾಗಿ ತಾರ್ಕಿಕ ಅಂತ್ಯದ ಹೋರಾಟಕ್ಕೆ ಮುಂದಾಗ ಬೇಕೆಂದು ಕರೆ ನೀಡಿದರು.

ಇದಕ್ಕೂ ಮೊದಲು ರೈತ ಮುಖಂಡ ಕೂಡ್ಲೆಪ್ಪ ಗುಡಿಮನಿ ಮಾತನಾಡಿ ಮೋದಿಯವರು ಅಚ್ಚೆ ದಿನ್ ಬರುತ್ತೆ ಅಂತ ಹೇಳಿದ್ದರು. ಎಲ್ಲಿದೆ ಅಚ್ಚೇ ದಿನ್? ಯಾರಿಗೆ ಬಂದಿದೆ ಅಚ್ಚೆ ದಿನ್? ಎಂದು ಪ್ರಶ್ನಿಸಿದ ಅವರು ದೇಶ ಬರಗಾಲ ಕಂಡು ರೈತರು ತತ್ತರಿಸಿದ್ದಾರೆ. ಆದರೆ ಮೋದಿಯವರು ರೈತರ ಸಾಲ ಮನ್ನಾ ಮಾಡದೇ ಕಾರ್ಪೋರೇಟ್ ಕಂಪನಿಗಳ ಸಾಲ ಮನ್ನಾ ಮಾಡಿ ರೈತ ವಿರೋಧಿ ನೀತಿ ತಾಳುತ್ತದೆ ಎಂದು ಆರೋಪಿಸಿದರು.

ಈ ವೇಳೆ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ರಾಜ್ಯ ಉಪಾಧ್ಯಕ್ಷ ಅಮರೇಶ ಕಡಗದ,ಶಬ್ಬೀರ ಹವಾಲ್ದಾರ, ಎಂ.ಎಸ್.ಹಡಪದ, ಸಾಹಿತಿ ಬಿ.ಎ.ಕೆಂಚರೆಡ್ಡಿ ಪೀರು ರಾಠೋಡ, ಮಾರುತಿ ಚಿಟಗಿ, ಬಾಲುರಾಠೋಡ, ಫಯಾಜ ತೋಟದ, ಎಂ.ಬಿ. ಸೋಂಪೂರ, ಕರಿಯಮ್ಮ ಗುರಿಕಾರ, ಅಕ್ಕಮ್ಮ ರಾಠೋಡ, ಶಿವು ಚವ್ಹಾಣ ಸೇರಿದಂತೆ ಇತರರು ಇದ್ದರು.

**ಮಹಾಂತೇಶ ಹಡಪದ**

## ಕಾರಾಗೃಹದಲ್ಲಿನ ಕರಾಳ ಸತ್ಯಗಳು ಕಾಣದ...... ಪುಟ 3 ರಿಂದ

ವಿ.ವಿ.ಐ.ಪಿ. ಖೈದಿಗಳು ಜೇಲಿನಲ್ಲಿರುವಾಗಿ ಅವರು ಸಾಮಾನ್ಯ ಖೈದಿಗಳಂತೆಯೇ ಇದ್ದರೇ? ಎಲ್ಲರಿಗೂ ಸಿಗುವ ಕನಿಷ್ಠ ಸೌಲಭ್ಯ, ಕೆಲಸಗಳ ಪಾಲು ಅವರಿಗೂ ಸಿಗುತ್ತಿತ್ತೇ? ಅವರ ಐಶಾರಾಮಿ ಜೀವನ ಸಾಧ್ಯವಾಗುವುದು ಹೇಗೆ? ಅದರಲ್ಲಿ ಅಧಿಕಾರಿಗಳ ಸಿಬ್ಬಂದಿಗಳ ಪಾಲೆಷ್ಟು? ಜೈಲಿನಿಂದ ಹೊರ ಬಂದ ಅವರು ಮತ್ತೆ ಹಿಂದಿನ ರೀತಿಯಲ್ಲೇ ಗುಡುಗುವುದು, ಅದೇ, ಅಂತಹುದೇ ದಂಧೆ ಮುಂದುವರಿಸುವುದನ್ನು ನೋಡಿದರೆ ಜೈಲು ಇವರಿಗೆ ಯಾವ ಪರಿವರ್ತನೆಯನ್ನೂ ತಂದಿಲ್ಲ ಎಂಬುದನ್ನು ಖಾತ್ರಿ ಪಡಿಸುತ್ತದೆ. ಕನಿಷ್ಠ ನಿಯಮಗಳನ್ನು ಪಾಲಿಸಿದ್ದರೆ ಕೊಂಚ ಬದಲಾವಣೆಯನ್ನು ಈ ಮನುಷ್ಯರಲ್ಲಿ ನಿರೀಕ್ಷಿಸಬಹುದಿತ್ತೇನೋ!

ಇರಲಿ, ಹಾಲಿಯಾಗಿ ಇಂತಹ ವಿ.ವಿ.ಐ.ಪಿ.ಗಳಿಗೂ, ಜೇಲಿನ ಉನ್ನತ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನಡುವೆ ನಡೆದಿರುವ ವಿದ್ಯಾಮಾನಗಳು, ವಿವಾದಗಳು, ಘರ್ಷಣೆಯ ಪ್ರಸಂಗಗಳು ಕರ್ನಾಟಕದ ಜನರ ಮುಂದಿದೆ. ಹೊರ ಪ್ರಸಂಗದಲ್ಲಿ ಇದು ಕಾರಾಗೃಹದ ಇಬ್ಬರು ಡಿ.ಜಿ.ಪಿ. ಅಧಿಕಾರಿಗಳಾದ ಹೆಚ್.ಎನ್.ಸತ್ಯನಾರಾಯಣರಾವ್ ಮತ್ತು ಡಿ.ರೂಪಾರವರ ನಡುವಿನ ಜಗಳ ಎಂಬಂತೆ ಕಂಡರೂ ಒಳ ವಿದ್ಯಾಮಾನಗಳು ಅದನ್ನೂ ಮೀರಿವೆ. 2017ರ ಜುಲೈ 10 ರಂದು ರಾಜ್ಯ ಸರಕಾರದ ಗೃಹ ಕಾರ್ಯದರ್ಶಿ, ಭ್ರಷ್ಟಾಚಾರ ನಿಗ್ರಹ ದಳ ಹಾಗೂ ಪೋಲೀಸ್ ಮಹಾ ನಿರ್ದೇಶಕರಿಗೆ ಡಿ.ರೂಪಾರವರು ಪರಪ್ಪನ ಅಗ್ರಹಾರ ಕೇಂದ್ರಕಾರಾಗೃಹದಲ್ಲಿ ನಡೆದಿರುವ ಅಕ್ರಮ, ಅವ್ಯವಹಾರಗಳ ಕುರಿತುವರದಿ ಸಲ್ಲಿಸಿದ್ದಾರೆ. ಅದರಲ್ಲಿ ಕೈದಿಗಳಿಗೆ ಹೊರಗಿನಿಂದ ಗಾಂಜಾ, ಮುಂತಾದ ಮಾದಕ ವಸ್ತುಗಳ ಸರಬರಾಜಾಗುತ್ತಿದೆಯೆಂದೂ, 25 ಜನರನ್ನು ಪರೀಕ್ಷಿಸಿದಾಗ 18 ಜನರಲ್ಲಿ ಬಾರ್ಬಿಟುರೇಟ್ಸ್ ಮತ್ತು ಬೆಂಜೋಡಿಯಜೈಪೈನ್ ಅಂಶಗಳಿರುವುದು ಪತ್ತೆಯಾಗಿದೆ. ಕಾರಾಗೃಹದ ಅಧೀಕ್ಷಕ ಕೃಷ್ಣಕುಮಾರ್‌ಗೆ ಪತ್ರ ಬರೆದಿದ್ದರೂ ಕ್ರಮ ವಹಿಸಿಲ್ಲ ಎಂಬುದು ಒಂದು. ಎರಡನೆಯದಾಗಿ, ವೈದ್ಯಕೀಯ ದಾಖಲಾಕೇಂದ್ರದ ಉಸ್ತುವಾರಿಯನ್ನು ನೇಮಕಗೊಂಡ ವಾರ್ಡನ್ ನೋಡಿಕೊಳ್ಳುವುದರ ಬದಲಾಗಿ ಖೈದಿಯೊಬ್ಬರಿಗೆ ವಹಿಸಲಾಗಿದ್ದು ಹಲವಾರು ವೈದ್ಯಕೀಯ ದಾಖಲೆಗಳು ವಾಯುವಾಗಲು ಕಾರಣವಾಗಿದೆ ಎಂಬುದು. ಮಹಿಳಾ ನರ್ಸ್ ಜೊತೆ ಪುರುಷ ಖೈದಿಯೊಬ್ಬನ ದುರ್ವರ್ತನೆ, ವೈದ್ಯರಿಗೆ ಬೆದರಿಕೆ ಬಗ್ಗೆ ದೂರು ನೀಡಿದರೂ ಕ್ರಮವಿಲ್ಲ ಎಂಬುದು. ಮಾನಸಿಕ ಅಸ್ವಸ್ತರಿಗೆ ನೀಡುವ ಔಷಧಿಗಳನ್ನು ಇತರೆ ಖೈದಿಗಳು ಸೇವಿಸುವ ವಿಷಯವೂ ಅಲ್ಲಿದೆ.

ಇದಲ್ಲದೇ ಇಲ್ಲಿ ಮತ್ತೊಂದು ಮುಖ್ಯ ಆರೋಪವೆಂದರೆ ತಮಿಳುನಾಡಿನ ಎ.ಐ.ಎ.ಡಿ.ಎಂ.ಕೆ. ಪಕ್ಷದ ಪ್ರಧಾನ ಕಾರ್ಯದರ್ಶಿ ವಿ.ಕೆ.ಶಶಿಕಲಾ ರವರಿಗೆ ನೀಡಲಾದ ಕೋಣೆಯಲ್ಲಿ ಸಂಚಾರಿ ಅಡುಗೆ ಸೌಲಭ್ಯ ಕಲ್ಪಿಸಿ, ಅಡುಗೆ ಮಾಡಲು ಮಹಿಳಾ ಖೈದಿಯನ್ನು ನೇಮಿಸಿರುವುದು ಮತ್ತು ಅನೇಕರು ಭೇಟಿ ಮಾಡಲು ಅವಕಾಶ ನೀಡಿರುವುದು ಎಂಬ ಆರೋಪವೂ ಸೇರಿದೆ. ಇದಕ್ಕಾಗಿ 2 ಕೋಟಿ ಲಂಚವನ್ನೂ ಅಧಿಕಾರಿ ಪಡೆದಿದ್ದಾರೆ ಎಂಬುದು.

ಇದಕ್ಕೆ ಪ್ರತಿಕ್ರಿಯಿಸಿದ ಮತ್ತೊಬ್ಬ ಡಿ.ಜಿ.ಪಿ. ಸತ್ಯನಾರಾಯಣರಾವ್ ಈ ವರದಿ ನಿರಾಧಾರ ಮತ್ತು ತಾವು ಡಿ.ರೂಪಾರವರು ಅನುಸರಿಸಬೇಕಾದ ನಿಯಮಾವಳಿಗಳನ್ನು ಪಾಲಿಸದೇ ಇರುವುದು ಮತ್ತು ಮುಖ್ಯಮಂತ್ರಿಗಳು ಕರೆದ ಉನ್ನತ ಮಟ್ಟದ ಪೋಲೀಸ್ ಅಧಿಕಾರಿಗಳ ಸಭೆಗೆ ಗೈರು ಹಾಜರಾದ ಬಗ್ಗೆ ಕಾರಣ ಕೇಳಿ ಪತ್ರ ಬರೆದ ಬಳಿಕವಷ್ಟೆ ಇವರು ಡಿ.ಜಿ.ಯವರಿಗೆ ಬರೆದಿದ್ದಾರೆ ಎಂದಿದ್ದಾರೆ.

ಕಾರಾಗೃಹದಲ್ಲಿನ ವಿದ್ಯಾಮಾನಗಳನ್ನು ಗಮನಿಸುವವರಿಗೆ ಈ ಇಬ್ಬರ ಮಾತುಗಳಲ್ಲಿ ಸತ್ಯ ಇಲ್ಲವೆಂದು ಹೇಳಲಾಗುವುದಿಲ್ಲ. ರೂಪಾ ಹೇಳಿರುವ ಎಲ್ಲಾ ವಿಷಯಗಳೂ ಇಂದಲ್ಲ ಇದು ಜೈಲು ಆರಂಭಿಸಿದಾಗಿನಿಂದಲೂ ನಡೆದುಕೊಂಡು ಬಂದಿರುವ ಸಂಗತಿಗಳೇ ಆಗಿವೆ ಎನ್ನಬಹುದು. ಇಲ್ಲಿ ರಾಜಕಾರಣಿ ಖೈದಿಗಳಿಗೆ ಮಾತ್ರವಲ್ಲ, ಕುಖ್ಯಾತ ರೌಡಿಗಳು, ಶ್ರೀಮಂತ ಖೈದಿಗಳಿಗೂ ಸರ್ವ ಭೋಗ ಸವಿಗಳನ್ನು ಜೈಲಿನ ಅಧಿಕಾರಿಗಳು ಮಾಡಿಕೊಡುತ್ತಾರೆ. ಒಬ್ಬ ಖೈದಿಯನ್ನು ಮಾತನಾಡಿಸಲೂ ಸಹ ಒಂದಿಷ್ಟು ಹಣವನ್ನು ಸಾಮಾನ್ಯರೂ ತೆರಬೇಕಿದೆಯೆಂದರೆ ಅಲ್ಲಿನ ಭ್ರಷ್ಟಾಚಾರದ ಸ್ವರೂಪ ಏನೆಂದು ಅರ್ಥವಾದೀತು. ಇಂತಹ ಅವಕಾಶಗಳನ್ನು ಆಡಳಿತದಲ್ಲಿರುವ, ವಿರೋಧ ಪಕ್ಷಗಳೂ ಆಗಿರುವ ಬಹುತೇಕ ಎಲ್ಲಾ ಅಧಿಕಾರ ಕೇಂದ್ರಿತ ಪಕ್ಷಗಳು ಬಯಸುತ್ತವೆ. ಇದಿಲ್ಲದಿದ್ದರೆ ತಮ್ಮ ಹಾಗೂ ತಮ್ಮ ಬೆಂಬಲಿಗ ಅಪರಾಧಿಗಳ ಹಿತಕಾಯಲು ಸಾಧ್ಯವಿಲ್ಲ. ಹೀಗಾಗಿ ಅವರೆಲ್ಲಾ ಅದನ್ನೇ ನಿರೀಕ್ಷಿಸುತ್ತಾರೆ ಹಾಗೂ ಅಂತಹವರನ್ನು ನೇಮಿಸುತ್ತಾರೆ. ಎಷ್ಟೋ ಕ್ರಿಮಿನಲ್‌ಗಳಿಗೆ ಜೈಲು ತಲೆ ಮರೆಸಿಕೊಳ್ಳುವ ಆಶ್ರಯತಾಣವೂ ಹೌದು. ಅದಕ್ಕಾಗಿ ಅಪಾರವಾದ ಹಣದ ಹೊಳೆ ಹರಿಯುತ್ತದೆ. ಎಷ್ಟೆಲ್ಲಾ ಸುಧಾರಣೆಯ ವರದಿಗಳು ಬಂದರೂ ಅವು ಸುಧಾರಿಸದೇ ಇರಲು ಇದೂ ಮುಖ್ಯ ಕಾರಣ. ಕರ್ನಾಟಕದ ಬೆಂಗಳೂರು, ಮಂಗಳೂರು, ಬೆಳಗಾವಿ ಜೈಲಿನೊಳಗೇ ಖೈದಿಗಳ ಹತ್ಯೆಗಳೂ ನಡೆದು ಹೋಗುತ್ತವೆ ಎಂದರೆ ಸ್ಥಿತಿ ಎಂತಹ ಗಂಭೀರ ಎಂಬುದನ್ನು ಅರಿಯಬಹುದು.

ವಿಶೇಷವಾಗಿ ರೂಪಾರವರೇ ಅಧಿಕಾರದಲ್ಲಿದ್ದಾಗಲೇ ನಡೆದ ಘಟನೆಗಳೂ ಕೂಡ ಆಗಿವೆ. ಅಂದರೆ ಇದರಲ್ಲಿ ರೂಪಾರವರು ತಮ್ಮ ಪಾಲೇನೂ ಇಲ್ಲಎಂದು ನಿರಾಕರಿಸಲೂ ಸಾಧ್ಯವಿಲ್ಲ. ಪಾಲು ಇದ್ದೇ ಇದೆ. ಹಾಗಾದರೆ ಅರೋಪ, ಪ್ರತ್ಯಾರೋಪಗಳಲ್ಲಿ ಸತ್ಯ ಏನಿರಬಹುದು? ರೂಪಾ ಇಲಾಖಾ ಅಧಿಕಾರಿಗಳಿಗೆ ವರದಿ ನೀಡಿ ಮುಂದಿನ ಕ್ರಮಕ್ಕೆ ಬರುವ ಆದೇಶಕ್ಕೆ ಕಾಯುವ ಬದಲು ದಿಢೀರನೇ ಮಾಧ್ಯಮಗಳ ಮುಂದೆ ಈ ವಿಷಯವನ್ನು ಕೊಂಡೊಯ್ದಿದ್ದರಲ್ಲಿ ಯಾವ ಹಿತಾಸಕ್ತಿಗಳು ಇವೆ? ದುರಂತವೆಂದರೆ ಈ ಇಬ್ಬರು ಪೋಲೀಸ್ ಅಧಿಕಾರಿಗಳೂ ತಾವು ಹೊಡೆದಾಡುವುದಿರಲಿ, ಖೈದಿಗಳನ್ನೇ ವಿಭಜಿಸಿ ಹೊಡೆದಾಟಕ್ಕೆ ಇಳಿಸಿದ್ದಾರೆ! ಇದನ್ನು ಯಾರಾದರೂ ಸಹಿಸಲಾದೀತೆ?

ಈ ಇಬ್ಬರು ಉನ್ನತ ಪೋಲೀಸ್ ಅಧಿಕಾರಿಗಳ ನಡುವಿನ ಭಿನ್ನಾಭಿಪ್ರಾಯಗಳು ಅಲ್ಲಿನ ಸಂಗತಿಗಳನ್ನು ಹೊರತಂದಿರುವುದರಲ್ಲಿ ಕಾರಣ ಇವೆ. ಆದರೆ ಈ ಭಿನ್ನಾಭಿಪ್ರಾಯಗಳು ಯಾಕೆ ಉಂಟಾದವು? ಮತ್ತು ಎಲ್ಲಾ ಮುಗಿದ ಮೇಲೆಯೇ, ಈಗಲೇ ಯಾಕೆ ಬಂದವು? ಚುನಾವಣೆ ಹತ್ತಿರವಾಗುತ್ತಿರುವ ಈ ಅವಧಿಯಲ್ಲಿ ನ್ಯಾಯ ಎತ್ತಿ ಹಿಡಿಯಲು ಎಂಬುದನ್ನು ಅಷ್ಟು ಸುಲಭವಾಗಿ ಒಪ್ಪುವುದು ಕಷ್ಟ. ಎರಡನೆಯದು ಶಶಿಕಲಾ ಪ್ರಕರಣ ಹೊರ ಬಂದಿರುವುದರ ಹಿಂದೆ ಒಂದು ರಾಜಕೀಯ ಷಡ್ಯಂತ್ರವೂ ಇಲ್ಲದಿಲ್ಲ ಎನಿಸುತ್ತದೆ. ಜಯಲಲಿತಾ ಸಾವಿನ ನಂತರ ಇಡೀ ತಮಿಳುನಾಡು ರಾಜಕೀಯವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಬಿ.ಜೆ.ಪಿ. ಮಾಡಿದ ಪ್ರಯತ್ನಗಳು ಅಷ್ಟಿಷ್ಟಲ್ಲ. ಅದಕ್ಕೆ ಮಣಿಯದೇ ಉಳಿದುಕೊಳ್ಳಲು ಮುಂದಾದ ಶಶಿಕಲಾ ರವರನ್ನು ಮುಖ್ಯಮಂತ್ರಿಯನ್ನಾಗಿಸದೇ ಇರುವ ಕೇಸ್‌ಗಳನ್ನು ಬಳಸಿ ಜೈಲಿಗೆ ತಳ್ಳಿರುವುದರಲ್ಲಿಯೂ ಕೇಂದ್ರ ಹಾಗೂ ರಾಜ್ಯ ನಾಯಕರ ಪಾತ್ರ ಅಲ್ಲಗೆಳೆಯುವಂತಿಲ್ಲ. ಇಗಲೂ ಬಹುಶಃ ಎ.ಐ.ಎ.ಡಿ.ಎಂ.ಕೆ. ಪ್ರಮುಖರು ಶಶಿಕಲಾರವರನ್ನು ಜೈಲಿನಲ್ಲಿ ಭೇಟಿ ಮಾಡಿ ಮಾತುಕತೆ ನಡೆಸುವ ಪರಿಪಾಠ ಇರಬಹುದು. ಇದನ್ನು ತಪ್ಪಿಸುವುದು ಈಗಿನ ಪ್ರಕರಣದಲ್ಲಿ ಬಹು ಮುಖ್ಯ ಭಾಗ. ಇಂತಹ ಆಪ್ತ-ಗುಪ್ತ ಸಮಾಲೋಚನೆಗಳು ಯಡಿಯೂರಪ್ಪನವರು, ನಾಯ್ಡುರವರು, ರೆಡ್ಡಿಯವರೂ ಇದ್ದಾಗಲೂ ನಡೆದಿದ್ದವು. ನಡೆಯುತ್ತಲೇ ಇರುತ್ತವೆ. ಶಶಿಕಲಾ ಪ್ರಕರಣವೂ ಹಾಗೆ. ಅಂತೂ ಅಧಿಕಾರಿಗಳಿಗೆ ಲಂಚ, ಆಮಿಷ ಇಲ್ಲದೇ ಇವು ಸಾಧ್ಯವಿಲ್ಲ ತಾನೇ! ಇವೆಲ್ಲಾ ಗೊತ್ತಿರುವುದರಿಂದಲೇ ಯಡಿಯೂರಪ್ಪ ಇತ್ಯಾದಿ ವಿರೋಧ ಪಕ್ಷಗಳ ನಾಯಕರು, ಮಾಡುವುದನ್ನು ಮಾಡುತ್ತಾ, ಬಾಯಿ ಮುಚ್ಚಿ ಪ್ರಹಸನ ನೋಡುತ್ತಿರುವುದು.

ಇವೆಲ್ಲವನ್ನೂ ಹಿನ್ನೆಲೆಯಾಗಿಟ್ಟುಕೊಂಡು ನೋಡಿದರೆ ಡಿಐಜಿ ರೂಪಾರವರು ಎತ್ತಿದ ಪ್ರಶ್ನೆಗಳಲ್ಲಿ ನಿಜಾಂಶ ಇರಬಹುದಾದರೂ ಮಾಧ್ಯಮ ಮುಂತಾಗಿ ಸುದ್ದಿ ಮಾಡಿದ್ದು ನೋಡಿದರೆ ಅವರು ಮತ್ತೊಬ್ಬ ನಿವೃತ್ತ ಡಿ.ವೈ.ಎಸ್.ಪಿ. ಅನುಪಮಾ ಶೆಣೈ ಆಗಲು ಹೊರಟಂತಿದೆ! ರಾಜ್ಯ ಸರಕಾರ ಅವರಿಗೆ ನೋಟೀಸ್ ನೀಡಿರುವುದು ಅಸಮಂಜಸವೇನಲ್ಲ.

ಆದರೆ ಈ ಎಲ್ಲಾ ಅಂಶಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಪ್ರತಿಯೊಂದು ಆರೋಪದ ಬಗ್ಗೆಯೂ ಕೂಲಂಕುಶವಾಗಿ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ಕಾರಾಹೃಗದಲ್ಲಿರುವ ಕೈದಿಗಳ ಪಾಡು ನರಕ ಸದೃಶ್ಯವಾಗಿದೆ. ಅವರು ಅನೇಕ ಬಾರಿ ಕನಿಷ್ಠ ಸೌಲಭ್ಯ ಮತ್ತು ಘನತೆಯಿಂದ ಇರಗೊಡಲು, ಮಾನವ ಹಕ್ಕುಗಳನ್ನು ಸಂರಕ್ಷಿಸಲು ಮಾಡಿದ ಮನವಿಗಳು ಕಾಲ ಕಸವಾಗಿವೆ. ಮಹಿಳಾ ಖೈದಿಗಳನ್ನು ಲೈಂಗಿಕವಾಗಿ ಶೋಷಿಸಲಾಗುತ್ತಿರುವ ದೂರುಗಳನ್ನೂ ಪರಿಗಣಿಸುತ್ತಿಲ್ಲ. ಎಂತಹ ಸ್ಥಿತಿಯಿದು? ಎಲ್ಲವನ್ನು ಗಂಭೀರವಾಗಿ ಪರಿಗಣಿಸಿ ಸರಿಪಡಿಸಲು ತುರ್ತುಕ್ರಮ ವಹಿಸಬೇಕು. ●

# ಮೂಡಬಿದ್ರಿಯಲ್ಲಿ ಬೀಡಿ ಕಾರ್ಮಿಕರ 9ನೇ ರಾಜ್ಯ ಸಮ್ಮೇಳನ ಸಿದ್ಧತೆ

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ (ಸಿಐಟಿಯು) ತನ್ನ 9ನೇ ರಾಜ್ಯ ಸಮ್ಮೇಳನವನ್ನು ಬರುವ ಜುಲಾಯಿ 24 ಮತ್ತು 25 ರಂದು ಮೂಡಬಿದ್ರೆಯ ಸಮಾಜ ಮಂದಿರದಲ್ಲಿ ಹಮ್ಮಿಕೊಂಡಿದೆ. ಸಮ್ಮೇಳನದ ಯಶಸ್ಸಿಗಾಗಿ ಕೆ.ಯಾದವ ಶೆಟ್ಟಿ ಗೌರವಾಧ್ಯಕ್ಷರಾಗಿ, ರಮಣಿ ಮೂಡಬಿದರೆ ಅಧ್ಯಕ್ಷರಾಗಿ ರಚನೆಯಾಗಿರುವ ಸಮ್ಮೇಳನದ ಸಮಿತಿಯು ಸಮ್ಮೇಳನವನ್ನು ಯಶಸ್ವಿಗೊಳಿಸಲು ಭಾರೀ ಸಿದ್ಧತೆ ನಡೆಸುತ್ತಿದೆ.

ಆಲ್ ಇಂಡಿಯಾ ಬೀಡಿ ವರ್ಕರ್ಸ್ ಫೆಡರೇಶನ್ (ಸಿಐಟಿಯು) ನ್ನಿನ ಪ್ರಧಾನ ಕಾರ್ಯದರ್ಶಿ ಕಾ|ದೇವಾಶೀಸ್ ರಾಂಯ್ ಸಮ್ಮೇಳನವನ್ನು ಉದ್ಘಾಟಿಸಲಿರುವರು. ಕರ್ನಾಟಕ ರಾಜ್ಯ ಸಿಐಟಿಯು ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಕಾರ್ಯದರ್ಶಿ ಸೈಯ್ಯದ್ ಮುಜೀಬ್, ದ.ಕ.ಜಿಲ್ಲಾ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಹಿರಿಯ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್, ಸಿಐಟಿಯು ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮುಖ್ಯ ಅತಿಥಿಗಳಾಗಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿರುವರು. ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಉಪಾಧ್ಯಕ್ಷರಾದ ಪದ್ಮಾವತಿ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಲಿರುವರು.

ರಾಜ್ಯದಲ್ಲಿ 8 ಲಕ್ಷ ಬೀಡಿ ಕಾರ್ಮಿಕರು ಬೀಡಿ ಉದ್ದಿಮೆಯ ಬೆಳವಣಿಗೆಗೆ ತಮ್ಮ ದುಡಿಮೆ ಮೂಲಕ ಕೊಡುಗೆ ನೀಡುತ್ತಿದ್ದಾರೆ. ಕರ್ನಾಟಕ ಬೀಡಿ ಕಾರ್ಮಿಕ ಫೆಡರೇಶನ್ (ಸಿಐಟಿಯು), ಬೀಡಿ ಕಾರ್ಮಿಕರ ಸವಲತ್ತುಗಳಿಗಾಗಿ ನಡೆಸಿರುವ ಹೋರಾಟಗಳಿಗೆ ನೇತೃತ್ವ ನೀಡುತ್ತಾ ಬಂದಿದೆ. ಕನಿಷ್ಟ ಕೂಲಿ, ತುಟ್ಟಿಭತ್ತೆ, ಬೋನಸ್, ರಜಾಸಂಬಳ, ಭವಿಷ್ಯನಿಧಿ, ಪಿಂಚಣಿ ಇತ್ಯಾದಿಗಳು ಹಾಗೂ ಕಾರ್ಮಿಕ ಕಲ್ಯಾಣ ನಿಧಿಯಿಂದ ದೊರಕುವ ಸವಲತ್ತುಗಳನ್ನು ಕಾರ್ಮಿಕರು ಪಡೆಯಲು ಶಕ್ತಿ ಮೀರಿ ದುಡಿದಿದೆ.

ಆದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕಾರ್ಮಿಕರ ಹಿತವನ್ನು ಕಡೆಗಣಿಸಿ, ಕೋಟ್ಪಾ ಮತ್ತಿತರ ಕಾಯ್ದೆಗಳನ್ನು ಜಾರಿಗೊಳಿಸುತ್ತಿರುವುದರಿಂದ ಬೀಡಿ ಉದ್ದಿಮೆ ಬಿಕ್ಕಟ್ಟಿಗೆ ಸಿಲುಕಿದೆ. ಮಾಲಿಕರು ಕಾರ್ಮಿಕರಿಗೆ ನೀಡಬೇಕಾದ ಹೆಚ್ಚುವರಿ ತುಟ್ಟಿಭತ್ತೆಯನ್ನು 2 ವರ್ಷಗಳಿಂದ ನೀಡಿರುವುದಿಲ್ಲ. ಕಾರ್ಮಿಕ ಕಲ್ಯಾಣ ಮಂಡಲಿಯಲ್ಲಿ ನಿಧಿಯ ಕೊರತೆಯನ್ನು ಸರಕಾರಗಳು ಉಂಟು ಮಾಡಿ, ಸಕಾಲದಲ್ಲಿ ಸವಲತ್ತುಗಳು ಕಾರ್ಮಿಕರಿಗೆ ಸಿಗದಂತಾಗಿದೆ. ಕೋಟ್ಪಾ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತಿರುವ ಸರಕಾರ, ಉದ್ಯೋಗ ಕಳಕೊಳ್ಳಲಿರುವ ಬೀಡಿ ಕಾರ್ಮಿಕರಿಗೆ ಪುನರ್ವಸತಿ ಹಾಗೂ ಪರಿಹಾರದ ಬಗ್ಗೆ ಮಾತನಾಡುತ್ತಿಲ್ಲ. ಈ ಹಿನ್ನಲೆಯಲ್ಲಿ ಸಮ್ಮೇಳನದ ಭಾಗವಾಗಿ ಜುಲಾಯಿ 24 ರ ಅಪರಾಹ್ನ 3 ಗಂಟೆಗೆ "ಬೀಡಿ ಉದ್ದಿಮೆ ಮತ್ತು ಕಾರ್ಮಿಕರ ಸಮಸ್ಯೆಗಳು" ಎಂಬ ವಿಷಯದ ಕುರಿತು ವಿಚಾರ ಸಂಕಿರಣವನ್ನು ಇರಿಸಿಕೊಳ್ಳಲಾಗಿದೆ.

**– ವಾಸುದೇವ ಉಚ್ಚಿಲ**

# ಧರ್ಮ ರಕ್ಷಣೆಗಿಂತ ದೊಡ್ಡ ಸಮಸ್ಯೆಗಳಿವೆ–ಯಾದವ ಶೆಟ್ಟಿ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರು ಧರ್ಮ ರಕ್ಷಣೆಗಿಂತಲೂ ಮಿಗಿಲಾಗಿ ವಸತಿ, ಆರೋಗ್ಯ, ಉದ್ಯೋಗದಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಆಡಳಿತ ನಡೆಸುವವರು ಮತ್ತು ಧರ್ಮದ ಹೆಸರಿನಲ್ಲಿ ಹಿಂಸೆಗೆ ಪ್ರಚೋದಿಸುವವರು ನೈಜ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದು ಕರ್ನಾಟಕದ ಪ್ರಾಂತ ರೈತ ಸಂಘದ ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು ಹೇಳಿದರು. ಅವರು ನಗರದ ಸರಕಾರಿ ನೌಕರರ ಸಭಾಂಗಣದಲ್ಲಿ ಬಾನುವಾರ ನಡೆದ ಮಂಗಳೂರು ನಗರದ ನಿವೇಶನ ರಹಿತರ 3 ನೇ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಮುಂದುವರಿದು ಅವರು ಜಿಲ್ಲೆಯಲ್ಲಿ ವಸತಿ ಇಲ್ಲದೆ ಬದುಕುತ್ತಿರುವ ಸಾವಿರಾರು ಮಂದಿ ಇದ್ದಾರೆ. ಉದ್ಯೋಗ, ಆರೋಗ್ಯದ ಸಮಸ್ಯೆಗಳಿಂದ ಬಾದಿತರಾದವರೂ ಇದ್ದಾರೆ. ಆದರೆ ಕೆಲವರು ಧರ್ಮ ರಕ್ಷಣೆಯ ಹೆಸರಿನಲ್ಲಿ ಜನರ ಸಮಸ್ಯೆಗಳು ಗೋಚರಿಸದಂತೆ ಮಾಡುತ್ತಿದ್ದಾರೆ ಎಂದು ದೂರಿದರು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಳ್‌ರವರು ಮಾತನಾಡುತ್ತಾ, ನಿವೇಶನ ಪಡೆಯುವುದು ನಮ್ಮ ಹಕ್ಕು, ಅದು ಭಿಕ್ಷೆಯಲ್ಲ. ಮಂಗಳೂರಿನಲ್ಲೇ 35 ವರ್ಷಗಳಿಂದ ಅರ್ಜಿ ಹಾಕಿದರೂ ಇಷ್ಟರ ವರೆಗೆ ಒಂದು ತುಂಡು ಭೂಮಿ ಕೊಡಲಿಲ್ಲ. 25 ವರ್ಷದಿಂದ ರಾಜಕೀಯದಲ್ಲಿ ಎಷ್ಟೋ ಜನ ಬಂದು ಹೋದರೂ ಅವರು ಯಾರೂ ಒಂದು ತುಂಡು ಭೂಮಿ ಕೊಡಲು ಸಾಧ್ಯವಿಲ್ಲ. ಆದರೆ ನಿವೇಶನ ರಹಿತರ ಹೋರಾಟ ಸಮಿತಿ 2014 ರಿಂದ ಹೋರಾಟವನ್ನು ಪ್ರಾರಂಭಿಸಿ ಬಿಡಿಬಿಡಿಯಾಗಿದ್ದ ನಿವೇಶನ ರಹಿತರನ್ನು ಐಕ್ಯ ಶಕ್ತಿಯನ್ನಾಗಿಸಲು ಸಾಧ್ಯವಾಗಿದೆ. ಅನಂತರ ನಿರಂತರ ಹೋರಾಟ ನಡೆಸಿದ ಭಾಗವಾಗಿ ಶಕ್ತಿನಗರ, ಕನ್ನಗುಡ್ಡೆ, ಇಡ್ಯಾ, ಸುರತ್ಕಲ್ ಪ್ರದೇಶಗಳಲ್ಲಿ ನಿವೇಶನಕ್ಕಾಗಿ ಜಾಗ ಮೀಸಲಾಗಿರಿಸಲಾಗಿತ್ತು. ಶಕ್ತಿನಗರದಲ್ಲಿ ಜಿ+3 ಮಾದರಿಯ ಮನೆ ನಿರ್ಮಾಣದ ತಾತ್ವಿಕ ಒಪ್ಪಿಗೆ ದೊರೆಯುತ್ತಿದೆ. ಇದು ಕಾರ್ಯ ರೂಪಕ್ಕೆ ಬರಬೇಕಾದರೆ ನಿರಂತರ ಹೋರಾಟದ ಅಗತ್ಯವಿದೆ. ಅದಕ್ಕಾಗಿ ಪ್ರದೇಶವಾರು ಮಟ್ಟದಲ್ಲಿ ಸಮಿತಿ ರಚಿಸಬೇಕು. ನಿರಂತರವಾಗಿ ಹೋರಾಟದ ಮೂಲಕ ನಗರ ಪಾಲಿಕೆಗೆ ಒತ್ತಡ ಹಾಕಬೇಕೆಂದು ಈ ಹೋರಾಟದಲ್ಲಿ ಸಿಪಿಐ(ಎಂ) ಪಕ್ಷ ನಿಮ್ಮ ಜೊತೆಗೆ ಇರುತ್ತದೆ ಎಂದು ಹೇಳಿದರು.

ನಿವೇಶನ ರಹಿತರ ಪ್ರಧಾನ ಕಾರ್ಯದರ್ಶಿ ಸಂತೋಷ್ ಶಕ್ತಿನಗರ ಮಾತನಾಡುತ್ತಾ, ಈ ಹಿಂದೆ ಕೈಗೊಂಡಿದ್ದ ಮುಷ್ಕರ ವೇಳೆ ಮಹಾನಗರ ಪಾಲಿಕೆಯ ಆಡಳಿತವು ನೀಡಿದ್ದ ಲಿಖಿತ ಭರವಸೆ ಈಡೇರಿಸದಿದ್ದಲ್ಲಿ ತೀವ್ರ ಹೋರಾ ಪ್ರಾರಂಭಿಸುವುದಾಗಿ ಎಚ್ಚರಿಕೆ ನೀಡಿದರು.

ನಿವೇಶನ ರಹಿತರ ಹೋರಾಟ ಸಮಿತಿಯ ಅಧ್ಯಕ್ಷರಾದ ಪ್ರೇಮನಾಥ ಜಲ್ಲಿಗುಡ್ಡೆ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಿಪಿಐ(ಎಂ) ನಗರ ಉತ್ತರ ಸಮಿತಿ ಕಾರ್ಯದರ್ಶೀ ಕೃಷ್ಣಪ್ಪ ಕೊಂಚಾಡಿ, ಸಂಘಟನೆಯ ನಾಯಕರುಗಳಾದ ಪ್ರಭಾವತಿ ಬೋಳೂರು, ಮಂಜುಳಾ ಶೆಟ್ಟಿ, ನೂತನ್ ಬಾರೆಬೈಲ್, ಪೂರ್ಣಿಮಾ ಅತ್ತಾವರ ಮೊದಲಾದವರು ವೇದಿಕೆಯಲ್ಲಿದ್ದರು.

**ಸಂತೋಷ್ ಶಕ್ತಿನಗರ**



## ತಪ್ಪಿತಸ್ತ ವೈದ್ಯರ ವಿರುದ್ಧ ಕ್ರಮಕೈಗೊಳ್ಳಲಾಗದಿದ್ದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ತನ್ನ ಹುದ್ದೆಗೆ ರಾಜೀನಾಮೆ ನೀಡಲಿ – ಸಂತೋಷ್ ಬಜಾಲ್

ಆರೋಗ್ಯ ಕ್ಷೇತ್ರ ಅನ್ನೋದು ಒಂದು ಸೇವಾ ಕ್ಷೇತ್ರ. ಜಿಲ್ಲೆಯಲ್ಲಿ ಇಂದು ಆರೋಗ್ಯ ಸೇವೆಯ ಹೆಸರಲ್ಲಿ ಖಾಸಗೀ ಆಸ್ಪತ್ರೆಗಳು ಮತ್ತು ಅದರ ವೈದ್ಯರುಗಳು ದುಬಾರಿ ಶುಲ್ಕ ವಿಧಿಸುವ ಮೂಲಕ ಒಂದು ಕಡೆ ಹಗಲು ದರೋಡೆಯಲ್ಲಿ ನಿರತರಾಗಿರುವ ಖಾಸಗೀ ಆಸ್ಪತ್ರೆಗಳ ವಿರುದ್ಧ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳೋದಿಲ್ಲ ಇನ್ನೊಂದೆಡೆ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ನೀಡದೆ ತಪ್ಪೆಸಗಿದ ಖಾಸಗೀ ವೈದ್ಯರುಗಳ ವಿರುದ್ಧ ದೂರು ನೀಡಿದರೂ ಜಿಲ್ಲಾಡಳಿತ ಯಾವುದೇ ಕ್ರಮವನ್ನು ಕೈಗೊಳ್ಳಲು ಹಿಂಜರಿಯುವ ಇವರ ವರ್ತನೆಯಿಂದ ರೋಗಿಗಳು ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ.ಹಾಗೆಯೇ ಮೊನ್ನೆ ರೋಗಿಗಳ ಆರೋಗ್ಯದ ಮೇಲೆ ಸಮಸ್ಯೆ ತಂದೊಡ್ಡಿದ ಡಾಕ್ಟರ್ ಗಳ ಮೇಲೆ ಯಾಕೆ ಕ್ರಮ ಕೈಗೊಂಡಿಲ್ಲ ಇಂತಹ ಸೂಕ್ಷ್ಮ ವಿಚಾರಗಳ ವಿರುದ್ಧ ಕ್ರಮಕೈಗೊಳ್ಳಲು ಸಾದ್ಯವಾಗದಿದ್ದರೆ ಜಿಲ್ಲಾ ಆರೋಗ್ಯಾಧಿಕಾರಿ ತನ್ನ ಹುದ್ದೆ ರಾಜಿನಾಮೆ ನೀಡಲಿ ಎಂದು ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಇಂದು ತಪ್ಪಿತಸ್ತ ಖಾಸಗೀ ವೈದ್ಯರುಗಳಾದ ಡಾ ಜಮೀಳ ಹಾಗು ಡಾ ವೀಣಾ ಭಟ್ ವಿರುದ್ಧ ಕ್ರಮಕೈಗೊಳ್ಳಲು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಮುಂಬಾಗ ನಡೆದ




ಪ್ರತಿಭಟನೆ ಯನ್ನು ಉದ್ದೇಶಿಸಿ ಮಾತನಾಡಿದರು.

ಪ್ರತಿಭಟನೆ ಯನ್ನು ಉದ್ದೇಶಿಸಿ ಡಿವೈಎಫ್ಐ ಜಿಲ್ಲಾ ಉಪಾದ್ಯಕ್ಷರಾದ ಬಿ.ಕೆ ಇಮ್ತಿಯಾಜ್ ಜೆ.ಎಂ.ಎಸ್ ಮುಖಂಡರಾದ ಭಾರತಿ ಬೋಳಾರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಜಿಲ್ಲಾ ಮುಖಂಡರಾದ ರಫೀಕ್ ಹರೇಕಳ, ಸಾಧಿಕ್ ಕಣ್ಣೂರು, ನವೀನ್ ಕೊಂಚಾಡಿ, ಅಶ್ರಫ್ ಹರೇಕಳ, ನೌಶದ್ ಬೆಂಗರೆ, ಸಂತ್ರಸ್ತೆ ಕೌಸರ್ ಬಾನು ಪತಿ ಮಹಮ್ಮದ್ ಹಾರಿಸ್ ಹಾಗೂ ಸಹದಾ ಪತಿ ಹೈದರ್ ಉಪಸ್ಥಿತರಿದ್ದರು.

ಪ್ರತಿಭಟನೆ ನಂತರ ಜಿಲ್ಲಾಧಿಕಾರಿಗೆ ಮನವಿಯನ್ನು ಸಲ್ಲಿಸಲಾಯಿತು.

## ಮರಳು ಸಮಸ್ಯೆ : ಜುಲೈ 26, ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕಳೆದೆರೆಡು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ಮರಳು ಸಮಸ್ಯೆ ವಿಪರೀತವಾಗಿ ಬಿಗಡಾಯಿಸುತ್ತಿದ್ದರೂ ಜಿಲ್ಲೆಯ ಶಾಸಕರು, ಮಂತ್ರಿಗಳು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡದಿರುವ ಕ್ರಮ ಖಂಡಿಸಿ ಹಾಗೂ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳಿದ್ದರೂ ಸ್ಥಳೀಯ ಕಾರ್ಮಿಕ ಇಲಾಖೆ/ನಿರೀಕ್ಷಕರ ಕಛೇರಿಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಸವಲತ್ತುಗಳು ವಿಳಂಭವಾಗಿ ಮಂಜೂರಾಗುತ್ತಿರುವುದನ್ನು ವಿರೋಧಿಸಿ ಜುಲೈ 26 ರಂದು ಕಟ್ಟಡ, ನಿರ್ಮಾಣ ಕಾರ್ಮಿಕರಿಂದ ರಾಜ್ಯದಾದ್ಯಂತ ಶಾಸಕರು/ಮಂತ್ರಿಗಳ ಮನೆ ಚಲೋ ಹೋರಾಟ ನಡೆಯಲಿದೆ.

ಕುಂದಾಪುರದಲ್ಲಿ ನಡೆದ ಕಟ್ಟಡ ಕಾರ್ಮಿಕರ 3ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯದಾದ್ಯಂತ ಜನಪ್ರತಿನಿಧಿಗಳ ಮನೆ ಮುಂದೆ ಹೋರಾಟ ನಡೆಸಲು ತೀರ್ಮಾನಿಸಲಾಗಿದ್ದು. ಉಡುಪಿ ಜಿಲ್ಲೆಯಲ್ಲಿಯೂ ಜುಲೈ 26 ರಂದು ಬೆಳಿಗ್ಗೆ 10.30 ಗಂಟೆಗೆ ಉಡುಪಿ ಬಸ್ಸು ನಿಲ್ದಾಣದಿಂದ ಕಟ್ಟಡ ಕಾರ್ಮಿಕರು ಉಸ್ತುವಾರಿ ಸಚಿವರಾದ ಪ್ರಮೋದ್ ಮದ್ವರಾಜ್‌ರವರ ಕಛೇರಿ ಚಲೋ ಹೋರಾಟ ನಡೆಸಲಿದ್ದಾರೆ. ಅಲ್ಲದೇ ಜಿಲ್ಲೆಯ ಎಲ್ಲಾ ಶಾಸಕರಿಗೂ ಮನವಿ ಸಲ್ಲಿಸಲು ನಿರ್ಧರಿಸಿದೆ.

ಉಡುಪಿ ಜಿಲ್ಲೆಯಲ್ಲಿ ಬಿಜೆಪಿ, ಕಾಂಗ್ರೇಸ್ ಸೇರಿದಂತೆ 4 ಶಾಸಕರು ಹಾಗೂ ಉಸ್ತುವಾರಿ ಮಂತ್ರಿಗಳಿದ್ದರೂ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಅಸೆಂಬ್ಲಿಯಲ್ಲಿ ಗಂಭೀರವಾದ ಪ್ರಯತ್ನ ಮಾಡುವಲ್ಲಿ ವಿಫಲಗೊಂಡಿದ್ದಾರೆ.

ವಿಧಾನ ಸಭೆಯಲ್ಲಿ ಕಟ್ಟಡ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಪಕ್ಷಭೇದ ಮರೆತು ಸರಕಾರದ ಗಮನ ಸೆಳೆಯುವ ರೀತಿಯಲ್ಲಿ ಪ್ರಯತ್ನ ಮಾಡಿ ಪರಿಹರಿಸಬೇಕೆಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮನ್ವಯ ಸಮಿತಿ ಒತ್ತಾಯಿಸಿ ಈ ಹೋರಾಟ ನಡೆಸಲಿದೆ.


ಜಿಲ್ಲೆಯಲ್ಲಿ ಈ ಹಿಂದೆ ಕಟ್ಟಡ ಕಾರ್ಮಿಕರು ಮರಳು ಸಮಸ್ಯೆ ಬಗೆಹರಿಸಲು ಧರಣಿ, ಉಪವಾಸ ಸತ್ಯಾಗ್ರಹ,ಮುಖ್ಯಮಂತ್ರಿಗಳಿಗೆ ಕಪ್ಪು ಬಾವುಟ ಪ್ರದರ್ಶನ ಮೊದಲಾದ ಹೋರಾಟಗಳನ್ನು ನಡೆಸಲಾಗಿತ್ತು. ಆದರೆ ಕಟ್ಟಡ ಕಾರ್ಮಿಕರ ಸಮಸ್ಯೆ ಪರಿಹಾರಗೊಳ್ಳದ ಹಿನ್ನಲೆಯಲ್ಲಿ ಕಾರ್ಮಿಕರು ಕೆಲಸ ಕಳೆದುಕೊಳ್ಳುವಂತಾಗಿ ಇಡೀ ಜಿಲ್ಲೆಯಲ್ಲಿ ಆರ್ಥಿಕ ವ್ಯವಹಾರಗಳು ಸ್ಥಗಿ ತಗೊಂಡಿದೆ. ಸಮಸ್ಯೆ ಬಗ್ಗೆ ಹರಿಸದಿದ್ದರೆ ಸೆಪ್ಟೆಂಬರ್ 14 ರಂದು ಸಾವಿರಾರು ಜನ ಕಟ್ಟಡ ಕಾರ್ಮಿಕರು ವಿಧಾನ ಸೌಧ ಚಲೋ ಹೋರಾಟ ಹಮ್ಮಿಕೊಳ್ಳಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

**ಸುರೇಶ್ ಕಲ್ಲಾಗರ್**

# "21ನೇ ಕ್ರೋಮೋಸೋಮ್" ಮತ್ತು ಬಂಡವಾಳವಾದ




ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ




ಮನೋವಿಜ್ಞಾನಿಯಾಗಿ, ವಿಶೇಷ ಮಕ್ಕಳ ಆರೈಕೆ ಮತ್ತು ಶಿಕ್ಷಣದಲ್ಲಿ ಅಪಾರ ಅನುಭವ ಗಳಿಸಿಕೊಂಡಿರುವ ಶ್ರೀಮತಿ ಚಂಪಾ ಜೈ ಪ್ರಕಾಶ್, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿರುವ '21ನೇ ಕ್ರೋಮೊಸೋಮ್' ಅನೇಕ ಕಾರಣಗಳಿಗಾಗಿ ಒಂದು ಅನನ್ಯ ಪುಸ್ತಕ. ಕನ್ನಡದಲ್ಲಂತೂ ಈ ಬಗೆಯ ಪುಸ್ತಕ ಇಲ್ಲಿಯವರೆಗೂ ಬಂದಿರಲಿಲ್ಲ. ಶಾಸ್ತ್ರಗ್ರಂಥ, ಜೀವನ ಕಥಾನಕ, ಶಿಕ್ಷಣ ಮೀಮಾಂಸೆ, ಬೋಧನಾ ಕೈಪಿಡಿ, ಮನೋವೈಜ್ಞಾನಿಕ ವಿಶ್ಲೇಷಣೆ, ಸಾಮಾಜಿಕ ಸಂಕಥನ ಮತ್ತು ಇವೆಲ್ಲವನ್ನೂ ಮೈಯಾಗಿಸಿಕೊಂಡು, ಈವರೆಗಿನ ಕನ್ನಡ ಸಾಹಿತ್ಯ ಪ್ರಕಾರಗಳ ಗಡಿಗಳನ್ನು ಮೀರಿ ಹೊಸದಾಗಿ ಸೇರ್ಪಡೆಯಾಗಿರುವ ವಿಶಿಷ್ಟ ಸಾಹಿತ್ಯ ಕೃತಿಯಾಗಿದೆ ಈ ಪುಸ್ತಕ.

ಐದು ಭಿನ್ನ ಕಥಾನಕಗಳ ಮೂಲಕ ಶ್ರೀಮತಿ ಚಂಪಾ ಹುಟ್ಟಿನಿಂದಲೇ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಐದು ಬಗೆಯ ವಿಕಲತೆಗಳನ್ನು ಓದುಗರಿಗೆ, ನಿರ್ದಿಷ್ಟವಾಗಿ ತಾಯಿ–ತಂದೆಯರಿಗೆ ಪರಿಚಯಿಸುತ್ತಾರೆ. ಇವುಗಳಲ್ಲಿ, ಮೊದಲ ನಾಲ್ಕು ಅಂದರೆ, ಸೆರಬ್ರಲ್ ಪಾಲ್ಸಿ, (ಖಂಡಬಿಗಿತ–ಪಕ್ಷವಾತ), ಡೌನ್ಸ್ ಸಿಂಡ್ರೋಮ್, ಆಟಿಸಂ(ತಂತಾನಿಕೆ) ಮೆಂಟಲ್ ರಿಟಾರ್ಡೇಶನ್, ನೋಡಿದರೆ ಯಾರಾದರೂ ಗುರುತಿಸುವಂಥವು. ಐದನೆಯದು, ಡಿಸ್‌ಕ್ಯಾಲ್ ಕೂಲಿಯಾ– ಡಿಸ್‌ಲೆಕ್ಸಿಕ್(ಅಂಕೆ–ಸಂಖ್ಯೆ, ಕಾಗುಣಿತ ಸಂಬಂಧಿಸಿದ ತೊಂದರೆ) ಪರಿಣಿತರಿಂದ ತಪಾಸಣೆ ಮಾಡಿಸಿದಾಗ ಮಾತ್ರ ಹುಟ್ಟಿನಿಂದ ಬಂದ ತೊಂದರೆ ಎಂದು ತಿಳಿಯುವಂಥದ್ದು.

ಇಲ್ಲಿ ಕಾಣಸಿಗುವ ಜನರು ಪಾತ್ರಗಳ ನೆಲೆಯಿಂದ ವ್ಯಕ್ತಿಗಳ ನೆಲೆಗೆ, ವ್ಯಕ್ತಿಗಳ ನೆಲೆಯಿಂದ ಪಾತ್ರಗಳ ನೆಲೆಗೆ ಚಲಿಸುತ್ತಾ ಮಿಜೋರಾಂನ ಗುಡ್ಡಗಾಡು ಹುಡುಗಿಯ ಶೈಕ್ಷಣಿಕ ಅಗತ್ಯಗಳ ಹಿನ್ನೆಲೆಯಿಂದ, ಆಂಧ್ರ, ಕರ್ನಾಟಕ, ತಮಿಳುನಾಡುಗಳ ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಒಳಗೊಂಡಂತೆ ಕಡಲ ಕರೆಯ ಜನರ ಕೌಟುಂಬಿಕ ಜೀವನದ ಏಳು ಬೀಳುಗಳ, ಸಿಕ್ಕುಸಿಕ್ಕಾದ ಮಾನವ ಸಂಬಂಧಗಳ ಹಿನ್ನೆಲೆಗೆ ಹರಿಯುತ್ತಾ ಭಾರತವನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತಾರೆ. ಆಗತಾನೆ ಜನಿಸಿದ ವಿಶೇಷ ಶಿಶುಗಳಿಂದ ಹಿಡಿದು ವಯೋವೃದ್ಧರವರೆಗೆ ಸಹನೆ–ಪ್ರೀತಿ–ಕಷ್ಟಸಹಿಷ್ಣುತೆಗಳ ಸಾಕಾರ ಮೂರ್ತಿಗಳಾದ ವಿವಿಧ ವಯೋಮಾನಗಳ ತಾಯಿ–ತಂದೆಯರಾಗಿ ಭಾರತದ ಜನ ಸಮುದಾಯವು ಈ ಪುಸ್ತಕದಲ್ಲಿ ಜೀವ ಪಡೆಯುತ್ತದೆ. ವಿದೇಶೀ ವಣಿಕ ದೃಷ್ಟಿಯ ಒರಟು ಮನಸ್ಸಿನ ಚಿಕಿತ್ಸಕರಿಂದ ಹಿಡಿದು, ಸುಸಂಸ್ಕೃತ ಅಭಿರುಚಿಯ ಗಾಂಧಿವಾದೀ ಪರಿಣತರವರೆಗೆ ವಿವಿಧ ಸೈದ್ಧಾಂತಿಕ ಹಿನ್ನೆಲೆಯ ಜನರು ಇಲ್ಲಿ ವೈದ್ಯರಾಗಿ ರೂಪಪಡೆದಿದ್ದಾರೆ.

**ಶ್ರೀಮತಿ ಚಂಪಾ ಇಲ್ಲಿನ ಕಥಾನಕಗಳ ನಿರೂಪಕಿಯಾಗಿ, ವಿಶೇಷ ಗಮನವನ್ನು ಬೇಡುವ ವಿಶೇಷ ಮಕ್ಕಳ ಸಮಚಿತ್ತದ ಶುಶ್ರೂಷಕರಾಗಿ, ಮಮತೆ ತುಂಬಿದ ಸಹನಶೀಲ ತಾಯಂದಿರ ಅಸಹಾಯಕ ನೋವಿಗೆ ಭಾವತೀವ್ರತೆಯಿಂದ ಮಿಡಿಯುವ ಮಾನವೀಯ ವ್ಯಕ್ತಿಯಾಗಿ, ತಾಂತ್ರಿಕಜ್ಞಾನ, ಶೈಕ್ಷಣಿಕ ತಿಳುವಳಿಕೆ, ವೈದ್ಯಕೀಯ ಮಾಹಿತಿ ಮತ್ತು ತಾತ್ವಿಕ ದೃಷ್ಟಿಕೋನಗಳನ್ನು ಮೇಳೈಸಿಕೊಂಡ ವಿಶಿಷ್ಟ ಕೃತಿಕಾರರಾಗಿ ಈ ಪುಸ್ತಕದ ರಚನೆಯಲ್ಲಿ ಜನ್ಮ ಪಡೆದಿದ್ದಾರೆ.**

**ಮಗುವನ್ನು ಹುಟ್ಟಿದಾರಭ್ಯಬಾಧಿಸುವ, ತೀವ್ರ ತೊಂದರೆಗಳಿಗೆ ಮಗುವಿನ ಜೀವಕೋಶದಲ್ಲಿನ 21ನೆಯ ಹೆಚ್ಚುವರಿ ಕ್ರೋಮೋಸೋಮ್ ಕಾರಣ. 21ನೇ ಶತಮಾನದ ಇಡೀ ಜಗತ್ತಿನ ತೊಂದರೆಗಳಿಗೆ ಕಾರಣವಾಗಿರುವ ಬಂಡವಾಳವಾದವೇ ರೋಗಿಷ್ಠ 21ನೇ ಕ್ರೋಮೋಸೋಮ್ ಆಗಿದೆ.**


**ಗತಿತಾರ್ಕಿಕ, ಸ್ತ್ರೀ ಸಂವೇದನಾ ಪ್ರಧಾನ ಕೃತಿ**

ಶ್ರೀಮತಿ ಚಂಪಾ ಇಲ್ಲಿನ ಕಥಾನಕಗಳ ನಿರೂಪಕಿಯಾಗಿ, ವಿಶೇಷ ಗಮನವನ್ನು ಬೇಡುವ ವಿಶೇಷ ಮಕ್ಕಳ ಸಮಚಿತ್ತದ ಶುಶ್ರೂಶಕರಾಗಿ, ಮಮತೆ ತುಂಬಿದ ಸಹನಶೀಲ ತಾಯಂದಿರ ಅಸಹಾಯಕ ನೋವಿಗೆ ಭಾವ ತೀವ್ರತೆಯಿಂದ ಮಿಡಿಯುವ ಮಾನವೀಯ ವ್ಯಕ್ತಿಯಾಗಿ, ತಾಂತ್ರಿಕ ಜ್ಞಾನ, ಶೈಕ್ಷಣಿಕ ತಿಳುವಳಿಕೆ, ವೈದ್ಯಕೀಯ ಮಾಹಿತಿ ಮತ್ತು ತಾತ್ವಿಕ ದೃಷ್ಟಿಕೋನಗಳನ್ನು ಮೇಳೈಸಿಕೊಂಡ ವಿಶಿಷ್ಟ ಕೃತಿಕಾರರಾಗಿ ಈ ಪುಸ್ತಕದ ರಚನೆಯಲ್ಲಿ ಜನ್ಮ ಪಡೆದಿದ್ದಾರೆ. ಯಾಕೆ ಹೀಗೆ? ಇದಕ್ಕೆ ಯಾರು ಹೊಣೆ ಎಂಬ ಯಾವ ಪ್ರಶ್ನೆಗೂ ನಿಲುಕದ, ಯಾವ ವಿವರಣೆಗೂ ದಕ್ಕದಂಥ ಜೈವಿಕ ವೈಪರೀತ್ಯಗಳಿಂದಾಗಿ ತಾಯಿ–ತಂದೆ ಯಾರೊಬ್ಬರನ್ನೂ ಹೋಲದೆ, ವಿಶ್ವದ ಯಾವುದೇ ಭಾಗದಲ್ಲಿ, ಯಾವುದೇ ಜನಾಂಗದಲ್ಲಿ ಜನಿಸಿದರೂ ತಮ್ಮ ವಿಶಿಷ್ಟ ದೈಹಿಕ ಲಕ್ಷಣಗಳಿಂದಾಗಿ ಪರಸ್ಪರ ಒಡಹುಟ್ಟಿದವರಂತೆ ತೋರುವ 'ವಿಶ್ವಮಾನವ', ಡೌನ್ಸ್ ಸಿಂಡ್ರೋಮ್ ಶಿಶು. ಹೆತ್ತ ತನಗೆ ಪರಕೀಯವೆಂಬಂತೆ ತೋರುವ ಅದನ್ನು 'ಯಶೋದೆ ಕೃಷ್ಣನನ್ನು ಲಾಲಿಸಿ–ಪಾಲಿಸಿದಂತೆ ಬೆಳೆಸುತ್ತೇನೆ' ಎಂದು ಸಂಗೀತಗಾರ್ತಿ ಎಳೆಯ ತಾಯಿಯ ಬಾಯಲ್ಲಿ ಹೇಳಿಸುವ ಕೃತಿಕಾರರ ಪುರಾಣ–ಪ್ರಜ್ಞೆ, ಸಾಹಿತ್ಯ–ಪ್ರತಿಭೆ ಅನ್ಯಾದೃಶವಾದದ್ದು.

ಗ್ರಾಮ, ನಗರ, ಪಟ್ಟಣಗಳಲ್ಲಿ ವಾಸಿಸುವ, ಹಿಂದೂ, ಕ್ರೈಸ್ತ, ಮಹಮದೀಯ ಹಿನ್ನೆಲೆಯ ಅವಿಭಕ್ತ, ವಿಭಕ್ತ ಕುಟುಂಬಗಳ ಒಳಗೆ ಪರಕಾಯ ಪ್ರವೇಶ ಮಾಡಬಲ್ಲ ಶಕ್ತಿ ಲೇಖಕರಿಗೆ ಕರತಲಾಮಲಕವಾಗಿದೆ. ಮುನ್ನೆಲೆಯಲ್ಲಿ ವಿವಿಧ ವಿಕಲತೆಗಳಿಂದ ನರಳುವ ಮಕ್ಕಳ, ಅವರೊಟ್ಟಿಗೆ ತಾವೂ ನರಳುವ 'ತಾಯಿ' ಇದ್ದಾಳೆ. ಈ ಕಥಾನಕಗಳ ವಿಶಾಲ ಭಿತ್ತಿಯಾಗಿ ತಾಯಿ, ಅತ್ತೆ, ಅಜ್ಜಿ, ಶಿಕ್ಷಕಿ, ವೈದ್ಯೆ, ಸಂಶೋಧಕಿ, ಸಹಾಯಕಿ ಹೀಗೆ ಮಹಿಳೆಯರೇ ಇಡೀಕೃತಿಯನ್ನು ಆವರಿಸುತ್ತಾರೆ. ಕ್ರೌರ್ಯ, ದಬ್ಬಾಳಿಕೆ, ಅನಾದರ, ಸಂವೇದನಾರಾಹಿತ್ಯಗಳನ್ನು ಪ್ರತಿನಿಧಿಸುವ ಪುರುಷ ಪಾತ್ರಗಳು ಕಮ್ಮಿ. ಸಹಾನುಕಂಪ, ಸುವಿವೇಕ, ಜೀವನಾನುಭವ, ಮಾರ್ಗದರ್ಶಕ ಪಾತ್ರಗಳಾಗಿ, ವಿಶೇಷ ಮಕ್ಕಳ ತಾಯಂದಿರ ಬೆನ್ನಿಗೆ ನಿಲ್ಲುವ ಪುರುಷ ಪಾತ್ರಗಳೇ ಅಧಿಕ. ಬಡವರು–ಮಧ್ಯಮ ವರ್ಗಿಯರು, ಸ್ಥಿತಿವಂತರು–ಕೂಲಿಕಾರ್ಮಿಕರು, ವಿಜ್ಞಾನಿಗಳು–ಮೂಢನಂಬಿಕೆಯ ಜನರು, ಧಾರ್ಮಿಕರು–ಮುಗ್ಧರು–ಬೌದ್ಧಿಕ ಎಚ್ಚರ ಪಡೆದವರು, ಅಶಿಕ್ಷಿತ–ಅರೆಶಿಕ್ಷಿತ–ಶಿಕ್ಷಿತ ಜನರು, ಹೀಗೆ ಬದುಕಿನ ಬಹು ಮಗ್ಗುಲುಗಳನ್ನು ಅವುಗಳ ವಿರೋಧಾತ್ಮಕ ಸಂಬಂಧಗಳಲ್ಲಿ ಒಟ್ಟಿಗೆ ಎದುರಿಗಿಡುವ ಈ ಕೃತಿಗತಿತಾರ್ಕಿಕ ಕೃತಿಯೂ ಹೌದು. ಸ್ತ್ರೀ ಸಂವೇದನಾ ಪ್ರಧಾನ ಕೃತಿಯೂ ಹೌದು.

**ವೈಜ್ಞಾನಿಕ, ವೈಚಾರಿಕ ಉದಾರವಾದೀ ತಾತ್ವಿಕ ದೃಷ್ಟಿಕೋನ**

ಊರು, ವ್ಯಕ್ತಿ, ವೃತ್ತಿನಿರತರು ಮತ್ತು ಸಂಸ್ಥೆಗಳ ಹೆಸರುಗಳನ್ನು ಪ್ರಜ್ಞಾಪೂರ್ವಕವಾಗಿ, ಅರ್ಥಪೂರ್ಣವಾಗಿರುವಂತೆ ಚಂಪಾ ಬಳಸುತ್ತಾರೆ. ವಯಸ್ಸಾದ ಪಾತ್ರಗಳಿಗೆ ಅವರಧರ್ಮ, ದೇವರು, ನಂಬಿಕೆಗಳನ್ನು ಪ್ರತಿನಿಧಿಸುವಂಥ ಹೆಸರುಗಳು. ನಡುವಯಸ್ಸಿನ ಪಾತ್ರಗಳಿಗೆ ಅವರ ವೃತ್ತಿ–ಪ್ರವೃತ್ತಿಗಳನ್ನು ಸೂಚಿಸುವ ಹೆಸರುಗಳು, ಕಿರಿವಯಸ್ಸಿನ ತಾಯಿಂದರಿಗೆ ಮತ್ತು ಮಕ್ಕಳಿಗೆ ನಿಸರ್ಗದಿಂದಆಯ್ದ ಹೆಸರುಗಳು, ವೈದ್ಯರು ಮತ್ತು ಪರಿಣತರಿಗೆಅವರ ಮನೋಧರ್ಮ




ಮತ್ತು ದೃಷ್ಟಿಕೋನಗಳನ್ನು ಸೂಚಿಸುವ ಸೆಕ್ಯುಲರ್ ಹೆಸರುಗಳು ಮತ್ತು ಸೇವಾಕೇಂದ್ರ–ಸಂಸ್ಥೆಗಳಿಗೆ ಅವುಗಳ ಧ್ಯೇಯೋದ್ದೇಶಗಳನ್ನು–ಆಶಯಗಳನ್ನು ಸೂಚಿಸುವಂಥ ಹೆಸರುಗಳನ್ನು ಇಡಲಾಗಿದೆ. ಆದ್ದರಿಂದಲೇ ಈ ಕೃತಿಗೆಸಾಂಸ್ಥೀಕರಣಗೊಂಡ ಮತ–ಧರ್ಮದ ಸೋಂಕಿಲ್ಲ. ದೈವಿಕತೆ, ಧಾರ್ಮಿಕತೆ ಮತ್ತು ವಿಧಿವಾದಗಳನ್ನು ಆಧರಿಸಿದ ನೈತಿಕ ತೀರ್ಮಾನಗಳಿಲ್ಲ. ಒಬ್ಬ ವೈಜ್ಞಾನಿಕ, ವೈಚಾರಿಕ ವ್ಯಕ್ತಿಯಾಗಿ ಚಂಪಾ ಮಾನವೀಯತೆಯನ್ನು ಎತ್ತಿ ಹಿಡಿಯುವ ಉದಾರವಾದೀ ತಾತ್ವಿಕ ದೃಷ್ಟಿಕೋನಗಳಿಂದ ನೋವಿನ ಉಪಶಮನವನ್ನು ಸೂಚಿಸುತ್ತಾರೆ.

'ಇದು ಹೀಗಿದೆ ಅಷ್ಟೆ. ಇದಕ್ಕೆ ಯಾರೂ ಹೊಣೆಯಲ್ಲ, ಆತ್ಯಂತಿಕವಾಗಿ ಯಾಕೆ ಎಂಬುದಕ್ಕೆ ಯಾವ ಉತ್ತರವೂ ಇಲ್ಲ' ಎಂಬ ಅಸ್ತಿತ್ವವಾದೀ ನಿಲುವು;

ಬಾಣ ತಗುಲಿದ ವ್ಯಕ್ತಿಗೆ ಬಾಣ ಎಲ್ಲಿಂದ ಬಂತು? ಯಾರು ಹೊಡೆದರು, ಯಾಕಾಗಿ ಹೊಡೆದರು? ಎಂಬಂಥ ಪ್ರಶ್ನೆಗಳಿಗಿಂತ ಗಾಯವನ್ನು ಉಪಚರಿಸಿ ನೋವನ್ನು ನಿವಾರಿಸುವುದು ಅತಿ ಮುಖ್ಯವೆಂಬ ಬೌದ್ಧ ದೃಷ್ಟಿ;

ಸಹಜೀವಿಗಳೊಂದಿಗೆ ನೆಮ್ಮದಿಯಿಂದ ಬದುಕಲು ಮಮತೆ, ಸಹನೆ, ಕ್ಷಮೆ ಮತ್ತು ನಿರ್ವ್ಯಾಜ ಪ್ರೇಮದ ಸೇವಾಮನೋಭಾವ ಅಗತ್ಯವೆನ್ನುವ ನೈಜ ಕ್ರೈಸ್ತ ದೃಷ್ಟಿ ಈ ನೋವಿನ ಕಥಾನಕಗಳ ಹೆಣಿಗೆಯಲ್ಲಿ ಸಂಯೋಜಿತವಾಗಿವೆ.


**ಸಮಾಜ ಬಹುಮುಖೀ ಸಂಬಂಧಗಳ ಜಾಲ**

ಬದುಕು ಪ್ರಾರಂಭವಾಗುವುದೇ ನೋವಿನಿಂದ. ತಾಯಿಗೆ ಹೆರಿಗೆಯ ನೋವು, ಮಗುವಿಗೆ ಹುಟ್ಟುವ ಪ್ರಕ್ರಿಯೆಯ ನೋವು. ಅದೇತಾಯಿ–ಮಗು ಪರಸ್ಪರರನ್ನು ಬಿಟ್ಟಿರಲಾಗದಂತೆ ಬೆಸೆಯುವ ಮೂಲ ಜೀವಸಂಬಂಧ. ಹುಟ್ಟಿದ ತಕ್ಷಣ ಮಗುವನ್ನು ಬಾಧಿಸುವ ನೋವು ಹಸಿವು. ಹಸಿವಿನ ನಿವಾರಣೆಗಾಗಿ ತಾಯಿಯ ಹಾಲು ಮತ್ತು ಅಸ್ತಿತ್ವದ ಭದ್ರತೆ–ಗಾಗಿ ತಾಯಿಯ ಬೆಚ್ಚನೆಯ ಮಡಿಲನ್ನು ಮಗು ಬಿಟ್ಟಿರಲಾರದು. ಪೋಷಕಾಂಶ–ನೀರು ಮತ್ತು ಭದ್ರತೆ–ಯ ಸಂಯುಕ್ತ ರೂಪವೇ ತಾಯಿಯ ಹಾಲು. ಇವೇ ತಾಯಿ–ಮಗುವನ್ನು ಜೀವಿತದ ಕೊನೆಯವರೆಗೂ ಭೌತಿಕವಾಗಿ ಮತ್ತು ಮಾನಸಿಕವಾಗಿ ಬೆಸೆಯುವ ಗಾಢ ಸಂಬಂಧದ ಮೂಲ. ಎಲ್ಲಿ ಆಹಾರ–ನೀರು ದೊರೆಯುತ್ತವೆಯೋ, ಎಲ್ಲಿ ಅಭದ್ರತೆ ಇರುವುದಿಲ್ಲವೋ ಅದೇ ಕುಟುಂಬ–ಮನೆ–ಊರು–ಕೇರಿ–ದೇಶ. ಹೀಗೆ ಹಸಿವು–ನೀರಡಿಕೆ–ಅಭದ್ರತೆಗಳೆಂಬ ನೋವು ಎಲ್ಲ ಜೀವಿಗಳಿಗೂ ಸಾಮಾನ್ಯವಾಗಿರುವ ಅಂಶಗಳು. ಅಸ್ತಿತ್ವಕ್ಕಾಗಿ ನಡೆಯುವ ಈ ನೋವಿನ ನಿವಾರಣೆಯ ನಿರಂತರ ಯತ್ನಗಳೇ ಬದುಕು. ಈ ಯತ್ನಗಳು ಸದಾ ಪರಸ್ಪರ ಬೆಸೆದುಕೊಂಡ ಭೌತಿಕ ಮತ್ತು ಮಾನಸಿಕ ಸಂಬಂಧಗಳ ಮೂಲಕ ಮಾತ್ರ ಸಾಧ್ಯವಾದ್ದರಿಂದ ಅದಕ್ಕಾಗಿ ಸಮಾಜ ಸಂಘಟಿತವಾಗಿದೆ. ಹೀಗೆ ಸಮಾಜವೆಂಬುದು ವ್ಯಕ್ತಿಗಳ ರೂಪದಲ್ಲಿ ಸದಾ ಚಲನಶೀಲವಾಗಿರುವ ಬಹುಮುಖೀ ಸಂಬಂಧಗಳ ಜಾಲ.

ಹಸಿವು, ನೀರಡಿಕೆ ಮತ್ತು ಭದ್ರತೆಗಳಲ್ಲದೆ, ಪರಿಸರ ಮೂಲದ ಕಾಯಿಲೆ, ಸಾಮಾಜಿಕ ಮೂಲದಅನಾರೋಗ್ಯ–ಅಂಗವಿಕಲತೆ, ಜೈವಿಕ ವೈಪರೀತ್ಯಗಳಿಂದಾಗಿ ಹುಟ್ಟಿನಿಂದಲೇ ನಿರ್ಬಲಗೊಂಡದೈಹಿಕ–ಮಾನಸಿಕ ಸ್ಥಿತಿಗಳಿಂದ ನರಳುವ ಜನಸಮುದಾಯದ ಸಮಸ್ಯೆಗಳನ್ನು ನಿರ್ಭಾವುಕ, ನಿರಪೇಕ್ಷ, ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಬೇಕು. ಅಂಥವಿಶ್ಲೇಷಣೆಯು ಭಾವತೀವ್ರತೆಯಿಂದ ನೋವಿಗೆ ಸ್ಪಂದಿಸುವಮಾನವೀಯ–ನೈತಿಕದೃಷ್ಟಿಯನ್ನುತಂದುಕ ೊಡಬೇಕು. ಆಗ ಮಾತ್ರ ಭೌತಿಕ ಮತ್ತು ಮಾನಸಿಕ ಪರಿಹಾರ ಸಾಧ್ಯ. ಅದು ಸಾರ್ವತ್ರಿಕವಾಗಬೇಕಾದ ರೆಸಾಮಾಜಿಕವೂಆಗಿರಬೇಕು.ಇದುಸಮುದಾಯದ ವಿಕಾಸವನ್ನು ಮುಖ್ಯವೆಂದು ಪರಿಗಣಿಸುವ ಸಮಾಜವಾದೀದೃಷ್ಟಿ.

ಇದಕ್ಕೆ ವಿರುದ್ಧವಾಗಿ

➔



# ಜಂಟಿ ನೌಕಾಸೇನೆ ಕವಾಯತು ಯಾರ ಹಿತಕ್ಕಾಗಿ?



**ಪ್ರಕಾಶ್ ಕಾರಟ್**

**ಮಲಬಾರ್ ಸೇನಾ ಕವಾಯತು, ಭಾರತವು ಚೀನಾವನ್ನು ತಡೆಯುವ ಗುರಿಯೊಂದಿಗೆ ಏಷ್ಯಾದಲ್ಲಿ ವ್ಯೂಹ ರಚಿಸುತ್ತಿರುವ ಅಮೆರಿಕದ ಪೂರ್ಣ ಪ್ರಮಾಣದ ಪಾಲುದಾರ ಆಗಿರುವುದರ ಸಂಕೇತವಾಗಿದೆ. ಇದು ಹೇಗೆ ಭಾರತದ ರಾಷ್ಟ್ರೀಯ ಹಿತಗಳಿಗೆ ಅನುಕೂಲವಾಗಲಿದೆ ಎನ್ನುವುದನ್ನು ಮೋದಿ ಸರಕಾರವೇ ಉತ್ತರಿಸಬೇಕು. ಅಮೆರಿಕದೊಂದಿಗೆ ಮಿಲಿಟರಿ ಮೈತ್ರಿ ಭಾರತದ ಸಾರ್ವಭೌಮತೆ ಮತ್ತು ವ್ಯೂಹಾತ್ಮಕ ಸ್ವಾಯತ್ತೆಗೆ ಅಡ್ಡಿಯಾಗಲಿದೆ.**

ಚೆನ್ನೈ ಕರಾವಳಿಯಾಚೆ ನಡೆದ ಮಲಬಾರ್ ಜಂಟಿ ನೌಕಾಸೇನೆ ಕವಾಯತುಗಳು ಮುಕ್ತಾಯಗೊಂಡಿವೆ. ಮಲಬಾರ್ ಕವಾಯತುಗಳ 21ನೇ ಆವೃತ್ತಿಯಲ್ಲಿ ಅಮೆರಿಕ, ಭಾರತ ಮತ್ತು ಜಪಾನಿ ನೌಕಾಪಡೆಗಳು ಭಾಗವಹಿಸಿದ್ದವು. ಈ ಮೂರೂ ದೇಶಗಳ 16 ನೌಕೆಗಳು, ಎರಡು ಜಲಾಂತರ್ಗಾಮಿ ನೌಕೆಗಳು ಮತ್ತು 95 ವಿಮಾನಗಳನ್ನು ಒಳಗೊಂಡಿದ್ದ ಈ ಜಂಟಿ ಕವಾಯುತು ಈ ವಲಯದ ಅತ್ಯಂತ ದೊಡ್ಡ ಸೇನಾ ಕಸರತ್ತುಗಳಲ್ಲಿ ಒಂದಾಗಿದೆ.

ಅಮೆರಿಕ ಮತ್ತು ಭಾರತ ನಡುವೆ ಜಂಟಿ ನೌಕಾಸೇನಾ ಕವಾಯತು 1992ರಲ್ಲಿ ಆರಂಭವಾಗಿತ್ತು. ಅದು ಉಭಯ ದೇಶಗಳ ನಡುವಣ ಮಿಲಿಟರಿ ಸಹಕಾರದ ಆರಂಭದ ದ್ಯೋತಕವಾಗಿತ್ತು. 2002ರ ನಂತರ ಅದು ವಾರ್ಷಿಕ ಕಾರ್ಯಕ್ರಮವಾಯಿತು. ಅದನ್ನೀಗ 2009ರಿಂದ ಭಾರತ ಮತ್ತು ಪೆಸಿಫಿಕ್ ವಲಯದಲ್ಲಿ ಪರ್ಯಾಯವಾಗಿ ನಡೆಸಲಾಗುತ್ತಿದೆ.

ಮಲಬಾರ್ ಕವಾಯುತುಗಳನ್ನು ಚೀನಾದ ಬೆಳೆಯುತ್ತಿರುವ ಬೃಹತ್ ನೌಕಾ ಬಲ ಮತ್ತು ಭಾರತ–ಪೆಸಿಫಿಕ್ ವಲಯದಲ್ಲಿ ಅದರ ಹೆಚ್ಚುತ್ತಿರುವ ಪಾತ್ರದ ವಿರುದ್ಧ ನಿರ್ದೇಶಿತವಾಗಿದೆ ಎಂದೇ ಕಾಣಲಾಗುತ್ತಿದೆ. 2015ರಿಂದ ಈ ಕಸರತ್ತಿನಲ್ಲಿ ಭಾರತವು ಜಪಾನನ್ನು ಒಂದು ಕಾಯಂ ಪಾಲುದಾರನನ್ನಾಗಿ ಮಾಡಿರುವುದರಿಂದ ಇದು ಹೆಚ್ಚು ಸ್ಪಷ್ಟವಾಗಿದೆ. ಅಮೆರಿಕ, ಭಾರತ ಮತ್ತು ಜಪಾನ್ ನಡುವಣ ತ್ರಿಪಕ್ಷೀಯ ಭದ್ರತಾ ಮೈತ್ರಿಯು ಏಷ್ಯಾದಲ್ಲಿ ಅಮೆರಿಕದ ಭೌಗೋಳಿಕ–ರಾಜಕೀಯ ವ್ಯೂಹದ ಇನ್ನೊಂದು ಆಯಾಮವಾಗಿದೆ.

ಭಾರತ–ಅಮೆರಿಕ ರಕ್ಷಣಾ ಸಹಯೋಗವು ಮಲಬಾರ್ ಕಸರತ್ತುಗಳ ನಂತರ ಹೆಚ್ಚು ಬಲಗೊಂಡಿದೆ. ಭಾರತದ ನೆಲೆಗಳಲ್ಲಿ ಅಮೆರಿಕ್ಕೆ ವಾಯು ಮತ್ತು ನೌಕಾ ಪಡೆಗಳ ರಿಪೇರಿ, ನಿರ್ವಹಣೆ ಹಾಗೂ ಸರ್ವಿಸ್ ಸೌಲಭ್ಯಗಳನ್ನು ಒದಗಿಸಲು ಅನುವು ಮಾಡುವ ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೊರಾಂಡಮ್ ಅಗ್ರಿಮೆಂಟ್ (ಎಲ್ಇಎಂಓಎ)ಗೆ ಭಾರತ ಸಹಿ ಹಾಕಿದೆ. ಭಾರತವು ತನ್ನ ಒಂದು ಪ್ರಮುಖ ರಕ್ಷಣಾ ಪಾಲುದಾರ ಎಂಬ ಸ್ಥಾನಮಾನವನ್ನು ಅಮೆರಿಕ ನೀಡಿದೆ.

ಉಭಯ ಸಶಸ್ತ್ರ ಪಡೆಗಳ ನಡುವಿನ ಅಂತರ್–ಕಾರ್ಯಾಚರಣೆಗೆ (ಇಂಟರ್–ಆಪರೆಬಿಲಿಟಿ) ಹೆಚ್ಚಿನ ಒತ್ತನ್ನು ನೀಡಲಾಗಿದೆ. ಉಭಯ ಸಶಸ್ತ್ರ ಪಡೆಗಳು ಮತ್ತು ಅವುಗಳ ಉಪಕರಣಗಳು ಜಂಟಿಯಾಗಿ ಕಾರ್ಯಾಚರಿಸಬಹುದು ಎನ್ನುವುದು ಇದರ ಅರ್ಥವಾಗಿದೆ. ಈ ಅಂತರ್–ಕಾರ್ಯಾಚರಣೆಯನ್ನು ಸಾಧಿಸಲು ಮಲಬಾರ್ ಕಸರತ್ತುಗಳು ಒಂದು ಪ್ರಮುಖ ವೇದಿಕೆಯಾಗಿದೆ. ಭಾರತದ ಹೆಚ್ಚಿನ ಯುದ್ಧ ನೌಕೆಗಳು ಮತ್ತು ಸಬ್‌ಮೆರಿನ್‌ಗಳನ್ನು ಸೋವಿಯತ್ ಒಕ್ಕೂಟ ಹಾಗೂ ನಂತರ ರಷ್ಯಾ ಸರಬರಾಜು ಮಾಡಿರುವುದರಿಂದ ಇದು ಅಮೆರಿಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿದೆ.

ಮಲಬಾರ್ ಸೇನಾ ಕವಾಯತಿನಲ್ಲಿ ಅಮೆರಿಕದ ಪಡೆಗಳ ನೇತೃತ್ವವನ್ನು ಯುಎಸ್ಎಸ್ ನಿಮಿಟ್ಜ್ ವಹಿಸಿಕೊಂಡಿತ್ತು. ಅದು ಅಣುಶಕ್ತಿ ಚಾಲಿತ ಯುದ್ಧನೌಕೆಯಾಗಿದ್ದು ಅದರಲ್ಲಿ ಪರಮಾಣು ಶಸ್ತ್ರಾಸ್ತ್ರಗಳು ಇವೆ. ಪರಮಾಣು ಶಸ್ತ್ರಗಳಿರುವ ನೌಕೆಗಳು ತನ್ನ ಬಂದರುಗಳಿಗೆ ಪ್ರವೇಶಿಸುವುದನ್ನು ಭಾರತ ಮೊದಲೆಲ್ಲ ವಿರೋಧಿಸುತ್ತಿತ್ತು. ಆದರೆ ಈಗ ಭಾರತದ ನೌಕಾಪಡೆಯ ನೌಕೆಗಳು ಅಂಥ ಅಣ್ವಸ್ತ್ರಯುಕ್ತ ನೌಕೆಗಳ ಜತೆಯಲ್ಲೇ ಕಸರತ್ತು ನಡೆಸುತ್ತಿವೆ.

ಮಲಬಾರ್ ಕಸರತ್ತುಗಳಲ್ಲಿ ಆಸ್ಟ್ರೇಲಿಯಾ ಕೂಡ ಭಾಗವಹಿಸಬೇಕೆನ್ನುವುದು ಅಮೆರಿಕದ ಆಸೆಯಾಗಿತ್ತು. ಈ ವರ್ಷವೇ ಈ ಕಸರತ್ತಿನ ಭಾಗವಾಗಬೇಕು ಎನ್ನುವುದು ಆಸ್ಟ್ರೇಲಿಯಾ ಸರಕಾರದ ಬಯಕೆ–ಯಾಗಿತ್ತು. ಆಸ್ಟ್ರೇಲಿಯಾ ಪ್ರವೇಶ ಮಾಡುವಂತೆ ಮಾಡುವುದು ಮೋದಿ ಸರಕಾರದ ಮುಂದಿನ ತಾರ್ಕಿಕ ಹೆಜ್ಜೆಯಾಗಲಿದೆ. ಅಲ್ಲಿಗೆ ಇದು ಚತುಷ್ಕೋಣ ಮೈತ್ರಿ ಆಗಲಿದೆ. ಅದು ಅಮೆರಿಕದ ಗುರಿಯೂ ಆಗಿದೆ.

ಮಲಬಾರ್ ಸೇನಾ ಕವಾಯತು, ಭಾರತವು ಚೀನಾವನ್ನು ತಡೆಯುವ ಗುರಿಯೊಂದಿಗೆ ಏಷ್ಯಾದಲ್ಲಿ ವ್ಯೂಹ ರಚಿಸುತ್ತಿರುವ ಅಮೆರಿಕದ ಪೂರ್ಣ ಪ್ರಮಾಣದ ಪಾಲುದಾರ ಆಗಿರುವುದರ ಸಂಕೇತವಾಗಿದೆ. ಇದು ಹೇಗೆ ಭಾರತದ ರಾಷ್ಟ್ರೀಯ ಹಿತಗಳಿಗೆ ಅನುಕೂಲವಾಗಲಿದೆ ಎನ್ನುವುದನ್ನು ಮೋದಿ ಸರಕಾರವೇ ಉತ್ತರಿಸಬೇಕು. ಅಮೆರಿಕದೊಂದಿಗೆ ಮಿಲಿಟರಿ ಮೈತ್ರಿ ಭಾರತದ ಸಾರ್ವಭೌಮತೆ ಮತ್ತು ವ್ಯೂಹಾತ್ಮಕ ಸ್ವಾಯತ್ತೆಗೆ ಅಡ್ಡಿಯಾಗಲಿದೆ. ●

---

➔ ಬಂಡವಾಳವಾದವು ವ್ಯಕ್ತಿಗಳನ್ನು ಬಿಡಿ ಬಿಡಿಯಾದ, ಸರ್ವತಂತ್ರ ಸ್ವತಂತ್ರ ಘಟಕಗಳೆನ್ನುತ್ತದೆ. ಸಮಾಜದ ಸಂಘಟನೆಯ ಧ್ಯೇಯೋದ್ದೇಶವೇ ವ್ಯಕ್ತಿಗಳ ವಿಕಾಸಕ್ಕಾಗಿ ಎಂದು ನಂಬುತ್ತದೆ. ಈ ದೃಷ್ಟಿಯಿಂದಲೇ ಸಮುದಾಯದ ಸೇವೆ ಮಾಡಲು ಬಂಡವಳಿಗರಿಂದ ಅನುದಾನ ಪಡೆಯುವ ಸರ್ಕಾ–ರೇತರ ಸೇವಾ ಸಂಸ್ಥೆಗಳ ದೃಷ್ಟಿಯೂ ಮೂಲತಃ ಬಂಡವಾಳವಾದೀ ದೃಷ್ಟಿಯೇ.

**ಮಗುವನ್ನು ಹುಟ್ಟಿದಾರಭ್ಯ ಬಾಧಿಸುವ ತೊಂದರೆಗಳಿಗೆ**

**21ನೆಯ ಹೆಚ್ಚುವರಿ ವರ್ಣತಂತು ಕಾರಣ**

ಭಾರತದಲ್ಲಿ ಅಂಗವಿಕಲರು, ಬುದ್ಧಿಮಾಂದ್ಯರು, ವಿಕಲಚೇತನರು, ದಿವ್ಯಚೇತನರು, ವಿಶೇಷ ಮಕ್ಕಳು, ಎಂಬೆಲ್ಲಾ ಹೆಸರಿನಲ್ಲಿ ಗುರುತಿಸುವ ವಿವಿಧ ಊನಗಳಿಂದ ನರಳುವ ಮಕ್ಕಳು ಮತ್ತು ವಯಸ್ಕರ ಸೇವೆಯಲ್ಲಿ ಗುರುತಿಸಿಕೊಂಡಿರುವ ಸಂಘ–ಸಂಸ್ಥೆಗಳು ಬಹುತೇಕವಾಗಿ ಸರ್ಕಾರೇತರ ಸೇವಾ ಸಂಸ್ಥೆಗಳು. ಇವು ಮಾದರಿಯೆಂದು ಅನುಸರಿಸುವ ವಿದೇಶೀ ಮೂಲದ ಸೇವಾ ಕೇಂದ್ರಗಳೂ ಬಹುಮಟ್ಟಿಗೆ ಬಂಡವಾಳವಾದೀ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿವಾದೀ ಸಂಸ್ಥೆಗಳು. ವಿಶೇಷ ಮಕ್ಕಳ ಸಮಸ್ಯೆಗಳ ಬಗ್ಗೆ ಅಪಾರ ಅನುಭವವಿರುವ ಶ್ರೀಮತಿ ಚಂಪಾ ಹಿಂದಿನ ಮತ್ತು ಈಗಿನ ಸಮಾಜವಾದೀ ದೇಶಗಳಲ್ಲಿ ಈ ಸಮಸ್ಯೆಯನ್ನು ಹೇಗೆ ಎದುರಿಸಿದ್ದಾರೆ ಎಂದು ಅಭ್ಯಸಿಸಿದರೆ, ಈಗಿರುವ ಮಾದರಿಗಳಿಗಿಂತ ಭಿನ್ನವಾದ ದಾರಿಗಳಿದ್ದರೆ ಅವನ್ನೂ ತಮ್ಮದಾಗಿಸಿಕೊಳ್ಳುವುದು ಸಾಧ್ಯವಾಗಬಹುದು.

ಪ್ರತಿ ಮಗುವೂ ತನ್ನ ತಾಯಿ–ತಂದೆಯಿಂದ ತಲಾ 23 ವರ್ಣತಂತುಗಳನ್ನು ಪಡೆದು ಹುಟ್ಟುತ್ತವೆ. ಅಂದರೆ, ಎಲ್ಲರ ಜೀವಕೋಶಗಳ ವಂಶವಾಹಿನಿ ಬೀಜಾಣುವಿನಲ್ಲಿ 46 ವರ್ಣತಂತುಗಳು ಇರುತ್ತವೆ. ಆದರೆ ಕೆಲವರಲ್ಲಿ, ಯಾವುದೋ ನಿಗೂಢ ಕಾರಣಕ್ಕಾಗಿ, ಅಂಡಾಣು ಮತ್ತು ವೀರ್ಯಾಣುವಿನ ಸಂಯೋಗದೊಂದಿಗೆ ಫಲಿತಾಗ 21ನೆಯ ವರ್ಣತಂತು ದ್ವಿಗುಣಗೊಂಡು ವರ್ಣತಂತುಗಳ ಸಂಖ್ಯೆ 47 ಆಗುತ್ತದೆ. ಹಾಗೆ ದ್ವಿಗುಣಗೊಂಡ ರೋಗಿಷ್ಠ ವರ್ಣತಂತು ಬೇರೆಲ್ಲಾ ವರ್ಣತಂತುಗಳಿಗಿಂತ ಬಲಾಢ್ಯವಾಗಿರುತ್ತದೆ. ಅಂಥ ಮಗುವನ್ನು ಹುಟ್ಟಿದಾರಭ್ಯ ಬಾಧಿಸುವ, ಹೃದಯದ ತೊಂದರೆ, ಕುಂಠಿತವಾದ ಮಾನಸಿಕ ಮತ್ತು ದೈಹಿಕ ಬೆಳವಣಿಗೆ, ಸುಲಭವಾಗಿ ಕಾಯಿಲೆಗೆ ಸುಲಭವಾಗಿ ಪಕ್ಕಾಗುವಂಥ ಸ್ಥಿತಿ, ನೆಟ್ಟಗೆ ನಿಲ್ಲಲಾಗದಷ್ಟು ಮೃದುವಾದ ದೇಹ, ಅಲ್ಪಾಯುಸ್ಸು ಮುಂತಾದ ತೀವ್ರ ತೊಂದರೆಗಳಿಗೆ ಮಗುವಿನ ಜೀವಕೋಶದಲ್ಲಿನ 21ನೆಯ ಹೆಚ್ಚುವರಿ ವರ್ಣತಂತು ಕಾರಣ ಎಂದು 19ನೇ ಶತಮಾನದ ಕೊನೆಯ ಭಾಗದಲ್ಲಿಡಾ. ಜಾನ್ ಲ್ಯಾಂಗ್‌ಡನ್‌ಡೌನ್ ಎಂಬ ವೈದ್ಯ ಮೊದಲ ಬಾರಿಗೆ ಗುರುತಿಸಿದ. ಇದರಿಂದಾಗಿ ಈ ತೊಂದರೆಗಳ ಗುಂಪಿಗೆ ಡೌನ್ಸ್ ಸಿಂಡ್ರೋಮ್ ಎಂಬ ಹೆಸರು ಬಂದಿದೆ.

**ಬಂಡವಾಳವಾದವೇ 21ನೇ ಕ್ರೋಮೋಸೋಮ್**

ಈ ಪುಸ್ತಕದ ಶೀರ್ಷಿಕೆ–21ನೇ ಕ್ರೋಮೋಸೋಮ್‌ಗೆ ಈ ಶತಮಾನದ ಕಾರ್ಪೊರೇಟ್ ಬಂಡವಾಳವಾದದ ಹಿನ್ನೆಲೆಯಲ್ಲಿ ವಿಶೇಷ ಮಹತ್ವ ಪ್ರಾಪ್ತವಾಗುತ್ತದೆ. 21ನೇ ಶತಮಾನದ ಜಗತ್ತು, ಪರಿಸರ ನಾಶ, ಅಸಮತೋಲನಗೊಂಡ ಹವಾಮಾನ, ನಿರುದ್ಯೋಗ–ಬಡತನದ ಹೆಚ್ಚಳ, ಜಗತ್ತಿನ ಕೆಲವೇ ಜನರ ಕೈಲಿ ಸಂಪತ್ತಿನ ಕ್ರೋಢೀಕರಣ, ಯುದ್ಧ ಮತ್ತು ಭಯೋತ್ಪಾದನೆಗಳನ್ನು ಉತ್ತೇಜಿಸುವ ಶಸ್ತ್ರಾಸ್ತ್ರ ವ್ಯಾಪಾರ ಇವೇ ಮುಂತಾದ ವೈಪರೀತ್ಯಗಳಿಂದ ನರಳುತ್ತಿದೆ. ಅಂದರೆ 21ನೇ ಶತಮಾನದ ಜಗತ್ತು ಶ್ರಮಜೀವಿಗಳು ಉತ್ಪಾದಿಸುವ ಮೌಲ್ಯವನ್ನು ಹೆಚ್ಚುವರಿ ಮೌಲ್ಯವನ್ನಾಗಿ ಲಪಟಾಯಿಸಿ ಇಡೀ ಜಗತ್ತಿನ ತೊಂದರೆಗಳಿಗೆ ಕಾರಣವಾಗಿರುವ ಬಂಡವಾಳವಾದವೇ ರೋಗಿಷ್ಠ 21ನೇ ಕ್ರೋಮೋಸೋಮ್ ಆಗಿದೆ.

17ನೇ ಶತಮಾನದಲ್ಲಿ ಔದ್ಯೋಗಿಕ ಕ್ರಾಂತಿಯಾದ ಮೇಲೆ ಯೂರೋಪಿನಲ್ಲಿ ಜನ್ಮತಾಳಿದ ಬಂಡವಾಳವಾದ, ಹೆಜ್ಜೆ ಹೆಜ್ಜೆಗೂತನ್ನ ಕಾಲಿಗೆ ತಾನೇ ತೊಡರುಹಾಕಿಕೊಳ್ಳುತ್ತಾ, 19ನೇ ಶತಮಾನದ ಹೊತ್ತಿಗೆ ವ್ಯಾಪಾರ–ಯುದ್ಧ–ವಸಾಹತೀಕರಣಗಳ ಮೂಲಕ ಜಾಗತೀಕರಣಗೊಂಡು ರೋಗಜನಕ ರಾಕ್ಷಸನಾಗಿ ಬೆಳೆಯಿತು. ಅದರಿಂದಾಗಿ ಇಡೀ ವಿಶ್ವವೇ ಈಗಲೂ ನರಳುತ್ತಿದೆ. ಬಂಡವಾಳಶಾಹಿಯು ಇಡೀ ವಿಶ್ವವನ್ನು ಕಾಡಿಸುವ ರೋಗಜನಕ ವ್ಯವಸ್ಥೆಯೆಂದು ಮೊದಲು ಗುರುತಿಸಿದ್ದು ಕಾರ್ಲ್ ಮಾರ್ಕ್ಸ್ ಮತು ಎಂಗೆಲ್ಸ್. 21ನೆಯ ಶತಮಾನದಲ್ಲಿ ಉಲ್ಬಣಿಸಿರುವ ಬಂಡವಾಳವಾದ ಹುಟ್ಟಿಸಿರುವ 'ರಾಜಕೀಯಡೌನ್ಸ್ ಸಿಂಡ್ರೋಮ್'ನಿಂದ ಇಡೀ ಜಗತ್ತೇ ಜಾಗತೀಕರ–ಣಗೊಂಡು ಯಾವ ದೇಶವನ್ನು ನೋಡಿದರೂ ಒಂದೇ ರೀತಿಯ ರೋಗಲಕ್ಷಣಗಳನ್ನು ಪ್ರಕಟಿಸುತ್ತಿವೆ. ಹೀಗಾಗಿ ಡೌನ್ಸ್‌ಸಿಂಡ್ರೋಮ್ ಇರುವ ಮಕ್ಕಳ ತಾಯಿ–ತಂದೆಯರಿಗೆ ಚಂಪಾ ಅವರ ಕೃತಿಯ ಅಧ್ಯಯನ ಎಷ್ಟು ಅಗತ್ಯವೋ ಜಗತ್ತಿನ ಸಂಪತ್ತನ್ನು ಸೃಷ್ಟಿಸುವ ಶ್ರಮಜೀವಿಗಳಿಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕ್ಯಾಪಿಟಲ್ ನ ಅಧ್ಯಯನ ಅಷ್ಟೇ ಅಗತ್ಯ. 21ನೆಯ ಕ್ರೋಮೋಸೋಮ್ ಹೇಗೆ ರೋಗಜನಕವೋ ಹಾಗೆಯೇ ಶ್ರಮಜೀವಿಗಳು ಸೃಷ್ಟಿಸಿದ ಸಂಪತ್ತನ್ನು ಹೆಚ್ಚುವರಿ ಮೌಲ್ಯವನ್ನಾಗಿಸಿ ಶೋಷಿಸುವ ಬಂಡವಾಳವಾದವೂ ರೋಗ ಜನಕವೇ.

ವಿಷಯ ತಜ್ಞೆಯಾಗಿ, ಸಹಾನುಕಂಪದ ಕಾರ್ಯಕರ್ತೆಯಾಗಿ, ಬಹುಶ್ರುತೆಯಾಗಿ, ವಿಶಿಷ್ಟ ಪ್ರತಿಭೆಯ ಸಂವೇದನಾಶೀಲ ಬರಹಗಾರ್ತಿಯಾಗಿ, ತಮ್ಮ ಬದುಕಿನ ಒಟ್ಟನುಭವವನ್ನು ತೊಡಗಿಸಿಕೊಂಡು ಪ್ರಸ್ತುತ ಕೃತಿಯನ್ನು ರಚಿಸಿರುವ ಶ್ರೀಮತಿ ಚಂಪಾ ಅವರಿಗೆ ನಮ್ಮೆಲ್ಲರ ಅಭಿನಂದನೆ–ಕೃತಜ್ಞತೆಗಳು ಸಲ್ಲುತ್ತವೆ. ●

# ಸೆ.14 : ಬೆಂಗಳೂರಿನಲ್ಲಿ ‘ಮಹಾಪ್ರದರ್ಶನ’ ರಾಜ್ಯದ್ಯಂತ ನಡೆದಿದೆ ಕಾರ್ಮಿಕ ವರ್ಗದ ಭರದ ಸಿದ್ದತೆ

- **ಜುಲೈ 29 ರಿಂದ ವಿಧುರಾಶ್ವತ್ಥದಿಂದ ಕುಂದಾಪುರದವರೆಗೂ ರಾಜ್ಯ ಮಟ್ಟದ ಜಾಥಾ**
- **ಆಗಸ್ಟ್ 14 ರಂದು ಅಹೋರಾತ್ರಿ ಧರಣಿ ಸತ್ಯಾಗ್ರಹ, ಪ್ರತಿಜ್ಞೆ ಸ್ವೀಕಾರ**
- **ಅಗಸ್ಟ್ ಕೊನೆ ಮತ್ತು ಸೆಪ್ಟೆಂಬರ್ ಮೊದಲ ವಾರಗಳಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಜಾಥಾಗಳು**

ಕೆ ಮಹಾಂತೇಶ

ಕೇಂದ್ರದ ಮೋದಿ ಸರಕಾರಜಾರಿ ಮಾಡುತ್ತಿರುವ ಪ್ರಮುಖ ಕಾರ್ಮಿಕ ವಿರೋಧಿ ನೀತಿಗಳ ವಿರುದ್ದ, ಕಾರ್ಮಿಕರಿಗೆ ಕನಿಷ್ಟ ವೇತನ ರೂ. 18000/– ನಿಗದಿ, ಕೆಲಸದ ಭದ್ರತೆ ಒದಗಿಸಬೇಕು, ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಸೇರಿದಂತೆ ಹಾಗು ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ, ವಸತಿ ಹೀನ ಕಾರ್ಮಿಕರಿಗೆ ವಸತಿ ಯೋಜನೆಗಳ ಜಾರಿ, ರಾಜ್ಯದಲ್ಲಿನ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗಾಗಿ ಹಾಗೂ ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡುವ ಕಾನೂನು ಜಾರಿ, ಸಮಾನ ಕೆಲಸಕ್ಕೆ ಸಮಾನ ವೇತನ ಹಾಗು ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವ ಕಾನೂನು ಜಾರಿ ಮುಂತಾದ ಕಾರ್ಮಿಕ ವರ್ಗದ ಬೇಡಿಕೆಗಳನ್ನು ಒತ್ತಾಯಿಸಿ 14 ಸೆಪ್ಟೆಂಬರ್ 2017 ರಂದು ಬೆಂಗಳೂರಿನಲ್ಲಿ ಒಂದು ಲಕ್ಷ ಕಾರ್ಮಿಕರ ಬೃಹತ್ ಪ್ರತಿಭಟನೆಯನ್ನು ನಡೆಸಲು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ರಾಜ್ಯ ಸಮಿತಿ ನಿರ್ಧರಿಸಿ ಅದಕ್ಕೆ ವ್ಯಾಪಕ ತಯಾರಿಗಳನ್ನು ಆರಂಭಿಸಿದೆ. ಈ ಹೋರಾಟದ ಭಾಗವಾಗಿ ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಈಗಾಗಲೇ ಒಂದು ಹಾಗೂ ಎರಡು ದಿನಗಳ ಸಂಘಟನಾ ಕಾರ್ಯಗಾರಗಳನ್ನು ನಡೆದು ಸುಮಾರು 4500 ಪ್ರಮುಖ ಸಂಘಗಳ ಜಿಲ್ಲಾ ಪದಾಧಿಕಾರಿಗಳಿಗೆ ಚಳವಳಿಯ ಬೇಡಿಕೆಗಳು ಮತ್ತು ಸಂಘಟನೆ ಕುರಿತು ತಿಳುವಳಿಕೆ ನೀಡಲಾಗಿದೆ.

ಕಳೆದ ಜನವರಿ ತಿಂಗಳಲ್ಲಿ ಮೂರು ದಿನಗಳ ಕಾಲ ಇದೇ ಬೇಡಿಕೆಗಳಿಗಾಗಿ ಸಾವಿರಾರು ಕಾರ್ಮಿಕರು ಬೆಂಗಳೂರಿನಲ್ಲಿ ಅನಿರ್ಧಿಷ್ಟ ಅಹೋರಾತ್ರಿ ಧರಣಿ ನಡೆಸಿದ್ದರು. ಆಗ ಮಧ್ಯ ಪ್ರವೇಶಿಸಿದ್ದ ಕಾರ್ಮಿಕ ಸಚಿವರು ಹಾಗೂ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಬೇಡಿಕೆಗಳ ಈಡೇರಿಕೆಗೆ ಅಗತ್ಯ ಕ್ರಮ ವಹಿಸುವ ಭರವಸೆ ನೀಡಿದ್ದರು. ಅಲ್ಲದೆ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಿಗದಿಪಡಿಸುವ ಭರವಸೆ ನೀಡಿದ್ದರಿಂದ ಹೋರಾಟ ಹಿಂಪಡೆಯಲಾಗಿತ್ತು. ಆದರೆ ಅದು ಈಡೇರಲಿಲ್ಲ. ಮಾತ್ರವಲ್ಲ ನೀಡಿದ ಭರವಸೆಯಂತೆ ಕಾರ್ಮಿಕ ಸಚಿವರು ದುಡಿಯುವ ವರ್ಗದ ಬೇಡಿಕೆಗಳ ಈಡೇರಿಕೆಗೆ ಯಾವುದೇ ಕ್ರಮವಹಿಸಲಿಲ್ಲ ಅಲ್ಲದೆ ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮಗಳು, ರೈಲ್ವೆ ನಿಲ್ದಾಣಗಳನ್ನು ಖಾಸಗೀಕರಣ ಮಾಡಲು ಮೋದಿ ಸರಕಾರ ಮುಂದಾಗಿದೆ ಈ ಹಿನ್ನಲೆಯಲ್ಲಿ ಸೆಪ್ಟೆಂಬರ್ 14 ರಂದು ಈ ಮಹಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

**ಕಾರ್ಮಿಕ ಹಕ್ಕುಗಳ ಜಾಗೃತಿ ಜಾಥಾ :**

ರಾಜ್ಯದಲ್ಲಿರುವ ಹೊಸ ವಿಭಾಗಗಳ ಕಾರ್ಮಿಕರ ನಡುವೆ ಸಂಘಟನೆಗಳನ್ನು ಕಟ್ಟಿ ಬೆಳೆಸಲು, ಸೆಪ್ಟೆಂಬರ್ ಚಳುವಳಿಯನ್ನು ವ್ಯಾಪಕಗೊಳಿಸುವ ಸಲುವಾಗಿ ಮತ್ತು ‘ತಲುಪದಿರುವ ಕಾರ್ಮಿಕರನ್ನು ತಲುಪಲು’ ಇದೇ ಜುಲೈ 29 ರಿಂದ ಆಗಸ್ಟ್ 13 ‘ಕಾರ್ಮಿಕ ಹಕ್ಕುಗಳ ಜಾಗೃತಿ ಜಾಥಾ’ವನ್ನು ರಾಜ್ಯ ಮೂವತ್ತು ಜಿಲ್ಲೆಗಳಿಗೆ ತಲುಪುವಂತೆ ಆಯೋಜಿಸಲಾಗಿದೆ. ಮತ್ತು 39 ಕಡೆಗಳಲ್ಲಿ ಬೃಹತ್ ಪ್ರಮಾಣದ ಸಭೆಗಳನ್ನು ನಡೆಸಲಾಗುವುದು ಅಲ್ಲದೆ ಜಾಥಾದ ಉದ್ದಕ್ಕೂ ಹಾಡು, ನಾಟಕ, ಕರಪತ್ರ ವಿತರಣೆ, ಭಾಷಣಗಳನ್ನು ಆಯೋಜಿಸಲಾಗಿದೆ. ಜುಲೈ 29 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಸ್ವಾತಂತ್ರ್ಯ ಹೋರಾಟದ ಕೇಂದ್ರ ‘ವಿಧುರಾಶ್ವತ್ಥ’ ದಿಂದ ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ಎ.ಕೆ. ಪದ್ಮನಾಭನ್ ಹಾಗೂ ಹಿರಿಯ ಕಾರ್ಮಿಕ ಮುಂದಾಳು ವಿಜೆಕೆ ನಾಯರ್ ಚಾಲನೆ ನೀಡಲಿರುವ ಈ ಜಾಥಾ ಆಗಸ್ಟ್ 13 ರಂದು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸಮಾರೋಪಗೊಳ್ಳಲಿದೆ. ಇದಾದ ನಂತರದಲ್ಲಿ ಜಿಲ್ಲಾ ಹಾಗೂ ತಾಲೂಕ ಮಟ್ಟದ ಜಾಥಾಗಳನ್ನು ಆಗಸ್ಟ್ ಕೊನೆಯ ಹಾಗೂ ಸೆಪ್ಟೆಂಬರ್ ಮೊದಲ ವಾರದಲ್ಲಿ ಸಂಘಟಿಸಲಾಗುವುದು.


**ಆಗಸ್ಟ್ 14 ರ ಮಧ್ಯ ರಾತ್ರಿ ಧರಣಿ :**

ಕಾರ್ಮಿಕ ವರ್ಗದ ಪ್ರಮುಖ ಬೇಡಿಕೆಗಳಿಗಾಗಿ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಆಶೋತ್ತರಗಳ ಈಡೇರಿಕೆಗಾಗಿ ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಆಗಸ್ಟ್ 14 ಸಂಜೆಯಿಂದ ಮಧ್ಯರಾತ್ರಿವರೆಗೆ ಕಾರ್ಮಿಕರ ಸತ್ಯಾಗ್ರಹ ನಡೆಸಿ ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮ ನಡೆಸಲಾಗುವುದು

**ಚಳವಳಿಯ ಪ್ರಮುಖ ಪ್ರಶ್ನೆಗಳು :**

- **ಮೋದಿ ಸರಕಾರದಿಂದ ಕಾರ್ಮಿಕರಿಗೆ ವಂಚನೆ :** ನರೇಂದ್ರ ಮೋದಿ ಸರಕಾರ ದೇಶದಲ್ಲಿ ಜಾರಿಯಲ್ಲಿರುವ 44 ಕಾರ್ಮಿಕ ಕಾನೂನುಗಳನ್ನು ಕೋಡ್ ಆನ್ ವೇಜಸ್, ಕೋಡ್ ಆನ್ ಇಂಡಸ್ಟ್ರೀಯಲ್ ರಿಲೇಷನ್ ಹಾಗೂ ಕೋಡ್‌ಆನ್ ಸೊಷಿಯಲ್ ಸೆಕ್ಯೂರಿಟಿ ಎನ್ನುವ ಮೂರು ಕೋಡ್‌ಗಳನ್ನಾಗಿ ರೂಪಿಸಿದೆ. ಇತ್ತೀಚಿಗೆ ಸಾಮಾಜಿಕ ಭದ್ರತಾ ಸಂಹಿತೆಯನ್ನು ಸಾರ್ವಜನಿಕ ಚರ್ಚೆಗಾಗಿ ಪ್ರಕಟಿಸಿದೆ. ಆದರೆ ಈ ತಿದ್ದುಪಡಿಗಳ ಮೂಲಕ ಫ್ಯಾಕ್ಟರಿ ಕಾಯಿದೆಗೆ ತಿದ್ದುಪಡಿ ತಂದು 40 ಕಾರ್ಮಿಕರಿಗಿಂತ ಕಡಿಮೆ ಇದ್ದರೆ ಅಂತಹ ಫ್ಯಾಕ್ಟರಿ ಕಾರ್ಮಿಕ ಕಾನೂನುಗಳಿಂದ ವಿನಾಯತಿ ಕೊಡಲಾಗಿದೆ. ಅಂದರೆ ಒಟ್ಟು ಕಾರ್ಮಿಕರ 72% ಗಿಂತ ಹೆಚ್ಚು ಕಾರ್ಮಿಕರ ಕಾನೂನಿನ ಚೌಕಟ್ಟಿನಿಂದ ಹೊರಗುಳಿಯುತ್ತಾರೆ. ಇಂತಹ ಕಾರ್ಮಿಕರನ್ನು ಸ್ವಯಂ ಉದ್ಯೋಗಿಗಳೆಂದು ಕರೆಯಲಾಗುತ್ತದೆ. ಅಂದರೆ ದೊಡ್ಡ ಸಂಖ್ಯೆಯ ಕಾರ್ಮಿಕರನ್ನು ಸಾಮಾಜಿಕ ಭದ್ರತಾ ಕಾನೂನಿನಿಂದ ಹೊರಗಿಡುವ ಚಾಲಾಕಿತನ ಕೇಂದ್ರ ಸರಕಾರದ್ದಾಗಿದೆ. ಮುಂದುವರೆದು ಸರ್ವೆ ವರದಿ 1000 ಜನ ಕೆಲಸಗಾರರಲ್ಲಿ 436 ಜನ ಹಂಗಾಮಿ ಅಥವಾ ಅರೆ–ಕಾಲಿಕ ಕೆಲದಿನಗಳ ಕೆಲಸಗಳನ್ನು ಮಾತ್ರ ಮಾಡುತ್ತಾರೆ. ಅಂದರೆ ಅವರಿಗೆ ಯಾವುದೇ ತರಹದ ಖಾಯಂ ಕೆಲಸ ಇರುವುದಿಲ್ಲ. ಹಾಗಾಗಿ ಗಳಿಕೆಯೂ ಇರುವುದಿಲ್ಲ. ಅಂದರೆ 43.6% ಜನರು ಕೆಲಸವಿಲ್ಲದೇ ನಿರುದ್ಯೋಗಿಗಳಾಗಿರುತ್ತಾರೆ. ಹಾಗಾದರೆ ಸಂಹಿತೆ ಸಾರ್ವತ್ರಿಕ ಎನ್ನುವುದು ಎಷ್ಟರ ಮಟ್ಟಿಗೆ ನಿಜವಾದದ್ದು ಎಂಬುದು ಮನಗಣಬೇಕಾಗಿದೆ. ಒಂದು ವೇಳೆ ಸಾಮಾಜಿಕ ಭದ್ರತಾ ಸಂಹಿತೆ ಜಾರಿಯಾದದ್ದೇ ಆದರೆ ಕೇಂದ್ರಿಯ ಕಾನೂನು ಬದ್ಧ 15 ಹಾಲಿ ಇರುವ ಸಾಮಾಜಿಕ ಸುರಕ್ಷೆಗಳು ಇಲ್ಲದಂತಾಗುತ್ತದೆ.
- ಈ ಗ ’ ಸರಕಾರ ತರ ಬಯಸುವ ಸಂಹಿತೆಗೆ ಸಂಘಟಿತ ವಲಯದ ಕಾರ್ಮಿಕರು 12.5% ರಷ್ಟು ವಂತಿಗೆ ಕೊಡಬೇಕು. ಅಸಂಘಟಿತ ವಲಯ ಸಂಹಿತೆಯ ಪ್ರಕಾರ ಸ್ವದ್ಯೋಗಿಗಳು 20% ವಂತಿಗೆಯನ್ನು ಕೊಡಬೇಕೆಂದು ಹೇಳುತ್ತದೆ. ಸರಕಾರದ ಯಾವುದೇ ವಂತಿಗೆ ಈ ಸಂಘಟನೆಗೆ ಇರುವುದಿಲ್ಲ. ಅಂದರೆ ಕಾರ್ಮಿಕರ ಉಳಿತಾಯವೇ ಸಾಮಾಜಿಕ ಭದ್ರತೆ. ಹೊಸ ಸಂಹಿತೆಯ ಪ್ರಕಾರ ಕಾರ್ಮಿಕ ಸಾಮಾಜಿಕ ಭದ್ರತೆಯ ಹೆಸರನ್ನು ನೊಂದಾಯಿಸಲು ಆಧಾರ ಕಡ್ಡಾಯವಾಗಿದೆ. ನೊಂದಣಿ ವೈಯಕ್ತಿವಾಗಿ ಮಾಡಬೇಕೇ ಅಥವಾ ಕೆಲಸ ಮಾಡುವ ಸಂಸ್ಥೆ ಮಾಡಬೇಕೆ ಎಂಬುವುದು ಸ್ಪಷ್ಟಪಡಿಸಿಲ್ಲ. ಉದ್ಯೋಗದಾತರಲ್ಲಿ ನೊಂದಾವಣಿ ಮಾಡಿದರೆ ಅಸಂಘಟಿತ ಕಾರ್ಮಿಕರು ಕೆಲಸದ ಬದಲಾವಣೆಯಾದಾಗ ಅಥವಾ ವಲಸೆ ಕಾರ್ಮಿಕರು ಅಂದರೆ ರಿಕ್ಷಾ ಎಳೆಯುವವರು, ಮನೆ ಕೆಲಸದವರು, ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರು ಹೇಗೆ ವಂತಿಗೆ ಕೊಡಬೇಕೆಂದು ಸ್ಪಷ್ಟಪಡಿಸಿಲ್ಲ. ಸರಕಾರದ ಈ ನೀತಿಗಳ ವಿರುದ್ದ ವಿಶಾಲ ತಳಹದಿಯ ಹೋರಾಟವನ್ನು ರೂಪಿಸಲು ಬಿ.ಎಂ.ಎಸ್ ಹೊರತುಪಡಿಸಿದ ಕೇಂದ್ರ

**ಪುಟ 10 ಕ್ಕೆ**



# ಆರ್ಯನ್ನರ ವಲಸೆ ಪ್ರಶ್ನೆಯ ವಿವಾದಕ್ಕೆ ತಳಿವಿಜ್ಞಾನದ ಪರಿಹಾರ

**ಟೋನಿ ಜೋಸೆಫ್**
ಮಾಜಿ ಸಂಪಾದಕ, ಬಿಸಿನೆಸ್ ವರ್ಲ್ಡ್,
ಸಂಗ್ರಹಾನುವಾದ : ಜೈಕುಮಾರ್.ಹೆಚ್.ಎಸ್
(ಕೃಪೆ: ದಿ ಹಿಂದೂ ಪತ್ರಿಕೆ)

**ಈ ಎಲ್ಲಾ ಆಧುನಿಕ ವಿಜ್ಞಾನದ ಸಂಶೋಧನೆಗಳಿಂದ ಬಹು ಸ್ಪಷ್ಟವಾಗಿ ತಿಳಿದು ಬಂದಿರುವುದೇನೆಂದರೆ, ನಾವು ಬಹು-ಮೂಲದ ನಾಗರೀಕತೆಯುವರು, ಏಕ-ಮೂಲದವರಲ್ಲ. ಹೀಗೆ ಬಹುಮೂಲಗಳ ಸಾಂಸ್ಕೃತಿಕ ಮಿಡಿತಗಳು, ಅದರ ಸಾಂಪ್ರದಾಯಿಕತೆ ಮತ್ತು ಆಚರಣೆಗಳನ್ನು ವೈವಿಧ್ಯಮಯ ಪೀಳಿಗೆಗಳಿಂದ ಮತ್ತು ವಲಸೆಯ ಇತಿಹಾಸಗಳಿಂದ ನಾವು ಪಡೆದುಕೊಂಡಿದ್ದೇವೆ... ಎಲ್ಲರೂ ವಿಲೀನವಾಗಿದ್ದಾರೆ ಮತ್ತು ನಾವು ಭಾರತೀಯ ಎಂದು ಕರೆಯುವ ಈ ನಾಗರೀಕತೆಗೆ ಕೊಡುಗೆ ನೀಡಿದ್ದಾರೆ. ನಾವೆಲ್ಲರೂ ವಲಸಿಗರು.**


**ಭಾರತದ ಇತಿಹಾಸದಲ್ಲಿ ಅತ್ಯಂತ ಕಗ್ಗಂಟಾಗಿ ಬಹುತೇಕ ಕಾದಾಟಕ್ಕೆ ಕಾರಣವಾಗಿದ್ದ ಪ್ರಶ್ನೆಗೀಗ ಉತ್ತರ ಸಿಗುತ್ತಿದೆ.**

ಮೊದಲಿಗೆ ಆ ಪ್ರಶ್ನೆ: ಆರ್ಯನ್ನರು ಭಾರತಕ್ಕೆ ವಲಸೆ ಬಂದವರೆ? ಎಂಬುದು.

ಸುಮಾರು ಕ್ರಿ.ಪೂ 2000-ಕ್ರಿ.ಪೂ 1500 ವರ್ಷಗಳ ಸಮಯದಲ್ಲಿ ಸಿಂಧೂ ಕಣಿವೆ ನಾಗರೀಕತೆ-ಯು ಅಂತ್ಯದಲ್ಲಿದ್ದಾಗ, ಇಂಡೋ-ಯೂರೋಪಿಯನ್ ಭಾಷೆ ಮಾತನಾಡುವವರು, ತಮ್ಮನ್ನೇ ತಾವು ಆರ್ಯನ್ನರೆಂದು ಕರೆದುಕೊಂಡು ತಮ್ಮ ಸಂಸ್ಕೃತಿ ಮತ್ತು ವಿಭಿನ್ನ ರೀತಿಯ ಸಾಂಸ್ಕೃತಿಕ ಆಚರಣೆಗಳ ಸಮೇತ ಒಳನುಸುಳಿ ಭಾರತಕ್ಕೆ ಬಂದವರೇ?

**ಅಗಾಧ ಪ್ರಮಾಣದ ಹೊಸ ಡಿಎನ್‌ಎ ಸಾಕ್ಷ್ಯಗಳನ್ನು ಆಧರಿಸಿರುವ ತಳಿಶಾಸ್ತ್ರ ಸಂಶೋಧನೆಯಿಂದ ವಿಶ್ವದೆಲ್ಲೆಡೆ ವಿಜ್ಞಾನಿಗಳು ಇದಕ್ಕೆ ನಿಖರವಾಗಿ "ಹೌದು" ಎನ್ನುವ ಉತ್ತರ ನೀಡುವಂತಾಗಿದೆ.**


ಇತ್ತೀಚಿನ ವರ್ಷಗಳಲ್ಲಿ ತಳಿಶಾಸ್ತ್ರ ಸಂಶೋಧನೆಯಿಂದ ಈ ಕುರಿತು ಬಂದ ವಿವರಣೆಗಳು ಆರ್ಯನ್ನರ ವಲಸೆ ಸಿದ್ಧಾಂತವನ್ನು ಪಕ್ಕಕ್ಕೆ ಸರಿಸಿರುವಂತಹವೇ ಆಗಿದ್ದರಿಂದ ಹಲವರಿಗೆ ಈ ಉತ್ತರವು ಆಶ್ಚರ್ಯಕರವಾಗಿಯೂ ಇನ್ನು ಕೆಲವರಿಗೆ ಶಾಕ್ ಎನ್ನುವಂತೆಯೂ ಕಾಣಿಸಿತ್ತು.



ಆದರೆ ಬಹುತೇಕ ತಜ್ಞರು ಆರ್ಯನ್ನರ ವಲಸೆ ಸಿದ್ಧಾಂತವನ್ನು ಪಕ್ಕಕ್ಕೆ ಸರಿಸುವ ಅಧ್ಯಯನಗಳ ಬಗೆಯನ್ನು ಪ್ರಶ್ನಿಸುತ್ತಲೇ ಬಂದಿದ್ದರು. ಇದೀಗ ಲಭಿಸಿರುವ ವೈ-ಕ್ರೋಮೋಸೋಮುಗಳ (ತಂದೆಯಿಂದ ಮಗನಿಗೆ ವರ್ಗಾವಣೆಯಾಗುವ ಕ್ರೋಮೋಸೋಮುಗಳು ಮಾತ್ರ, ಅಂದರೆ ತಂದೆಯ ವಂಶವಾಹಿ ತಂತು) ಪ್ರವಾಹೋಪಾದಿಯ ಹೊಸ ದತ್ತಾಂಶದಿಂದ ಕಡ್ಡಿ ಎರಡು ತುಂಡು ಮುರಿದ ಹಾಗೆ ಈ ಪ್ರಶ್ನೆಗೆ ಉತ್ತರ ದೊರೆತಿದೆ.

**ಪೀಳಿಗೆಯ ಹಾದಿ**

ಇತ್ತೀಚಿನವರೆಗೂ, ಕೇವಲ ಮಾತೃ ಡಿಎನ್‌ಎ (ಅಂದರೆ, ತಾಯಿಯಿಂದ ಮಗಳಿಗೆ ವರ್ಗಾವಣೆಯಾಗುವ ಡಿಎನ್‌ಎ ಮಾತ್ರ) ಲಭ್ಯವಿದ್ದು, ಇವುಗಳು ಸೂಚಿಸುತ್ತಿದ್ದದ್ದೇನೆಂದರೆ ಕಳೆದ 12,500 ವರ್ಷಗಳಿಂದೀಚೆಗೆ ಭಾರತದ ವಂಶವಾಹಿ ರಾಶಿಯೊಳಕ್ಕೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹೊರಗಿನಿಂದ ಒಳನುಸುಳುವಿಕೆ ಆಗಿದೆ ಎಂದು. ಆದರೆ, ಹೊಸ ವೈ-ಡಿಎನ್‌ಎ ದತ್ತಾಂಶವು ಈ ತಿಳುವಳಿಕೆಯನ್ನು ಬುಡಮೇಲು ಮಾಡಿದ್ದು, ಈ ಅವಧಿಯಲ್ಲಿ ಭಾರತದ ಪುರುಷ ವಂಶವಾಹಿನಿ ತಂತುಗಳಿಗೆ ದೊಡ್ಡ ಪ್ರಮಾಣದಲ್ಲಿ ಹೊರಗಿನಿಂದ ಒಳನುಸುಳುವಿಕೆ ಆಗಿದೆ ಎಂದು ಬಲವಾದ ಸಾಕ್ಷ್ಯ ಸಮೇತ ತಿಳಿಸಿದೆ.




ಮಾತೃ ಡಿಎನ್‌ಎ ಮತ್ತು ಪಿತೃ ಡಿಎನ್‌ಎ ಇವೆರಡಕ್ಕೂ ಇರುವ ವ್ಯತ್ಯಾಸವೆಂದರೆ: ಕಂಚಿನ ಯುಗದ ವಲಸೆಯಲ್ಲಿ ದೊಡ್ಡ ಪ್ರಮಾಣದ ಲಿಂಗ ತಾರತಮ್ಯ ಇತ್ತು. ಅಂದರೆ, ಆಗ ವಲಸೆ ಬಂದವರಲ್ಲಿ ದೊಡ್ಡ ಪ್ರಮಾಣದಲ್ಲಿ ಪುರುಷರೇ ಆಗಿದ್ದು, ಇವರ ವಂಶವಾಹಿನಿ ತಂತುಗಳ ಹರಿವು ಮಾತೃ ಡಿಎನ್‌ಎ ನಲ್ಲಿ ಬಿಂಬಿತವಾಗುವುದಿಲ್ಲ. ಆದರೆ, ಇದು ವೈ-ಡಿಎನ್‌ಎ ನಲ್ಲಿ ಬಿಂಬಿತವಾಗುತ್ತವೆ: ನಿರ್ದಿಷ್ಟವಾಗಿ, ಸುಮಾರು ಶೇ. 17.5ರಷ್ಟು ಭಾರತೀಯ ಪುರುಷ ವಂಶವಾಹಿ ತಂತುಗಳು ಒಂದೇ ಪೂರ್ವಜರಿಗೆ ಸೇರಿರುವ ಗುಂಪಿಗೆ (ಇದನ್ನು ಹ್ಯಾಪ್ಲೋಗ್ರೂಪ್ ಎನ್ನುತ್ತಾರೆ, 'R1a') ಸೇರಿದ್ದು, ಇಂದು ಇವು ಮಧ್ಯ ಏಷ್ಯಾ, ಯೂರೋಪ್ ಮತ್ತು ದಕ್ಷಿಣ ಏಷ್ಯಾದಾದ್ಯಂತ ಹರಡಿಕೊಂಡಿವೆ. ಇಂದಿನ ಉಕ್ರೇನ್ ಮೊಲ್ಡೊವಾ ಪ್ರದೇಶದ ಕ್ಯಾಸ್ಪಿಯನ್ ಸ್ಟೆಪ್ಪೀ ಪ್ರದೇಶದಿಂದ ವಂಶವಾಹಿ ತಂತು 'R1a' ಪಶ್ಚಿಮ ಮತ್ತು ಪೂರ್ವದುದ್ದಕ್ಕೂ ವಿವಿಧ ಉಪ-ಶಾಖೆಗಳಾಗಿ ವಿಂಗಡಣೆಯಾಗುತ್ತಾ ಹರಡಿಕೊಂಡಿದೆ.

ಈ ಸಂಶೋಧನೆಯ ಮುಂಚೂಣಿಯಲ್ಲಿರುವ ಬ್ರಿಟನ್‌ನ ವಿಜ್ಞಾನಿ ಪ್ರೊ. ಮಾರ್ಟಿನ್ ರಿಚರ್ಡ್ಸ್ ರವರು, 16 ಜೆನೆಟಿಕ್ ವಿಜ್ಞಾನಿಗಳ ನೇತೃತ್ವ ವಹಿಸಿದ್ದು, ಈ ರೀತಿ ಹೇಳುತ್ತಾರೆ: ಕಂಚಿನ ಯುಗದಲ್ಲಿ ಮಧ್ಯ ಏಷ್ಯಾದಿಂದ ವಂಶವಾಹಿ ತಂತುಗಳ ಒಳಹರಿವು ಪ್ರಮುಖವಾಗಿ ಪುರುಷ-ಚಾಲಿತವಾಗಿದ್ದು, ಪಿತೃಪ್ರಧಾನವಾಗಿತ್ತು ಮತ್ತು ಇಂತಹ ಸಾಮಾಜಿಕ ಸಂರಚನೆಯನ್ನು ಆರಂಭದ ಇಂಡೋ-ಯೂರೋಪಿಯನ್ ಸಮಾಜದಲ್ಲಿದ್ದ ಬೇಟೆ-ಪ್ರಧಾನ ವ್ಯವಸ್ಥೆಯಲ್ಲಿ ಕಾಣಬಹುದಿತ್ತು. ಇದು ಇಂಡೋ-ಯೂರೋಪಿಯನ್ ಭಾಷಿಕರ ಬಹುದೊಡ್ಡ ವಿಸ್ತರಣಾ ಪ್ರಕ್ರಿಯೆಯ ಭಾಗವಾಗಿದ್ದು, ಇದರ ಉಗಮವು ಪಾಂಟಿಕ್-ಕ್ಯಾಸ್ಪಿಯನ್ ಪ್ರದೇಶದಲ್ಲಿದ್ದು, ವೈ-ಕ್ರೋಮೋಸೋಮುಗಳ ಪೀಳಿಗೆಯನ್ನು ಯೂರೋಪ್-ಏಷ್ಯಾದ ದೊಡ್ಡ ಭೂಭಾಗದಾದ್ಯಂತ 5,000 ಮತ್ತು 3,500 ನಡುವಿನ ವರ್ಷಗಳ ಹಿಂದಿನ ಅವಧಿಯಲ್ಲಿ ಕೊಂಡೊಯ್ದಿದೆ.

ಕಂಚಿನ ಯುಗದಲ್ಲಿ ಮಧ್ಯ ಏಷ್ಯಾದಿಂದ ಭಾರತಕ್ಕೆ ಗಣನೀಯ ಪ್ರಮಾಣದಲ್ಲಿ ಇಂಡೋ-ಯೂರೋಪಿಯನ್ ಭಾಷಿಕರು ವಲಸೆ ಬಂದಿರುವುದಕ್ಕೆ ಅತ್ಯಂತ ಪರಿಣಾಮಕಾರಿ ಸಾಕ್ಷ್ಯವೆಂದರೆ, ಭಾರತದಲ್ಲಿ ವ್ಯಾಪಕವಾಗಿ 'R1a' ಹೆಸರಿನ ವಂಶವಾಹಿ ತಂತುಗಳು ಕಂಡುಬಂದಿರುವುದು ಎನ್ನುತ್ತಾರೆ ಪ್ರೊ. ಮಾರ್ಟಿನ್ ರಿಚರ್ಡ್ಸ್. ವಿಶ್ವದಾದ್ಯಂತ ಜೆನೆಟಿಕ್ ವಿಜ್ಞಾನಿಗಳ ಕಾರ್ಯದ ಮೂಲಕ ಅಗಾಧ ಪ್ರಮಾಣದ ಹೊಸ ದತ್ತಾಂಶ ಮತ್ತು ಫಲಿತಾಂಶಗಳನ್ನು ಈ ಹೊಸ ಸಂಶೋಧನೆ ಆಧರಿಸಿದೆ.

ಅಮೇರಿಕಾದ ವಿಜ್ಞಾನಿ ಪೀಟರ್ ಅಂಡರ್‌ಹಿಲ್ ರವರು 3 ವರ್ಷಗಳ ಹಿಂದೆ, 32 ವಿಜ್ಞಾನಿಗಳ ತಂಡದ ನೇತೃತ್ವದಲ್ಲಿದ್ದು 'R1a' ವಂಶವಾಹಿ ತಂತುಗಳ ವಿತರಣೆ ಮತ್ತು ಲಿಂಕೇಜ್‌ಗಳ ಅಗಾಧ ಪ್ರಮಾಣದ ಮ್ಯಾಪಿಂಗ್ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಯೂರೋಪ್-ಏಷ್ಯಾ ಭೂಭಾಗದಾದ್ಯಂತ 126 ವಿವಿಧ ಜನಸಂಖ್ಯಾ ಗುಂಪುಗಳಿಂದ 16,244 ಪುರುಷ ಸ್ಯಾಂಪಲ್‌ಗಳನ್ನು ಬಳಸಲಾಗಿದೆ. ಈ ಸಂಶೋಧನೆ ತಿಳಿಸುವುದೇನೆಂದರೆ, 'R1a' (ಹ್ಯಾಪ್ಲೋಗ್ರೂಪ್) ಹೆಸರಿನ ವಂಶವಾಹಿ ತಂತುವು ಯೂರೋಪ್, ಮಧ್ಯ ಏಷ್ಯಾ ಮತ್ತು ದಕ್ಷಿಣ ಏಷ್ಯಾದಾದ್ಯಂತ ಹರಡಿಕೊಂಡಿದೆ. 'R1a' ಗೆ ಎರಡು ಉಪ-ಹ್ಯಾಪ್ಲೋಗ್ರೂಪ್ ಗಳಿದ್ದು, ಇವುಗಳಲ್ಲಿ ಒಂದು (Z292) ಯೂರೋಪಿನಲ್ಲಿ (ಶೇ. 96ರಷ್ಟು) ಮಾತ್ರ ಕಂಡುಬಂದರೆ ಮತ್ತೊಂದು (Z93) ಮಧ್ಯ ಮತ್ತು ದಕ್ಷಿಣ ಏಷ್ಯಾಕ್ಕೆ (ಶೇ. 98.4ರಷ್ಟು) ಮಾತ್ರ ಸೀಮಿತವಾಗಿದೆ. ಇವೆರಡೂ ಉಪ-ಪೂರ್ವಜ ಗುಂಪುಗಳು 'R1a' ಪೂರ್ವಜ ಗುಂಪಿನಿಂದ ಟಿಸಿಲೊಡೆದಿರುವುದು ಕೇವಲ 5,800 ವರ್ಷಗಳ ಹಿಂದೆ ಮಾತ್ರವಷ್ಟೇ. ಅಲ್ಲದೇ, Z93 ಹೆಸರಿನ ವಂಶವಾಹಿ ತಂತುವಿನ ಮೂರು ಪ್ರಮುಖ ಉಪ ಗುಂಪುಗಳು ಭಾರತ, ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಹಿಮಾಲಯ ಗಳಲ್ಲಿ ಹರಡಿವೆ. 'R1a' ವಂಶವಾಹಿ ತಂತುವಿನ ವ್ಯಾಪಕ ವಿತರಣೆಯ ಕಾರಣ, ಭಾರತದಿಂದಲೇ ಈ ಗುಂಪುಗಳು ಉಗಮಿಸಿ ವಿವಿಧೆಡೆ ಹೊರಹೋಗಿರಬೇಕೆಂದು ತಪ್ಪಾಗಿ ತರ್ಕಿಸಲು ಕಾರಣವಾಗಿತ್ತು. ಆದರೆ, ಇದೀಗ ದೊಡ್ಡ ಪ್ರಮಾಣದಲ್ಲಿ ವೈ-ಕ್ರೋಮೋಸೋಮುಗಳ ದತ್ತಾಂಶ ಲಭಿಸಿದ್ದು, ಈ ತಪ್ಪನ್ನು ಸರಿಪಡಿಸಲು ಸಾಧ್ಯವಾಗಿದೆ.

**ವಂಶವಾಹಿ ತಂತುಗಳಿಂದ ವಲಸೆಯ ಕಾಲನಿಗದಿ**

ಈ ಹೊಸ ಸಾಕ್ಷ್ಯಾಧಾರಗಳಿಂದಾಗಿ ಕಂಚಿನ ಯುಗದಲ್ಲಿ ಭಾರತಕ್ಕೆ ಮಧ್ಯ ಏಷ್ಯಾದಿಂದ ಗಣನೀಯ ಪ್ರಮಾಣದಲ್ಲಿ ವಂಶವಾಹಿ ತಂತುಗಳ ಹರಿವು ಆಗಿ-ತ್ತು ಎಂಬುದು ನಮಗೆ ತಿಳಿಯುವುದರಿಂದ, ನಾವು ಇದರ ಕಾಲವನ್ನು ಅದರಲ್ಲೂ ಮುಖ್ಯವಾಗಿ, ಉಪ-ಪೂರ್ವಜ ಗುಂಪು Z93 ಯು ಮತ್ತೆ ಉಪ-ಗುಂಪುಗಳಾಗಿ ಟಿಸಿಲೊಡೆದಿರುವುದರ ಕಾಲವನ್ನು ನಿಗಧಿಪಡಿಸಬಹುದೇ? ತಳಿವಿಜ್ಞಾನಿಗಳು ಇದಕ್ಕೆ ಹೌದು ಎಂದು ಉತ್ತರಿಸುತ್ತಾರೆ. ವಿಶ್ವದಾದ್ಯಂತ ಸುಮಾರು 1,244 ವೈ-ಕ್ರೋಮೋಸೋಮುಗಳ ಅನಾವರಣ ದತ್ತಾಂಶ ಲಭ್ಯವಿರುವುದರಿಂದ ಪುರುಷರ ಜನಸಂಖ್ಯೆಯು ಕಾಲಾನುಕ್ರಮವಾಗಿ ಸ್ಫೋಟಗೊಳ್ಳುತ್ತಾ ಬಂದಿರುವ ಅವಧಿಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಅಮೇರಿಕಾದ 42 ವಿಜ್ಞಾನಿಗಳ ತಂಡವು ಐದು ಖಂಡಗಳ ಜನಸಂಖ್ಯೆಯೊಳಗಿರುವ ವೈ-ಕ್ರೋಮೋಸೋಮುಗಳ (ಹ್ಯಾಪ್ಲೋಗುಂಪುಗಳ) ಪ್ರಧಾನ ವಿಸ್ತರಣೆಯನ್ನು ಶೋಧಿಸಿದೆ. ಇದರ ಪ್ರಕಾರ Z93 ಪೂರ್ವಜ ಗುಂಪು ಅತೀವ ಪ್ರಮಾಣದಲ್ಲಿ ವಿಸ್ತರಣೆಯಾಗಿರುವ ಅವಧಿಯು ಸುಮಾರು 4,000ದಿಂದ 4,500 ವರ್ಷಗಳ ಹಿಂದೆ ಎಂಬ ತೀರ್ಮಾನಕ್ಕೆ ಬರಲಾಗಿದೆ. ಇಲ್ಲಿ ಗಮನಿಸಬೇಕಾದ ಅದ್ಭುತವಾದ ಅಂಶವೆಂದರೆ, ಸರಿಸುಮಾರು ಇದೇ 4,000 ವರ್ಷಗಳ ಹಿಂದೆಯೇ ಸಿಂಧೂ ಕಣಿವೆ ನಾಗರೀಕತೆಯು ಕುಸಿದುಬೀಳತೊಡಗಿತ್ತು. (ಆದಾಗ್ಯೂ, ಆರ್ಯನ್ನರ ವಲಸೆಯಿಂದ ಸಿಂಧೂ ಕಣಿವೆ ನಾಗರೀಕತೆ ನಾಶವಾಯಿತೆಂದು ಪುರಾತನಶಾಸ್ತ್ರ ಅಥವಾ ಇನ್ನಾವುದೇ ಪುರಾವೆಯ ಸಾಕ್ಷ್ಯಗಳಿಲ್ಲ; ಆದರೆ ಇವೆರಡೂ ಪ್ರಕ್ರಿಯೆಗಳು ಒಂದಕ್ಕೊಂದು ಸಮಾಂತರವಾಗಿ ಸಂಭವಿಸಿವೆ).

ಇದರಿಂದಾಗಿ, ಈ ಹಿಂದೆ ಕಂಚಿನ ಯುಗದಲ್ಲಿ ಭಾರತಕ್ಕೆ ವಲಸೆ ಬಂದಿರುವ ಕುರಿತು ಸಂದೇಹ ವ್ಯಕ್ತಪಡಿಸಿದ್ದ ಹಲವು ವಿಜ್ಞಾನಿಗಳು ಅಭಿಪ್ರಾಯ **ಪುಟ 10 ಕ್ಕೆ**

## ಆರ್ಯನ್ನರ ವಲಸೆ ಪ್ರಶ್ನೆಯ ವಿವಾದಕ್ಕೆ............ ಪುಟ 9 ರಿಂದ

ಬದಲಿಸಿಕೊಂಡಿದ್ದಾರೆ. ಉದಾಹರಣೆಗೆ, ಪೀಟರ್ ಅಂಡರ್‌ಹಿಲ್ ರವರೇ ಈ ಮೊದಲು, ಪೂರ್ವ ಯೂರೋಪಿನಿಂದ ಭಾರತವನ್ನು ಒಳಗೊಂಡಂತೆ ಏಷ್ಯಾಗೆ ವಂಶವಾಹಿ ತಂತು ಹರಿದು ಬಂದಿಲ್ಲ ಎನ್ನುವುದಕ್ಕೆ ಸಾಕ್ಷ್ಯವಿದೆ ಎಂದು ವಾದಿಸುತ್ತಾ ಬಂದಿದ್ದರು. ಆದರೀಗ ಅವರು ಹೀಗೆ ಹೇಳುತ್ತಾರೆ: "2010ರಲ್ಲಿ ದೊರೆಯುತ್ತಿದ್ದ ದತ್ತಾಂಶಕ್ಕೂ ಇಂದು ದೊರೆಯುತ್ತಿರುವ ದತ್ತಾಂಶಕ್ಕೂ ಹೋಲಿಕೆ ಮಾಡಲಾಗುವುದಿಲ್ಲ. ಅಂದು ಇದ್ದಂತಹ ಪರಿಸ್ಥಿತಿ ಏನೆಂದರೆ, ಒಂದು ಕತ್ತಲಿನ ಕೊಠಡಿಯನ್ನು ಒಂದು ಸಣ್ಣ ರಂಧ್ರದ ಮೂಲಕ ಟಾರ್ಚ್ ಬಿಟ್ಟು ನೋಡುವಂತಿದ್ದು, ನಾವು ಕೇವಲ ಕೆಲವು ಮೂಲೆಗಳನ್ನು ಮಾತ್ರವೇ ಕಾಣಬಹುದಿತ್ತು, ಇಡೀ ಚಿತ್ರಣವನ್ನಲ್ಲ. ಇಂದು ಇಡೀ ವಂಶವಾಹಿ ತಂತುಗಳ ಚಿತ್ರಣ ಅನಾವರಣವಾಗುತ್ತಿರುವುದರಿಂದ ನಾವೀಗ ಸ್ಪಷ್ಟವಾದ ಬೆಳಕಿನಲ್ಲಿ ಇಡೀ ಕೊಠಡಿಯನ್ನೆಲ್ಲಾ ನೋಡಬಲ್ಲೆವು."

ಮತ್ತೊಂದು ಅಧ್ಯಯನವು ಸಹ ಕಂಚಿನ ಯುಗದ ವಲಸೆ ಕುರಿತು ಸಂದೇಹ ವ್ಯಕ್ತಪಡಿಸಿತ್ತು. ಡೇವಿಡ್ ರೈಶ್ ಎಂಬ ತಳಿವಿಜ್ಞಾನಿಯು 'ಉತ್ತರ ಭಾರತದ ಪೂರ್ವಜರು' ಮತ್ತು 'ದಕ್ಷಿಣ ಭಾರತದ ಪೂರ್ವಜರು' ಎಂದು ಭಾರತದ ವಂಶವಾಹಿ ಉಪಸಂರಚನೆಯನ್ನು ವಿಂಗಡಿಸಿದ್ದರು. 'ಉತ್ತರ ಭಾರತದ ಪೂರ್ವಜರು' ವಂಶವಾಹಿನಿಯಲ್ಲಿ ಮಧ್ಯಪ್ರಾಚ್ಯ, ಮಧ್ಯ ಏಷ್ಯಾ ಮತ್ತು ಯುರೋಪಿಯನ್ನರಿಗೆ ಹತ್ತಿರವಿದ್ದರೆ, 'ದಕ್ಷಿಣ ಭಾರತದ ಪೂರ್ವಜರು' ಭಾರತದವರಿಗೆ ಹತ್ತಿರವಿದ್ದಾರೆ ಎಂದು ಹೇಳಿತ್ತು. ಅಲ್ಲದೇ, ಇವೆರಡೂ ಗುಂಪಿನ ವಂಶವಾಹಿಯ ಮಿಶ್ರಣವೇ ಇಂದಿನ ಭಾರತದಲ್ಲಿನ ಬಹುತೇಕ ಗುಂಪುಗಳ ವಂಶವಾಹಿನಿಯಾಗಿದೆ ಎಂದು ಅಧ್ಯಯನ ಹೇಳಿತ್ತು. 'ಉತ್ತರ ಭಾರತದ ಪೂರ್ವಜರು' ಸಾಂಪ್ರದಾಯಿಕ ಮೇಲ್ಜಾತಿ ಮತ್ತು ಇಂಡೋ-ಯೂರೋಪಿಯನ್ ಭಾಷಿಕರಲ್ಲಿ ಹೆಚ್ಚಾಗಿದ್ದರು ಎಂದು ತಿಳಿಸಿತ್ತು.

ಈ ಅಧ್ಯಯನವನ್ನು ಬಳಸಿಕೊಂಡು ಇವೆರಡೂ ಗುಂಪುಗಳು ಹತ್ತಾರು ಸಾವಿರ ವರ್ಷಗಳ ಹಿಂದೆಯೇ ಅಂದರೆ ಇಂಡೋ-ಯೂರೋಪಿಯನ್ ಭಾಷಿಕರು ಭಾರತಕ್ಕೆ (ಇವರು ಬಂದದ್ದು 4,000ದಿಂದ 3,500 ವರ್ಷಗಳ ಹಿಂದೆ) ಬರುವ ಮುಂಚೆಯೇ ಬಂದಿದ್ದರು ಎಂದು ವಾದಿಸಲಾಗಿತ್ತು. ಅಲ್ಲದೇ, 'ಉತ್ತರ ಭಾರತದ ಪೂರ್ವಜರ' ವಂಶವಾಹಿನಿಯು ಇಂಡೋ-ಯೂರೋಪಿಯನ್ ಭಾಷಿಕರಿಗೆ ಹೋಲುತ್ತದೆಂದು ಹೇಳಿದ್ದ ಈ ಅಧ್ಯಯನವನ್ನು ಬದಿಗಿರಿಸಲಾಗಿತ್ತು.

ಇದೀಗ ಬಂದಿರುವ ದತ್ತಾಂಶವನ್ನು ಆಧರಿಸಿ ಇದೇ ಡೇವಿಡ್ ರೈಶ್ ರವರು ಕೂಡ ತಮ್ಮ ಬದಲಾದ ಸಂಶೋಧನಾ ಫಲಿತಾಂಶದ ಕುರಿತು ಹೀಗೆ ಹೇಳುತ್ತಾರೆ: "ತಳಿ ಶಾಸ್ತ್ರವು ಸ್ಟೆಪ್ಪೀ ಸಿದ್ಧಾಂತಕ್ಕೆ ಮನ್ನಣೆ ನೀಡುತ್ತದೆ ಏಕೆಂದರೆ, ಇಂದಿನ ಯೂರೋಪಿನಲ್ಲಿ ನಾವು ಕಾಣುವ ಉತ್ತರ ಯೂರೋಪ್-ಏಷ್ಯಾ ಪೂರ್ವಜರ ಮಾದರಿಯು ಸ್ಟೆಪ್ಪೀ ಪ್ರದೇಶದಿಂದ ಯೂರೋಪಿಗೆ ವಲಸೆ ಬಂದಿರುವುದು ಸುಮಾರು 4500 ವರ್ಷಗಳ ಹಿಂದೆ. ಭಾರತದ ಜನಸಂಖ್ಯೆಯಲ್ಲಿ ದೊಡ್ಡ ಮಿಶ್ರಣವಾಗಿದ್ದು 2000 ದಿಂದ 4000 ವರ್ಷಗಳ ಹಿಂದೆ. ಇದು ಋಗ್ವೇದವನ್ನು ರಚಿಸಿರುವ ಕಾಲಕ್ಕೆ ಸರಿಹೊಂದುತ್ತದೆ, ಇದು ಮಿಶ್ರ ಸಮಾಜವನ್ನು ವಿವರಿಸುತ್ತದೆ."

**ಇದೀಗ ಇವೆಲ್ಲವನ್ನು ಬುಡಮೇಲು ಮಾಡುವಂತಹ ವೈಜ್ಞಾನಿಕ ಸಾಕ್ಷ್ಯಾಧಾರವು ಹೊಸ ಸಂಶೋಧನೆಗೆ ಭದ್ರ ಬುನಾದಿ ಒದಗಿಸಿದೆ. ಇದರ ಸಾರಾಂಶ ಇಲ್ಲಿದೆ:**

- ಕಳೆದ 12,500 ವರ್ಷಗಳಿಂದೀಚೆಗೆ ಭಾರತದ ವಂಶವಾಹಿ ರಾಶಿಯೊಳಕ್ಕೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹೊರಗಿನಿಂದ ಒಳನುಸುಳುವಿಕೆ ಆಗಿದೆ ಎಂಬುದು ದೋಷಪೂರಿತವಾಗಿದೆ. ಏಕೆಂದರೆ, ಆ ಕಾಲದಲ್ಲಿ ಪುರುಷ ವಲಸೆ ದೊಡ್ಡ ಪ್ರಮಾಣದಲ್ಲಿ ಜರುಗಿದ್ದರಿಂದ, ಇದು ಮಾತೃ ಡಿಎನ್‌ಎ ತಂತುಗಳಲ್ಲಿ ಇದನ್ನು ಕಾಣಲಾಗಿರಲಿಲ್ಲ. ಇದೀಗ ಲಭ್ಯವಿರುವ ಹೊಸ ವೈ-ಡಿಎನ್‌ಎ ದತ್ತಾಂಶವು 4000-4500 ವರ್ಷಗಳ ಅವಧಿಯಲ್ಲಿ ಭಾರತದ ಪುರುಷ ವಂಶವಾಹಿನಿ ತಂತುಗಳಿಗೆ ದೊಡ್ಡ ಪ್ರಮಾಣದಲ್ಲಿ ಹೊರಗಿನಿಂದ ಒಳನುಸುಳುವಿಕೆ ಆಗಿದೆ ಎಂದು ತಿಳಿಸುತ್ತದೆ.
- ಭಾರತದಲ್ಲಿ 'R1a' ವಂಶವಾಹಿ ತಂತುವಿನ ವೈವಿಧ್ಯತೆ ಹೆಚ್ಚಾಗಿ ಕಂಡುಬರುವುದರಿಂದ ಇದು ಭಾರತದಲ್ಲಿಯೇ ಉಗಮಿಸಿ ಹೊರಗಡೆ ಹರಡಿರಬಹುದು ಎಂಬ ಎರಡನೇ ವಾದವೂ ದೋಷಪೂರಿತ. ಏಕೆಂದರೆ, ಜಾಗತಿಕ ಮಟ್ಟದಲ್ಲಿ ನಡೆದಿರುವ ಅಧ್ಯಯನ ತಿಳಿಸುವುದೇನೆಂದರೆ, 'R1a' ತಂತುವು ಕೇವಲ ಮೂರು ಉಪವಿಭಾಗಗಳಾಗಿ ವಿಂಗಡಣೆಯಾಗಿದ್ದು ಅವೂ ಕೂಡ ಕೇವಲ 4000 ದಿಂದ 4500 ವರ್ಷಗಳ ಹಳೆಯದಷ್ಟೇ.
- ಮೂರನೇ ವಾದ, 'ಉತ್ತರ ಭಾರತದ ಪೂರ್ವಜರು' ಮತ್ತು 'ದಕ್ಷಿಣ ಭಾರತದ ಪೂರ್ವಜರು' ಎಂದು ಭಾರತದ ವಂಶವಾಹಿ ಉಪಸಂರಚನೆಯನ್ನು ವಿಂಗಡಿಸಿದ್ದು ಇವೆರಡೂ ಗುಂಪುಗಳು ಹತ್ತಾರು ಸಾವಿರ ವರ್ಷಗಳ ಹಿಂದೆಯೇ ಅಂದರೆ ಇಂಡೋ-ಯೂರೋಪಿಯನ್ ಭಾಷಿಕರು ಭಾರತಕ್ಕೆ (ಇವರು ಬಂದದ್ದು 4,000ದಿಂದ 3,500 ವರ್ಷಗಳ ಹಿಂದೆ) ಬರುವ ಮುಂಚೆಯೇ ಬಂದಿದ್ದರು ಎಂದು ವಾದಿಸಲಾಗಿತ್ತು. ಇದೂ ಕೂಡ ತಪ್ಪು.

**ಸಮಾರೋಪ:**

ಇವೆಲ್ಲ ಬೆಳವಣಿಗೆಗಳು ವಿವಿಧ ಜ್ಞಾನ ಶಾಖೆಗಳಲ್ಲಿ ಪಡೆದಿರುವ ಸಂಶೋಧನಾ ಫಲಿತಾಂಶಗಳ ಆಧಾರದಲ್ಲಿ ಮೂಡಿಬಂದಿವೆ. ಹೀಗೆ ಸುಮಾರು ಕ್ರಿ. ಪೂ 2000 ವರ್ಷಗಳ ಹಿಂದಿನ ಭಾರತದ ಚಾರಿತ್ರಿಕ ಒಗಟುಗಳಿಗೆ ಸ್ಪಷ್ಟತೆ ದೊರೆಯುತ್ತಿದೆ. ಇದು ಸಾಧ್ಯವಾಗಿರುವುದು ಮಾನವನ ಇತಿಹಾಸ ಕುರಿತಂತೆ ಜೆನೋಮ್-ಆಧಾರಿತ ಅಧ್ಯಯನ ಮತ್ತು ಪುರಾತನ ಡಿಎನ್‌ಎ, ಇವುಗಳ ಆಧುನಿಕ ತಂತ್ರಜ್ಞಾನ ವಿಧಾನಗಳ ಬೆಳವಣಿಗೆಯಿಂದ.

ಇದರ ಹೊರತಾಗಿಯೂ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಶೇ.17.5ರಷ್ಟು ಭಾರತೀಯ ಪುರುಷ ಪೀಳಿಗೆಯ ತಂತುಗಳು 'R1a' ಯಿಂದ ರೂಪಿತವಾಗಿದ್ದು, ಇನ್ನೂ ಸಣ್ಣ ಪ್ರಮಾಣದಲ್ಲಿ ಮಹಿಳಾ ಪೀಳಿಗೆಯ ತಂತುಗಳಿಂದಾಗಿವೆ. ಭಾರತದ ಬಹುಸಂಖ್ಯಾತ ಜನತೆಯು ತಮ್ಮ ಪೂರ್ವಜರನ್ನು ಇತರೆ ಪ್ರದೇಶಗಳ ವಲಸಿಗರಿಂದ ಪಡೆದುಕೊಂಡಿದ್ದಾರೆ. ಇವರೆಂದರೆ: 55,000 ದಿಂದ 65,000 ವರ್ಷಗಳ ಹಿಂದೆ ಆಫ್ರಿಕಾದಿಂದ ವಲಸೆ ಬಂದಿರುವವರಿಂದ ಆರಂಭಗೊಂಡು ಕ್ರಿ.ಪೂ 10,000 ವರ್ಷಗಳ ಹಿಂದೆ ಪಶ್ಚಿಮ ಏಷ್ಯಾದಿಂದ ಹಲವು ಅಲೆಗಳೋಪಾದಿಯಲ್ಲಿ ಬಂದ ಕೃಷಿ-ಸಂಬಂಧಿತ ವಲಸಿಗರು ಸೇರಿದಂತೆ ಇನ್ನೂ ಕಾಲಮಾನ ನಿಗಧಿಪಡಿಸಬೇಕಿರುವ ಪೂರ್ವ ಏಷ್ಯಾದಿಂದ ವಲಸೆ ಬಂದಿರುವ ಆಸ್ಟ್ರೋ-ಏಷ್ಯನ್ ಭಾಷಿಕರಾದ 'ಮುಂಡಾ' ಜನತೆ ಮತ್ತು ಟಿಬೆಟೋ-ಬರ್ಮನ್ ಭಾಷಿಕರಾದ 'ಗಾರೋ' ಜನತೆಗಳು ಸೇರಿದ್ದಾರೆ.

ಈ ಎಲ್ಲಾ ಆಧುನಿಕ ವಿಜ್ಞಾನದ ಸಂಶೋಧನೆಗಳಿಂದ ಬಹು ಸ್ಪಷ್ಟವಾಗಿ ತಿಳಿದುಬಂದಿರುವುದೇನೆಂದರೆ, ನಾವು ಬಹು-ಮೂಲದ ನಾಗರೀಕತೆಯವರು, ಏಕ-ಮೂಲದವರಲ್ಲ. ಹೀಗೆ ಬಹುಮೂಲಗಳ ಸಾಂಸ್ಕೃತಿಕ ಮಿಡಿತಗಳು, ಅದರ ಸಾಂಪ್ರದಾಯಿಕತೆ ಮತ್ತು ಆಚರಣೆಗಳನ್ನು ವೈವಿಧ್ಯಮಯ ಪೀಳಿಗೆಗಳಿಂದ ಮತ್ತು ವಲಸೆಯ ಇತಿಹಾಸಗಳಿಂದ ನಾವು ಪಡೆದುಕೊಂಡಿದ್ದೇವೆ. ಆಫ್ರಿಕಾದಿಂದ ವಲಸೆ ಬಂದ ಮೊದಲಿಗರು, ಭಯವೇ ಇಲ್ಲದ ಶೋಧಕರು ಈ ಭೂಭಾಗವನ್ನು ಮೊದಲಿಗೆ ಆವಿಷ್ಕರಿಸಿ, ಇಲ್ಲಿಯೇ ನೆಲೆಸಿದರು ಮತ್ತು ಅವರ ನಂತರ ಬಂದ ಪೀಳಿಗೆಗಳು ನಮ್ಮ ಜನತೆಯ ಗಟ್ಟಿ ತಳಪಾಯವಾಗಿದೆ; ತದನಂತರದಲ್ಲಿ ಕೃಷಿ ತಂತ್ರಜ್ಞಾನದ ತಿಳುವಳಿಕೆಯೊಂದಿಗೆ ಬಂದವರು ಸಿಂಧೂ ಕಣಿವೆ ನಾಗರೀಕತೆಯನ್ನು ನಿರ್ಮಿಸಿದ್ದು, ಅವರ ಸಾಂಸ್ಕೃತಿಕ ವಿಚಾರಗಳು ಮತ್ತು ಆಚರಣೆಗಳು ನಮ್ಮ ಇವತ್ತಿನ ಸಂಪ್ರದಾಯಗಳೊಂದಿಗೆ ಇಂದಿಗೂ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ; ಪೂರ್ವ ಏಷ್ಯಾದಿಂದ ವಲಸೆ ಬಂದವರು, ಭತ್ತದ ಬೆಳೆಯ ಪದ್ಧತಿಯನ್ನು ತಮ್ಮೊಂದಿಗೆ ತಂದಿದ್ದಾರೆ; ತದನಂತರ ಬಂದವರು ಸಂಸ್ಕೃತ ಭಾಷೆ ಮತ್ತು ಅದರೊಂದಿಗೆ ಹೆಣೆದುಕೊಂಡಿರುವ ನಂಬಿಕೆಗಳು ಮತ್ತು ಆಚರಣೆಗಳನ್ನು ತಂದಿದ್ದು ಅವು ನಮ್ಮ ಸಮಾಜವನ್ನು ಮೂಲಭೂತ ಹಾದಿಯಲ್ಲಿ ಪುನರ್‌ರಚಿಸಿವೆ; ತದನಂತರದಲ್ಲಿ ವ್ಯಾಪಾರ ಅಥವಾ ಸಾಮ್ರಾಜ್ಯ ಕಟ್ಟಲು ಬಂದವರು ಇಲ್ಲಿಯೇ ಉಳಿದುಕೊಂಡಿದ್ದಾರೆ, ಎಲ್ಲರೂ ವಿಲೀನವಾಗಿದ್ದಾರೆ ಮತ್ತು ನಾವು ಭಾರತೀಯ ಎಂದು ಕರೆಯುವ ಈ ನಾಗರೀಕತೆಗೆ ಕೊಡುಗೆ ನೀಡಿದ್ದಾರೆ. ನಾವೆಲ್ಲರೂ ವಲಸಿಗರು. ■

## ಸೆ.14 : ಬೆಂಗಳೂರಿನಲ್ಲಿ 'ಮಹಾಪ್ರದರ್ಶನ'........... ಪುಟ 8 ರಿಂದ

ಕಾರ್ಮಿಕ ಸಂಘಟನೆಗಳು ನಿರ್ದರಿಸಿದ್ದು ಅದಕ್ಕಾಗಿ ಆಗಸ್ಟ್ 8 ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಿವೆ.

- **ತ್ರೀಪಕ್ಷಿಯ ಸಮಿತಿಗಳಲ್ಲಿ ತಾರತಮ್ಯ :** ರಾಜ್ಯ ಸರ್ಕಾರವು ಇತ್ತೀಚಿಗೆ ಕನಿಷ್ಟ ವೇತನ ಸಲಹಾ ಮಂಡಳಿ ಪುನರ್‌ರಚಿಸಿದ್ದು ಸಿಐಟಿಯು ಸಂಘಟನೆಗೆ ಬಹಳ ಕಾಲದಿಂದ ಇದ್ದ ಪ್ರಾತಿನಿಧ್ಯವನ್ನು ಈ ಬಾರಿ ಕೈಬಿಡಲಾಗಿದೆ. ಅಲ್ಲದೆ ಪುನರ್‌ರಚಿಸಲಾದ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಈ ಬಾರಿಯೂ ಸಿಐಟಿಯುಗೆ ಪ್ರಾತಿನಿಧ್ಯ ನೀಡಿಲ್ಲ, ಇದು ಖಂಡನಾರ್ಹ. ಇದನ್ನು ಕೂಡಲೇ ಸರಿಪಡಿಸಲು ಸಿಐಟಿಯು ಆಗ್ರಹಿಸಿದೆ
- **ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಭವಿಷ್ಯನಿಧಿ ಯೋಜನೆ :** ಮಾರ್ಚ 15 ರಂದು ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಮಂಡಿಸಿದ ಅಯ್ಯವ್ಯಯದಲ್ಲಿ ಹಮಾಲಿ ಕಾರ್ಮಿಕರು ಸೇರಿ ನಾಲ್ಕು ಅಸಂಘಟಿತ ಕಾರ್ಮಿಕ ವಿಭಾಗಕ್ಕೆ ಘೋಷಿಸಿರುವ ಸ್ಮಾರ್ಟಕಾರ್ಡ ಒಳಗೊಂಡ ಪಿಂಚಣಿ ಯೋಜನೆಯು ಅಪೂರ್ಣ ಕಾರ್ಯಕ್ರಮವಾಗಿದ್ದು ಅದರ ಬದಲು ಹೆಚ್ಚಿನ ಅನುದಾನವನ್ನು ನೀಡಿ ಸಮಗ್ರವಾದ ಭವಿಷ್ಯನಿಧಿ ಯೋಜನೆಯನ್ನು ಕೂಡಲೇ ಜಾರಿಗೊಳಿಸಬೇಕೆಂದು ಸಿಐಟಿಯು ಆಗ್ರಹವಾಗಿದೆ. ಅದೇ ರೀತಿ ರಾಜ್ಯದಲ್ಲಿ ನೋಂದಣಿಯಾದ ಸುಮಾರು 11 ಲಕ್ಷ ಕಟ್ಟಡ ನಿರ್ಮಾಣ ಕ್ಷೇತ್ರದ ಕಾರ್ಮಿಕರಿಗೆ ವಸತಿ ಯೋಜನೆ ಸೇರಿ ಸಮಗ್ರವಾದ ಭವಿಷ್ಯನಿಧಿ ಯೋಜನೆ ಜಾರಿ ಮಾಡಲು ಸರಕಾರ ನಿರ್ಧರಿಸಿರುವ ಕ್ರಮವನ್ನು ಸಿಐಟಿಯು ಸ್ವಾಗತಿಸಿದ್ದು ಕೂಡಲೇ ಅದನ್ನು ಜಾರಿ ಮಾಡಬೇಕೆಂದು ಆಗ್ರಹಿಸಿದೆ. ರಾಜ್ಯದಲ್ಲಿ ಕಟ್ಟಡ ಕಾರ್ಮಿಕರಿಗೆ ನೋಂದಣಿಗೆ ಅನ್‌ಲೈನ್ ವ್ಯವಸ್ಥೆ ಜಾರಿ ಮಾಡಿರುವುದರಿಂದ ನೊಂದಣಿ ಮತ್ತು ಸೌಲಭ್ಯಗಳ ವಿಲೇವಾರಿ ನಿಧಾನವಾಗಿ ಕಾರ್ಮಿಕರು ಕಷ್ಟಕ್ಕೆ ಸಿಲುಕಿದ್ದಾರೆ. ಅಲ್ಲದೆ ಸಿಬ್ಬಂದಿ ಕೊರತೆಯಿಂದಾಗಿ ಈ ಸಮಸ್ಯೆ ಇನ್ನೂ ತೀವ್ರಗೊಂಡಿದೆ. ಇದನ್ನು ಕೂಡಲೇ ಬಗೆಹರಿಸಬೇಕೆಂದು ಸಿಐಟಿಯು ಆಗ್ರಹಿಸುತ್ತಿದೆ.
- **ಗುತ್ತಿಗೆ ಪದ್ದತಿ ನಿಯಂತ್ರಣಕ್ಕೆ ಶಾಸನ :** ರಾಜ್ಯದ ಉದ್ಯಮಗಳಲ್ಲಿ ಹಾಗೂ ರಾಜ್ಯ ಸರಕಾರದ ಹತ್ತಾರು ಇಲಾಖೆಗಳಲ್ಲಿ ಗುತ್ತಿಗೆ ಹಾಗೂ ಹೊರ ಗುತ್ತಿಗೆ ವ್ಯಾಪಕಗೊಂಡಿದೆ. ಇದು ಕಾರ್ಮಿಕರ ದಿನನಿತ್ಯದ ಬದುಕನ್ನು ಸಂಕಷ್ಟಕ್ಕೆ ದೂಡಿದೆ. ಅಲ್ಲದೆ ಕಾರ್ಮಿಕರಿಗೆ ಗುತ್ತಿಗೆ ದಾರ ಏಜೆನ್ಸಿಗಳು ನ್ಯಾಯ ಸಮ್ಮತ ವೇತನ, ಸಾಮಾಜಿಕ ಭದ್ರತೆಗಳ ಹಣವನ್ನು ಕಾರ್ಮಿಕರಿಂದ ಕಡಿತ ಮಾಡಿ ವಂಚಿಸಲಾಗುತ್ತಿವೆ. ಇದರಿಂದ ರಾಜ್ಯದ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿದೆ. ಹೀಗಾಗಿ ತಮಿಳು ನಾಡು ಹಾಗೂ ಅಸ್ಸಾಂ ಮಾದರಿಯಲ್ಲಿ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವ ಶಾಸನ ಜಾರಿ ಮಾಡಬೇಕು. ಆ ಮೂಲಕ ಆ ಪದ್ದತಿಗೆ ನಿಯಂತ್ರಣ ಹೇರಬೇಕು ಎಂಬುದು ರಾಜ್ಯದ ಕಾರ್ಮಿಕ ವರ್ಗದ ಆಗ್ರಹವಾಗಿದೆ. ಇದಲ್ಲದೆ ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡುವ ಮತ್ತು ನೊಂದಣಿಯನ್ನು ಕಾಲಮಿತಿಯೊಳಗೆ ಪೂರೈಸುವ ಕಾನೂನು ಜಾರಿ ಮಾಡಬೇಕೆಂದು ಆಗ್ರಹಿಸಲಾಗುತ್ತಿದೆ.
- **ಸ್ಕೀಂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ :** ದೇಶದಲ್ಲಿ ಮತ್ತು ರಾಜ್ಯದಲ್ಲಿ ಐಸಿಡಿಎಸ್, ನೌಕರರು, ಮಧ್ಯಾನ್ಹದ ಬಿಸಿಯೂಟ, ಆರೋಗ್ಯ,ಶಿಕ್ಷಣ ಮೊದಲಾದ ಯೋಜನೆ ಅಡಿಯಲ್ಲಿ ಲಕ್ಷಾಂತರ ಅಂಗನವಾಡಿ, ಬಿಸಿಯೂಟ,ಆಶಾ, ನೌಕರರ ಯಾವುದೇ ಕನಿಷ್ಟ ಕೂಲಿ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. 43 ಮತ್ತು 45 ಭಾರತೀಯ ಕಾರ್ಮಿಕ ಸಮ್ಮೆಳನಗಳಲ್ಲಿ ಈ ಬಗ್ಗೆ ಚರ್ಚಿಸಿ ಈ ವಿಭಾಗದ ಕಾರ್ಮಿಕರನ್ನು ಕಾರ್ಮಿಕರನ್ನು ಪರಿಗಣಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆಯಾದರೂ ಸರಕಾರಗಳು ಇ ಬಗ್ಗೆ ಕ್ರಮವಹಿಸಿಲ್ಲ. ರಾಜ್ಯದಲ್ಲಿ ಈ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಟ ವೇತನ ಪಟ್ಟಿಗೆ ಸೇರಿಸಿ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಇವರಿಗೆ ಅನ್ವಯಿಸಬೇಕು ಎಂಬುದು ಸಿಐಟಿಯು ಆಗ್ರಹವಾಗಿದೆ.
- ಇದಲ್ಲದೆ ವೇತನಕ್ಕಾಗಿ ಪ್ರತ್ಯೇಕ ಅನುದಾನ ಬೇ-ಕೆಂದು ಮತ್ತು ಹುದ್ದೆಗಳಿಗೆ ಅನುಮೋದನೆಗಾಗಿ ಆಗ್ರಹಿಸಿ ಗ್ರಾಮಪಂಚಾಯ್ತಿ ನೌಕರರು ತಿಂಗಳುಗಳ ಕಾಲ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದ್ದಾರೆ ಇತ್ತೀಚಿಗೆ ಅನಿರ್ದಿಷ್ಟ ಹೋರಾಟಕ್ಕೆ ಮುಂದಾದಾಗ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ನಡೆದಿದೆಯಾದರೂ ಅನುದಾನದ ಹಣ ಬಿಡುಗಡೆಯಾಗಿಲ್ಲ. ಈ ಚಳವಳಿಯ ಪ್ರಮುಖವಾದ ಬೇಡಿಕೆ ಕೂಡ ಇದಾಗಿದೆ.
- ನಮ್ಮ ರಾಜ್ಯದ ಬೀಡಿ ಕಾರ್ಮಿಕರು ಬೀಡಿ ಉಧ್ಯಮ ಬಿಕ್ಕಟ್ಟಿನಲ್ಲಿದೆ. ಈ ಮಧ್ಯ ತಡೆಹಿಡಿದ ತುಟ್ಟಿಭತ್ಯೆ ಪಡೆಯಲು ಈ ಕಾರ್ಮಿಕರು ಯಶಸ್ವಿಯಾಗಿದ್ದಾರೆ ತಂಬಾಕು ಮಾರಾಟ ನಿಷೇಧದ ಕಾರಣದಿಂದಾಗಿ ಸುಮಾರು 10 ಲಕ್ಷ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಇವರಿಗೆ ಪರ್ಯಾಯ ಕೆಲಸ ಹಾಗೂ ಪರಿಹಾರ ನೀಡಬೇಕೆಂದು ಅವರ ಪ್ರಮುಖ ಕೂಗಾಗಿದೆ. ●

**ಚೀನಾ ಭೇಟಿ ಭಾಗ-2**

– ವಸಂತ ಆಚಾರಿ

# "135 ಮಾದರಿ", ಬುಲೆಟ್ ಟ್ರೈನ್ ಅನುಭವ

**ಜನ್‌ಮೆನ್ ಚೀನಾ ಕಮ್ಯುನಿಸ್ಟ್ ಪಾರ್ಟಿ(ಸಿಪಿಸಿ) ಯ ಪಾರ್ಟಿ ಕಮಿಟಿಯು "135" ಮಾದರಿಯಲ್ಲಿ ಪಾರ್ಟಿಯನ್ನು ಬೆಳೆಸಲು ಉದ್ದೇಶವನ್ನು ಹೊಂದಿದೆ ಎಂದು ಅಲ್ಲಿ ನಮಗೆ ವಿವರಿಸಲಾಯಿತು. "135" ಅಂದರೆ "ಒಂದು ಗುರಿ, ಮೂರು ಟೀಮ್ಸ್, 5 ಸಂಸ್ಥೆಗಳು ಮತ್ತು 5 ಗುರಿಗಳು." ಕ್ರಿ.ಶ. 618–907 ರ ಟಾಂಗ್ ಮತ್ತು ಕ್ರಿ.ಶ. 960–1279 ರ ಸಾಂಗ್ ರಾಜ ಮನೆತನದ ಪುರಾತನ ಸಂಕೇತಗಳನ್ನು ಚಾರಿತ್ರಿಕ ನಗರವಾಗಿ ಉಳಿಸಲಾಗಿದೆ. ಅವುಗಳಲ್ಲಿ ಪ್ರಸಿದ್ಧವಾಗಿರುವುದು 'Three Lanes and Seven Alleys'. ರಸ್ತೆಗಳು, ನದಿ, ಕಣಿವೆ, ಅದಕ್ಕೆ ತಾಗಿಕೊಂಡಿರುವ ಮನೆ, ಕಟ್ಟಡದ ಅವಶೇಷಗಳು ಇಲ್ಲಿ ಕಾಣಬಹುದಾಗಿದೆ.**



ನಮ್ಮನ್ನು ಜನಮೆನ್ ಕಮ್ಯೂನಿಟಿ ವಿಸಿಟ್‌ಗಾಗಿ ಕರ-ಕೊಂಡು ಹೋದರೆಂದು ಕಳೆದ ವಾರ ವಿವರಿಸಿದ್ದೆ.

1952 ರಲ್ಲಿ ಜನ್‌ಮೆನ್ ಕಮ್ಯೂನಿಟಿ ನಗರ ಪ್ರದೇಶವನ್ನು ಬೆಳೆಸಲಾಯಿತು. ಈ ನಗರ ಪ್ರದೇಶಕ್ಕೆ 2001 ರಲ್ಲಿ ಸಿಜೀನ್ ಮತ್ತು ನಾನಿಂಗ್ ಪ್ರದೇಶವನ್ನು ಒಟ್ಟು ಸೇರಿಸಲಾಯಿತು. ಈ ಪ್ರದೇಶವು 3000 ಶಾಶ್ವತ ಮನೆಗಳಿರುವ 13,000 ಜನ ಸಂಖ್ಯೆಯನ್ನು ಕೂಡಿದೆ. ಇದರ ಸಂಪೂರ್ಣ ನಿಯಂತ್ರಣ ಕಮ್ಯೂನಿಸ್ಟ್ ಪಾರ್ಟಿ ಅಡಿಯಲ್ಲಿ ಇದೆ. 6 ಶಾಖೆಗಳನ್ನು ಹೊಂದಿರುವ 200 ಮಂದಿ ಪಾರ್ಟಿ ಸದಸ್ಯರು ಈ ಪ್ರದೇಶದಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸುತ್ತಾರೆ. ಸೌಹಾರ್ದಯುತ ಸಮುದಾಯದ ಗುರಿಯಲ್ಲಿ ಈ ನಗರವನ್ನು ಬೆಳೆಸಲಾಗಿದೆ. ಜನ್‌ಮೆನ್ ಚೀನಾ ಕಮ್ಯುನಿಸ್ಟ್ ಪಾರ್ಟಿ(ಸಿಪಿಸಿ)ಯ ಪಾರ್ಟಿ ಕಮಿಟಿಯು "135" ಮಾದರಿಯಲ್ಲಿ ಪಾರ್ಟಿಯನ್ನು ಬೆಳೆಸಲು ಉದ್ದೇಶವನ್ನು ಹೊಂದಿದೆ ಎಂದು ಅಲ್ಲಿ ನಮಗೆ ವಿವರಿಸಲಾಯಿತು. "135" ಅಂದರೆ "ಒಂದು ಗುರಿ, ಮೂರು ಟೀಮ್ಸ್, 5 ಸಂಸ್ಥೆಗಳು ಮತ್ತು 5 ಗುರಿಗಳು." ಇದನ್ನು ಈ ರೀತಿ ವಿವರಿಸಲಾಗಿದೆ. "1 ಮುಖ್ಯ ಗುರಿ" ಎಂದರೆ ಈ ಸಮುದಾಯವನ್ನು ಎಲ್ಲಾ ರೀತಿಯಲ್ಲಿ ಬೆಳೆಸುವುದು ಪಾರ್ಟಿಯ ಮುಖ್ಯ ಗುರಿ. "3 ಟೀಮ್ಸ್" ಅಂದರೆ ಸಮುದಾಯದ ಕಾರ್ಮಿಕರು, ಪಾರ್ಟಿ ಸದಸ್ಯರು ಮತ್ತು ಕಾರ್ಯಕರ್ತರು ಅಥವಾ ಸ್ವಯಂ ಸೇವಕರು. "5 ಆಡಳಿತ ಯಂತ್ರ" ಅಂ-ದರೆ ಜಂಟಿ ಪಾಲುದಾರಿಕೆಯನ್ನು ಸ್ಥಾಪಿಸುವುದು, ಪ್ರಜಾಸತ್ತಾತ್ಮಕ ಆಡಳಿತ ಮತ್ತು ಮೇಲ್ವಿಚಾರಣೆ, ಪಾರ್ಟಿ ಕಟ್ಟುವ ಖಾತರಿ, ಪರಿಣಾಮಕಾರಿ ಸೇವೆ ಮತ್ತು ಪಾರದರ್ಶಕತೆ. "5 ಗುರಿ" ಅಂದರೆ ಸಮುದಾಯದ ಪ್ರೀತಿಯನ್ನು ತೋರಿಸುವುದು, ಸೌಂದರ್ಯ, ಖುಷಿ, ಶಾಂತಿ ಮತ್ತು ಸೌಹಾರ್ದತೆ. ಈ ಎಲ್ಲಾ ಅಂಶವನ್ನು ಈ ನಗರ ಪ್ರದೇಶದಲ್ಲಿ ನಮಗೆ ನೋಡಲು ಸಾಧ್ಯವಾಯಿತು. ಈ ರೀತಿ ನೂರು ಶೇಕಡಾ ಪರಿಣಾಮಕಾರಿ ಫಲಿತಾಂಶಕ್ಕಾಗಿ ಪಾರ್ಟಿ ವ್ಯವಸ್ಥಿತ ಯೋಜನಾಬದ್ಧ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂತು.

**'Three Lanes and Seven Alleys' ಗೆ**

ಅಲ್ಲಿ ನಾವು ಅರ್ಧ ಗಂಟೆಗಳ ಕಾಲ ಸಂದರ್ಶನ ಮುಗಿಸಿ ಅಲ್ಲಿಂದ 'Three Lanes and Seven Alleys' ಗೆ ಬಂದೆವು. ಪುರಾತನ ಕಾಲದ ರಾಜಮನೆತನದ ಎಲ್ಲಾ ಪಳೆಯುಳಿಕೆಯನ್ನು ಉಳಿಸಿ, ಬೆಳೆಸಿ ರಕ್ಷಿಸಲಾಗಿತ್ತು. ಇದೊಂದು ಪ್ರವಾಸಿ ಕೇಂದ್ರವಾಗಿ ಮಾರ್ಪಾಡು ಆಗಿದೆ. ಕ್ರಿ.ಶ. 618–907 ರ ಟಾಂಗ್ ಮತ್ತು ಕ್ರಿ.ಶ. 960–1279 ರ ಸಾಂಗ್ ರಾಜ ಮನೆತನದ ಪುರಾತನ ಸಂಕೇತಗಳನ್ನು ಚಾರಿತ್ರಿಕ ನಗರವಾಗಿ ಉಳಿಸಲಾಗಿದೆ. ಅವುಗಳಲ್ಲಿ ಪ್ರಸಿದ್ಧವಾಗಿರುವುದು 'Three Lanes and Seven Alleys'. ರಸ್ತೆಗಳು, ನದಿ, ಕಣಿವೆ, ಅದಕ್ಕೆ ತಾಗಿಕೊಂಡಿರುವ ಮನೆ, ಕಟ್ಟಡದ ಅವಶೇಷಗಳು ಇಲ್ಲಿ ಕಾಣಬಹುದಾಗಿದೆ. ನನ್ಹೋಹೌ ರಸ್ತೆಯ ಅಕ್ಕಪಕ್ಕದಲ್ಲಿ ಸೌಂದರ್ಯದ ಕಣಿಯಂತೆ ಈ ಪ್ರದೇಶ ಕಂಗೊಳಿಸುತ್ತಿದೆ. ಈ ಪ್ರದೇಶದ ಕೇಂದ್ರವಾಗಿ ಸುಮಾರು 40 ಹೆಕ್ಟೇರ್ ಪ್ರದೇಶದಲ್ಲಿ ನಗರ ಕೇಂದ್ರವಿದೆ. ನೂರಾರು ವರ್ಷಗಳಿಂದ ಹಿಂದಿನಿಂದ ಬೆಳೆದು ಬಂದಿರುವ ನಾಗರೀಕತೆಯನ್ನು ಇಲ್ಲಿ ಕಾಣಬಹುದಾಗಿದೆ. ಕ್ರಿ.ಶ. 1368–1644 ಮಿಂಗ್ ಮತ್ತು ಕ್ರಿ.ಶ. 1644–1911 ಕ್ವಿಂಗ್ ರಾಜ ಮನೆತನಗಳ ಚಾರಿತ್ರಿಕ ಸಂಕೇತಗಳು ಮತ್ತು ಕರಕುಶಲ ಆಕೃತಿಗಳು ಇಲ್ಲಿ ಕಂಡುಬರುತ್ತವೆ.

ದೊಡ್ಡ ದೊಡ್ಡ ಕಲ್ಲುಗುಂಡಿಗಳಿಂದ ಕೂಡಿದ ಕೊಳಗಳು, ಬಿಳಿದಾದ ಗೋಡೆಗಳು, ಕಪ್ಪು ಬಣ್ಣದ ನೆಲಕ್ಕೆ ಹಾಸುವ ಕಲ್ಲುಗಳು, ನುಣುಪಾದ ಕೈಕಸಬುಗಳಿಂದ ರಚಿಸಿದ ವಸ್ತುಗಳು, ಪುರಾತನ ಕಾಲದಲ್ಲಿ ಉಪಯೋಗಿಸುತ್ತಿರುವ ವಸ್ತುಗಳು, ಮಿಂ-ಜಿಯಾಂಗ್ ನದಿ ಪ್ರದೇಶದಲ್ಲಿ ಬೆಳೆದು ಬಂದಿರುವ ಸಾಂಸ್ಕೃತಿಕ ಕಲೆಗಳು ಮತ್ತು ಮಿಂಗ್ ಮತ್ತು ಕ್ವಿಂಗ್ ರಾಜ ಮನೆತನದ ದೊಡ್ಡ ಪ್ರಮಾಣದ ಗುಡಿ ಕೈಗಾರಿಕೆಯ ಮನೆಯನ್ನು ಇಲ್ಲಿ ನಾವು ಕಂಡೆವು. ಅಲ್ಲಿ ಸುಮಾರು ರಾತ್ರಿ 7.30ರ ಸಮಯ ತನಕ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿ ವಾಪಾಸು ಬಂದೆವು. ಫ್ಯೂಸಿಯೋನ ಜ್ಞಾಂಗ್ದೇಯ ಹೋನರ್ ರೆಸ್ಟೋರೆಂಟ್‌ನಲ್ಲಿ ಊಟೋಪಚಾರವನ್ನು ಮುಗಿಸಿ ಶ್ಯಾಂಗ್ರೀ ಲಾ ಹೋಟೇಲಿನಲ್ಲಿ ನಮಗೆ ತಂಗುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ವಿಶೇಷವೇನೆಂದರೆ, ಚೀನಾದ ಜನತೆ ಸಂಜೆ 6 ಗಂಟೆಯಿಂದ 7 ಗಂಟೆಯ ಒಳಗಡೆ ತಮ್ಮ ರಾತ್ರಿಯ ಊಟವನ್ನು ಮುಗಿಸುತ್ತಾರೆ. ಊಟ ಮುಗಿಸಿ ರಾತ್ರಿ 9–00 ಗಂಟೆಗಳ ಕಾಲ ಅಲ್ಲಲ್ಲಿ ಸಾಮೂಹಿಕ ನೃತ್ಯದ ಮುಖಾಂತರ ವ್ಯಾಯಾಮ ಮಾಡುತ್ತಾರೆ. ಇವರಲ್ಲಿ ಪುರುಷ–ಮಹಿಳೆ, ಹಿರಿಯ–ಕಿರಿಯರು ಎಂಬ ಭೇದ ಭಾವವಿಲ್ಲದೆ ಪಾಲ್ಗೊಳ್ಳುತ್ತಾರೆ. ಅದಕ್ಕಾಗಿ ಪ್ರತ್ಯೇಕ ಪದ್ಯ/ಸಂಗೀತ ಸೌಂಡ್ ಸಿಸ್ಟಂನ್ನು ಕೂಡಾ ಅಳವಡಿಸಿರುವುದು ಕಂಡು ಬಂತು.

**ಬುಲೆಟ್ ಟ್ರೈನ್ ನಲ್ಲಿ**

18–5–2017 ರಂದು ಬೆಳಿಗ್ಗೆ 7–00 ಗಂಟೆಗೆ ಬಸ್ಸಿನಲ್ಲಿ ಪುಸೋಹ್ ರೈಲ್ವೆ ಸ್ಟೇಶನ್‌ಗೆ ಹೊರಟೆವು. ಅಲ್ಲಿಂದ ಬೆಳಿಗ್ಗೆ 8–19ಕ್ಕೆ ಆ.6409 ಬುಲೆಟ್ ಟ್ರೈನಿಂದ ಲೊಂಗ್‌ಯಾನ್ (Longyan city)ಸಿಟಿಗೆ ಪ್ರಯಾಣ ನಡೆಸಿ ಬೆಳಿಗ್ಗೆ ಗಂಟೆ 11–20ಕ್ಕೆ ಅಲ್ಲಿಗೆ ತಲುಪಿದೆವು. ಬುಲೆಟ್ ಟ್ರೈನ್ ಪ್ರಯಾಣದ ಅನುಭವವೂ ಒಂದು ವಿಶೇಷ ಅನುಭವ. ವಿಮಾನದಲ್ಲಿ ಪ್ರಯಾಣಿಸಿದಂತೆ ಆಗುತ್ತದೆ. ಸಂಪೂರ್ಣ ಎಸಿ. ಐಷರಾಮಿ ಆಸನ ವ್ಯವಸ್ಥೆ. ವಾಹನದಲ್ಲಿ ಸಾಮಗ್ರಿಗಳನ್ನು ಇಡುವ ವ್ಯವಸ್ಥೆ, ಊಟೋಪಚಾರ ಎಲ್ಲವೂ ಇದೆ. ವೇಗವಾಗಿ ಹೋಗುವ ರೈಲು. ಪ್ರಯಾಣಿಕರಿಗೆ ವೇಗದ ಅನುಭವವೇ ಗೊತ್ತಾಗುವುದಿಲ್ಲ. ಮಾತ್ರವಲ್ಲದೆ ಸುತ್ತಮುತ್ತಲಿನ ಪರಿಸರ ವೀಕ್ಷಣೆಗೆ ಸಾಕಷ್ಟು ಅವಕಾಶ. ನೂರಾರು ಕಿಲೋ ಮೀಟರ್‌ನ ದಾರಿಯನ್ನು ಕೆಲವೇ ಗಂಟೆಗಳಲ್ಲಿ ತ್ರಾಸವಿಲ್ಲದೆ ಕ್ರಮಿಸಬಲ್ಲುದು. ಆಧುನಿಕ ರೀತಿಯ ರೈಲ್ವೆ ರಸ್ತೆ, ಬಣ್ಣ ಬಣ್ಣದ ಹೂವಿನ ಗಿಡಗಳ ಮಧ್ಯೆ ರೈಲು ಪ್ರಯಾಣ, ಆಧುನಿಕವಾಗಿ ನಿರ್ಮಿಸಿರುವ ದೊಡ್ಡ ದೊಡ್ಡ ಕಾಡುಗಳಿಂದ ಕೂಡಿದ ಗುಡ್ಡಗಳ ಒಳಗಡೆ ಸುರಂಗ ಮಾರ್ಗವಾಗಿ ಚಲಿಸುವಾಗ ಚೀನಾದ ಬೆಳವಣಿಗೆಯ ಸ್ಪಷ್ಟ ಚಿತ್ರಣ ಕಾಣಲು ಸಾಧ್ಯವಾಯಿತು.


**ಲೊಂಗ್‌ಯಾನ್ ನತ್ತ**

ಅಲ್ಲಿಂದ ಪುನ: ಬಸ್ಸಿನಲ್ಲಿ ಪ್ರಯಾಣ ಬೆಳೆಸಿ 11.40ರ ಸುಮಾರಿಗೆ ಲ್ಯಾಂಡ್ ಸ್ಕೇಪ್ ಹೋಟೇಲಿನಲ್ಲಿ ಊಟೋಪಚಾರ ಆಯಿತು. ಅಲ್ಲಿಂದ 1.30ರ ಸುಮಾರಿಗೆ ಬಸ್ಸಿನಲ್ಲಿ 3.30ರ ತನಕ ಪ್ರಯಾಣ ಯೋಂಗ್‌ಡಿಂಗ್ ತೋಲೋಗೆ. ಆತಂಕವಿಲ್ಲದೆ ನಾಲ್ಕೈದು ಅಂತರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ಸು ಓಡುತ್ತದೆ. ರಸ್ತೆಯಲ್ಲಿ ಜನಸಂಚಾರವಿಲ್ಲ. ವಾಹನಗಳು ಓಡಾಡುತ್ತಿವೆ. ರಸ್ತೆಯ ಅಕ್ಕಪಕ್ಕದಲ್ಲಿ ಬಣ್ಣ ಬಣ್ಣದ ಗಿಡಗಳು, ನಮ್ಮ ಗುಳಿ ಗುಂಪುಗಳು ಅಲ್ಲಿನ ರಸ್ತೆಗಳಲ್ಲಿ ಕಾಣುವುದಿಲ್ಲ. ಕರ್ರಗೆ ಕಂಗೊಳಿಸುತ್ತಿರುವ ರಸ್ತೆ, ರಸ್ತೆಯಲ್ಲಿ ವಾಹನಗಳಿಗೆ ಚಲಿಸಲು ಅನುಕೂಲವಾಗುವಂತೆ ಸಂಕೇತಗಳು, ಬಣ್ಣ ಬಣ್ಣದಲ್ಲಿ ರಸ್ತೆಗಳಿಗೆ ಮಾರ್ಕಿಂಗ್, ಗುಡ್ಡಗಳಿಂದ ಇಳಿಯುತ್ತಿರುವ ನೀರು. ಹಸಿರು ಬಣ್ಣದಿಂದ ಆಕರ್ಷಕವಾಗಿ ಕಾಣುತ್ತಿರುವ ಗಿಡ ಮರಗಳು, ಅಲ್ಲಿನ ಬಿದಿರುಗಳಿಂದ ಕೂಡಿದ ಪ್ರಕೃತಿ ಸೌಂದರ್ಯವೇ ಬೇರೆ. ಗುಡ್ಡ ಜರಿದು ಬೀಳದಂತೆ ರಸ್ತೆಗಳಲ್ಲಿರುವ ಸಿಮೆಂಟ್, ಕಲ್ಲಿನಿಂದ ಕಟ್ಟಿರುವ ತಡೆಗೋಡೆಗಳು, ಆ ತಡೆಗೋಡೆಗಳು ಕೂಡಾ ನೋಡುಗರ ಕಣ್ಣಿಗೆ ಖುಷಿ ಕೊಡಬಲ್ಲ ವಿವಿದ ನಮೂನೆಯ ಆಕೃತಿಯ ಕೆತ್ತನೆಗಳು, ಕೃಷಿಕರು ಆಧುನಿಕ ರೀತಿಯಲ್ಲಿ ನಡೆಸುವ ಕೃಷಿ ಪದ್ಧತಿಗಳನ್ನು ಕಾಣಲು ಸಾಧ್ಯವಾಗುವುದು.

ವಿದೇಶಿಯರಿಗೆ ಚೀನಾ ಅಂದರೆ ಅದೊಂದು ಅದ್ಭುತ ದೇಶ. ರಸ್ತೆಯಲ್ಲಿ ಅಲ್ಲಲ್ಲಿ ಇಟ್ಟಿರುವ ಸಿಸಿ ಕೆಮರಾಗಳು ಹೊರತಾಗಿ ಯಾವುದೇ ರೀತಿಯ ರಕ್ಷಣೆಯ ಅವಶ್ಯಕತೆ ಅಲ್ಲಿ ಬೀಳುವುದಿಲ್ಲ. ಇಂಡಿಯಾದಲ್ಲಿ ಬಲಬದಿಯಲ್ಲಿ ಕುಳಿತು ವಾಹನ ಚಾಲನೆ ಮಾಡುತ್ತೇವೆ. ಆದರೆ ಚೀನಾ ದೇಶದಲ್ಲಿ ಎಡ ಬದಿಯಲ್ಲಿ ಕುಳಿತು ವಾಹನ ಚಲಾಯಿಸುತ್ತಾರೆ. ನೂರಾರು ಕಿಲೋ ಮೀಟರ್ ತನಕ ನೇರ ರಸ್ತೆ. ಗುಡ್ಡ ಕೊರೆದು ಮಾಡಿರುವಂತಹ ಸುರಂಗ ರಸ್ತೆ, ಆ ಸುರಂಗದೊಳಗಡೆ ಕೂಡಾ ವಾಹನಗಳಿಗೆ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ. ಮೇಲ್ಗಡೆ ದಟ್ಟದಾದ ಕಾಡು, ಒಳಗಡೆ ಸಾವಿರಾರು ವಾಹನಗಳು ಸಂಚರಿಸಬಲ್ಲ ಸುರಂಗ ರಸ್ತೆ. ಆಧುನಿಕ ಚೀನಾವನ್ನು ಬಣ್ಣಿಸಲು ಅಸಾಧ್ಯ. ನೀವೇ ಒಂದು ಬಾರಿಯಾದರೂ ಚೀನಾವನ್ನು ಸಂದರ್ಶಿಸಿ.

ಲೋಂಗ್‌ಯಾನ್ ಸಿಟಿಯ ಬಗ್ಗೆ ಮುಂದಿನ ವಾರ ವಿವರಿಸುವೆನು.

**(ಮುಂದುವರಿಯುವುದು)**



Three Lanes and Seven Alleys

# ಅದಾಣಿ ಮತ್ತು ಮೋದಿ ಸರಕಾರವನ್ನು ಬಯಲಿಗೆಳೆದ ಸಂಪಾದಕರ ರಾಜೀನಾಮೆ ಪ್ರಸಂಗ

## ದೊಡ್ಡ ಬಂಡವಾಳಿಗರ ಭುಜಬಲ ಮತ್ತು ಧನಬಲಕ್ಕೆ ಸವಾಲು ಹಾಕಬೇಡಿ ಎಂಬ ಒಳ್ಳೆಯ ದಿನಗಳ ಎಚ್ಚರಿಕೆ

'ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' ಅಥವ ಇಪಿಡಬ್ಲ್ಯು ಎಂದು ಪ್ರಖ್ಯಾತವಾಗಿರುವ ಇಂಗ್ಲಿಷ್ ವಾರಪತ್ರಿಕೆ ದೇಶದ ಆರ್ಥಿಕ ಮತ್ತು ರಾಜಕೀಯ ರಂಗದ ಆಗುಹೋಗುಗಳ ಸ್ವತಂತ್ರ ಅಧ್ಯಯನಗಳಿಗೆ ಹೆಸರಾಗಿರುವ ಪತ್ರಿಕೆ. ಇದುವರೆಗೆ ಅದರ ಸಂಪಾದಕರಾಗಿದ್ದ  ಪರಂಜೊಯ್ ಗುಹ ಠಾಕುರ್ತ ಅವರು ಜುಲೈ 18ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವುದು ದೇಶದ ಬುದ್ಧಿಜೀವಿ ವಲಯದಲ್ಲಿ ಆಕ್ರೋಶ ಉಂಟು ಮಾಡಿದೆ.

ಇದಕ್ಕೆ ಮುಖ್ಯ ಕಾರಣ ಠಾಕುರ್ತ ಅವರು ರಾಜೀನಾಮೆ ನೀಡಬೇಕಾಗಿ ಬಂದ ಸಂದರ್ಭ. ಇವರು ದೇಶದ ಕಾರ್ಪೊರೇಟ್ ವಲಯದ ಆಗುಹೋಗುಗಳ ಬೆಳವಣಿಗೆಗಳ ಅಧ್ಯಯನ ಮತ್ತು ಹಗರಣಗಳ ಬಯಲಿಗೆ ಹೆಸರಾಗಿರುವ ಪತ್ರಕರ್ತರು.

ಕಳೆದ ತಿಂಗಳು ಇಪಿಡಬ್ಲ್ಯುನಲ್ಲಿ ಠಾಕುರ್ತ ಅವರು ದೇಶದ ಪ್ರಧಾನ ಮಂತ್ರಿಗಳು ಅತ್ಯಂತ ಆಪ್ತರೆನಿಸಿದ ಗೌತಮ್ ಅದಾಣಿ ಮಾಲಕತ್ವದ ಅದಾಣಿ ಪವರ್ ಲಿ.ನ ವ್ಯವಹಾರಗಳ ಕುರಿತಂತೆ ಎರಡು ಅಧ್ಯಯನಗಳನ್ನು ಪ್ರಕಟಿಸಿದ್ದರು. ಒಂದರ ಶಿರೋನಾಮೆ "ಅದಾಣಿ ಗುಂಪು 1000 ಕೋಟಿರೂ. ತೆರಿಗೆ ತಪ್ಪಿಸಿದೆಯೇ?" ಎಂದು, ಎರಡನೆಯದ್ದು "ಅದಾಣಿ ಗುಂಪಿಗೆ ಮೋದಿ ಸರಕಾರದ 500 ಕೋಟಿ ರೂ. ಬಕ್ಷೀಸು"

ಈ ಲೇಖನಗಳಿಂದ ತಮ್ಮ ಬಣ್ಣ ಬಯಲಾದ ಬಗ್ಗೆ ಅದಾಣಿ  ಮಾತ್ರವಲ್ಲ ಭ್ರಷ್ಟಾಚಾರ, ತೆರಿಗೆ ವಂಚನೆ, ಕಪ್ಪು ಹಣದ ವಿರುದ್ಧ 'ಕಠಿಣ ಕ್ರಮ'ಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂಬ 'ಒಳ್ಳೆಯ ದಿನ'ಗಳ ಸರಕಾರವೂ ಕುಪಿತಗೊಂಡಿದ್ದರೆ ಆಶ್ಚರ್ಯವಿಲ್ಲ. ಅದಾಣಿ ಪವರ್ ಈ ಲೇಖನಗಳು ಕಂಪನಿಗೆ ಅಪಖ್ಯಾತಿ ತರುವಂತವು, ಇವನ್ನು ಬೇಷರತ್ತಾಗಿ ತೆಗೆಯಬೇಕು ಮತ್ತು ಅದರಲ್ಲಿ ವ್ಯಕ್ತವಾಗಿರುವ ಅಂಶಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಇಪಿಡಬ್ಲ್ಯು ಪತ್ರಿಕೆ ನಡೆಸುವ ಸಮೀಕ್ಷಾ ಟ್ರಸ್ಟ್,  ಠಾಕುರ್ತ ಮತ್ತು ಈ ಲೇಖನಗಳ ಅವರ ಸಹ-ಲೇಖಕರಿಗೆ ಲಾಯರ್ ನೋಟೀಸು ಕಳಿಸಿತು. ಇಲ್ಲವಾದರೆ ಸೂಕ್ತ ಕ್ರವನ್ನು ಅದಾಣಿ ಪವರ್‌ನವರು ಕೈಗೊಳ್ಳಬೇಕಾಗುತ್ತದೆ ಎಂದು ಲಾಯರ್ ನೋಟೀಸು ಬೆದರಿಸಿತ್ತು.

ಆದರೆ ತಮ್ಮ ಲೇಖನಗಳ ಪ್ರತಿಯೊಂದು ಸಾಲಿಗೂ ತನ್ನ ಬಳಿ ದಾಖಲೆಗಳಿವೆ, ಇವುಗಳನ್ನು ಹಿಂತೆಗೆದುಕೊಳ್ಳುವ ಅಥವ ನಿರಾಕರಿಸುವ ಪ್ರಶ್ನೆಯಿಲ್ಲ ಎಂಬ ಪ್ರತ್ಯುತ್ತರವನ್ನು ದಾಖಲೆಗಳ ಸಹಿತ ಠಾಕುರ್ತ ಕಳಿಸಿದರು.

ಈ ನಡುವೆ ಸಮೀಕ್ಷಾ ಟ್ರಸ್ಟ್‌ನ ಸಭೆ ನಡೆದು ಠಾಕುರ್ತ ತಮ್ಮ ಸಂಪಾದಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮೇಲೆ ಹೇಳಿದ ಎರಡು ಲೇಖನಗಳನ್ನು ಇಪಿಡಬ್ಲ್ಯು ವೆಬ್‌ತಾಣದಿಂದ ತೆಗೆಯಲಾಗಿದೆ.




ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಕಾರ್ಪೊರೇಟ್ ಕುಳಗಳು ತಮ್ಮ ಬಗ್ಗೆ ವಿಮರ್ಶಾತ್ಮಕ ವರದಿಗಳು ಪ್ರಕಟವಾಗದಂತೆ ತಡೆಯಲು ಬಹುಕೋಟಿ ಡಾಲರುಗಳ ಮಾನನಷ್ಟ ಮೊಕದ್ದಮೆಯನ್ನು ಹಾಕುವ ಪ್ರವೃತ್ತಿ ಹೆಚ್ಚಾಗುತ್ತಿದ್ದು ಭಾರತದಲ್ಲೂ ಅದು ಪ್ರಕಟವಾಗುತ್ತಿದೆ. ಕಾರ್ಪೊರೇಟ್ ಒಡೆತನದ ಪತ್ರಿಕೆಗಳು ಸಹಜವಾಗಿಯೇ ಇದಕ್ಕೆ ತಲೆಬಾಗುತ್ತವೆ, ಅದಕ್ಕಿಂತ ಹೆಚ್ಚಾಗಿ ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಆದರೆ ಈಗ ಇಪಿಡಬ್ಲ್ಯುನಂತಹ ಸ್ವತಂತ್ರ ಪತ್ರಿಕೆಯನ್ನು ನಡೆಸುವವರೂ ಕಾರ್ಪೊರೇಟ್ ಧನಬಲದ ಎದುರು ಶರಣಾಗುವ ಪ್ರಕ್ರಿಯೆ ಈಗ ಆರಂಭವಾಗಿರುವಂತೆ ಕಾಣುತ್ತದೆ. ಪರಂಜೊಯ್ ಗುಹ ಠಾಕುರ್ತ ಕಾರ್ಪೊರೇಟ್ ಧನಬಲಕ್ಕೆ ಬಲಿಯಾಗಿರುವ ಮೊದಲ ಉನ್ನತ ಮಟ್ಟದ ಸಂಪಾದಕರಾಗಿದ್ದಾರೆ.

ಇದು ಸ್ವತಂತ್ರ ಚಿಂತನೆಯ ಮೇಲಿನ ದಾಳಿ ಎಂದು ಬುದ್ಧಿಜೀವಿ ವಲಯದಿಂದ ವ್ಯಾಪಕ ಆಕ್ರೋಶ ವ್ಯಕ್ತವಾದಾಗ ಸಮೀಕ್ಷಾ ಟ್ರಸ್ಟ್ ಹೇಳಿಕೆ ನೀಡಿ ತಾವೇನೂ ಕಾರ್ಪೊರೇಟ್ ಧನಬಲಕ್ಕೆ ಶರಣಾಗಿಲ್ಲ, ಠಾಕುರ್ತ ಅವರು ಟ್ರಸ್ಟ್‌ನ ಗಮನಕ್ಕೆ ತಾರದೆ ಲಾಯರ್ ನೋಟೀಸಿಗೆ ಪ್ರತ್ಯುತ್ತರ ನೀಡಿದ್ದಾರೆ, ಅದನ್ನು ಪ್ರಶ್ನಿಸಿದಾಗ ರಾಜೀನಾಮೆ ನೀಡಿದ್ದಾರೆ ಎಂದು ತನ್ನನ್ನು ಸಮರ್ಥಿಸಿಕೊಂಡಿದೆ.

ಹೌದು, ಟ್ರಸ್ಟ್‌ನ ಗಮನಕ್ಕೆ ತಾರದೆ ಪ್ರತ್ಯುತ್ತರ ನೀಡಿದ್ದು ತಪ್ಪು, ಆದರೆ ಟ್ರಸ್ಟ್‌ನವರು ತನ್ನ ಮೇಲೆ ಕೆಲವು ಶರತ್ತುಗಳನ್ನು ಹಾಕಿದ್ದರಿಂದ ತಾನು ಅದಕ್ಕೆ ಒಪ್ಪಲಾಗದೆ ರಾಜೀನಾಮೆ ನೀಡಬೇಕಾಯಿತು ಎಂದು ಠಾಕುರ್ತ ಹೇಳಿದ್ದಾರೆ.

ಅಲ್ಲದೆ, ಸಮೀಕ್ಷಾ ಟ್ರಸ್ಟ್ ಹೇಳಿಕೊಳ್ಳುವಂತೆ ಅದಾಣಿ ಧನಬಲದ ಎದುರು ಅಥವ ಆಳುವ ಸರಕಾರದ ಪರೋಕ್ಷ ಬೆದರಿಕೆಗೆ ತಲೆಬಾಗಿಲ್ಲವಾದರೆ ಈ ಎರಡು ಲೇಖನಗಳನ್ನು ವೆಬ್‌ತಾಣದಿಂದ ತೆಗೆದದ್ದಾದರೂ ಏಕೆ ಎಂಬ ಇಪಿಡಬ್ಲ್ಯುಗೆ ಅಧ್ಯಯನಪೂರ್ಣ ಲೇಖನಗಳನ್ನು ಬರೆಯುವ ಹಲವು ಲೇಖಕರ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ.

# ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ "ಜನಶಕ್ತಿ ಉತ್ಸವ"ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು 'ಜನಶಕ್ತಿ ಉತ್ಸವ'ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ "ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017" ಜುಲೈ-ಅಗಸ್ಟ್ ನಲ್ಲಿ ನಡೆಯಲಿದೆ.

ತುಮಕೂರು, ಉಡುಪಿ, ಕೋಲಾರ, ಗುಲ್ಬರ್ಗ ಗಳಲ್ಲಿ ಜನಶಕ್ತಿ ಜಿಲ್ಲಾ ಉತ್ಸವಗಳು ಅಗಸ್ಟ್ ಮೊದಲ ವಾರದಲ್ಲಿ ನಡೆಯಲಿವೆ.

- "ಜನಶಕ್ತಿ ಉತ್ಸವ 2017"ರ ಒಟ್ಟಾರೆ ಥೀಮ್ "ಇಂಡಿಯಾ 70 : ಸಾಧನೆಗಳು, ಸವಾಲುಗಳು"
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ "ಜನಶಕ್ತಿ ಉತ್ಸವ 2017" ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ "ಇಂಡಿಯಾ 70 : ಸಾಧನೆಗಳು, ಸವಾಲುಗಳು" ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ "ಲೈಕ್"ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

## ನಾಳಿನ ಕಾರ್ಯಕ್ರಮಗಳು

**ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಪ್ರಸಾರಾಂದೋಲನ, ಸಮಾವೇಶಗಳು** ಜುಲೈ 23 ರಿಂದ ಅಗಸ್ಟ್ 6

**ಬೀಡಿ ಕಾರ್ಮಿಕರ 6ನೇ ರಾಜ್ಯ ಸಮ್ಮೇಳನ** ಜುಲೈ 24-25 ಮೂಡಬಿದರೆ

**ಸಚಿವರ ಮತ್ತು ಶಾಸಕರ ಮನೆಗೆ ಮುತ್ತಿಗೆ** ಕಟ್ಟಡ ಕಾರ್ಮಿಕರ ಸಂಘಟನೆ ಜುಲೈ 26

**ಸಮಾಜವಾದಿ ಕ್ರಾಂತಿ ಮತ್ತು ವಿಜ್ಞಾನ** ಜುಲೈ 29 ಬೆಂಗಳೂರು

**ಕಾರ್ಮಿಕರ ರಾಜ್ಯ ಜಾಥಾ** ಜುಲೈ 29- ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ

**ಬುಡಕಟ್ಟು ಮಹಾಕಾವ್ಯಗಳು** ಅಗಸ್ಟ್ 9 ಸಮುದಾಯ, ಧಾರವಾಡ

**ಕಾರ್ಮಿಕರ ಅಹೋರಾತ್ರಿ ಧರಣಿ** ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

**ಜನಶಕ್ತಿ ರಾಜ್ಯ ಮಟ್ಟದ ಉತ್ಸವ** 2017 ಅಗಸ್ಟ್ 19 ಬೆಂಗಳೂರು

**ಸಮಾಜವಾದಿ ಕ್ರಾಂತಿ ಮತ್ತು ಸಂಸ್ಕೃತಿ** ಅಗಸ್ಟ್ 20 ಬೆಂಗಳೂರು

**ಸಾರ್ವತ್ರಿಕ ಮಹಾಮುಷ್ಕರ** ಸೆಪ್ಟೆಂಬರ್ 14

# "ಒಂದು ತೆರಿಗೆ ಒಂದು ಭಾರತ": ಪಡೆಯುವವರು ಮತ್ತು ಕಳೆದುಕೊಳ್ಳುವವರು




**– ಅರ್ಚನಾ ಪ್ರಸಾದ್**

**(ಅನುವಾದ : ಭಾರತಿ ಗಾಂವ್ಕರ್)**

**ಜಿ.ಎಸ್.ಟಿ. ತೆರಿಗೆ ವ್ಯವಸ್ಥೆ ಸರಕು ಮತ್ತು ಶ್ರಮದ ಮಾರುಕಟ್ಟೆಯಲ್ಲಿ ಸಣ್ಣ ಸಂಸ್ಥೆಗಳು ಮತ್ತು ಕಾರ್ಮಿಕರಿಗೆ ಅನಾನೂಕೂಲವಾದ ರೀತಿಯಲ್ಲಿ ಬದಲಾವಣೆಗಳನ್ನು ತರಲಿದೆ. ಈಗ ಈ ಮಾರುಕಟ್ಟೆಯಲ್ಲಿ ಇರುವ ಅಸಮಾನ ಮತ್ತು ಅಧಿಕಾರದ ಸಂಬಂಧಗಳ ಹಿನ್ನೆಲೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಸಂಸ್ಥೆಗಳಿಗೆ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯಿಂದ ಅನುಕೂಲ ಆಗುವ ಸಾಧ್ಯತೆ ಇಲ್ಲ. ಅನಾನುಕೂಲ ಆಗುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆ ಯಾವ ಸಂಸ್ಥೆಗಳಿಗೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದರ ಬಗೆಗೆ ಅಧ್ಯಯನ ಮಾಡಿ, ಸಾಮೂಹಿಕ ಪ್ರಜಾಸತ್ತಾತ್ಮಕ ಸಂಘಟನೆಗಳು ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಗೆ ಬದಲಾವಣೆ ಸೂಚಿಸಬೇಕು ಎನ್ನುತ್ತಾರೆ ಅರ್ಚನಾ ಪ್ರಸಾದ್.**

30 ಜೂನ್ 2017 ರಂದು ಮಧ್ಯರಾತ್ರಿ ಮೋದಿ ಸರ್ಕಾರ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತಂದಿದ್ದು, ಈ ಅತಿ ದೊಡ್ಡ ಆರ್ಥಿಕ ಸುಧಾರಣೆ ಸಂಬಂಧಿಸಿದ ಎಲ್ಲಾ ಪಾಲುದಾರರಿಗೂ ಅನುಕೂಲವಾಗಲಿದೆ ಎಂದು ಮೋದಿ ಸರ್ಕಾರ ಪ್ರಚಾರ ಮಾಡುತ್ತಿದೆ. ಗ್ರಾಹಕರಿಗೆ ಪರೋಕ್ಷ ತೆರಿಗೆ-ಯು ಒಟ್ಟಾರೆ ಹೊರೆ ಕಡಿಮೆ ಆಗುವುದು. ಭಾರತಕ್ಕೆ ಒಂದು ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ರಚಿಸಲು ಸಹಾಯವಾಗುತ್ತದೆ. ಮೇಕ್ ಇನ್ ಇಂಡಿಯಾ-ಕ್ಕೆ ಮತ್ತು ವಿದೇಶೀ ಬಂಡವಾಳದಾರರಿಗೆ ಉತ್ತಮ ಉತ್ತೇಜನ ನೀಡುವುದು ಎಂದೆಲ್ಲಾ ಮಾಧ್ಯಮಗಳಲ್ಲಿ ಬಿರುಸಿನ ಪ್ರಚಾರ ನಡೆದಿದೆ. ಮುಂದುವರೆದು, ಮುಕ್ತ ಮಾರುಕಟ್ಟೆಯಲ್ಲಿ ಎಲ್ಲ ಸಣ್ಣ, ಮಧ್ಯಮ ಅಥವಾ ದೊಡ್ಡ ಉತ್ಪಾದಕರನ್ನು ಸಮಾನವಾಗಿ ಪೈಪೋಟಿಯಲ್ಲಿ ಮಾಡಬಲ್ಲವರು ಎಂದು ನೋಡುವ ಜಿಎಸ್‌ಟಿ ನೀತಿಯಿಂದಾಗಿ, ಈ ವ್ಯವಸ್ಥೆಯಿಂದ ಯಾರಿಗೆ ಲಾಭವಾಗಿದೆ ಯಾರಿಗೆ ನಷ್ಟವಾಗಿದೆ ಎಂಬ ದೊಡ್ಡ ಪ್ರಶ್ನೆ ಎದ್ದಿದೆ. ಭಾರತದಲ್ಲಿ ಇರುವ ಸರಕುಗಳ ಮತ್ತು ಶ್ರಮದ ಮಾರುಕಟ್ಟೆಯ ಒಳಗಿರುವ ಅಸಮಾನತೆಯನ್ನು ಗಮನದಲ್ಲಿ ಇಟ್ಟುಕೊಂಡು ಮತ್ತು ಅದರ ಮೇಲೆ ಹೊಸ ಏಕೀಕೃತ ಸಮಾನ ತೆರಿಗೆ ವ್ಯವಸ್ಥೆಯ ಪರಿಣಾಮಗಳ ಬಗ್ಗೆ ಗಮನ ಹರಿಸುವುದರ ಮೂಲಕ ಮಾತ್ರವೇ ಆ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬಹುದು.

**ಅಸಮಾನತೆ ಮತ್ತು ಅನೌಪಚಾರಿಕತೆ**

ಇತ್ತೀಚಿನ ಅಂಕಿಅಂಶಗಳನ್ನು ಗಮನಹರಿಸಿದರೆ ಕೈಗಾರಿಕಾ ಉತ್ಪನ್ನ, ವ್ಯಾಪಾರ ಮತ್ತು ಇತರ ಸೇವೆಗಳ ಅನೌಪಚಾರೀಕರಣ ಭರದಿಂದ ಸಾಗಿರುವುದು ತಿಳಿದುಬರುತ್ತಿದೆ. ದೇಶದ ಕೈಗಾರಿಕಾ ಆರ್ಥಿಕತೆಯು ಸಂಘಟಿತ ಮತ್ತು ಅಸಂಘಟಿತ ಉದ್ಯಮಗಳಿಂದ ಕೂಡಿದೆ. ಕಂಪನಿ ಕಾಯಿದೆ ಅಡಿಯಲ್ಲಿ ಖಾಸಗೀ ಅಥವಾ ಸಾರ್ವಜನಿಕ ಉದ್ಯಮ ಎಂದು ಗುರುತಿಸಲಾದವುಗಳು ಸಂಘಟಿತ ಉದ್ಯಮಗಳೆನಿಸಿಕೊಳ್ಳುತ್ತವೆ. ಉಳಿದೆಲ್ಲವೂ ಕೂಡ ಅಸಂಘಟಿತ ಉದ್ಯಮಗಳು ಮತ್ತು ಅನೌಪಚಾರಿಕ ವಲಯದ ಒಳಗಡೆ ಬರುತ್ತದೆ.

ಮೇಲ್ಕಂಡ ಚೌಕಟ್ಟಿನ ಒಳಗಡೆ 0.3 ಪ್ರತಿಶತ ಸುಮಾರು ಕೃಷಿಯೇತರ ವಲಯದಲ್ಲಿರುವ ಸಂಸ್ಥೆಗಳನ್ನು, ಎನ್.ಎಸ್.ಎಸ್.ಓ. ಮತ್ತು ವಾರ್ಷಿಕ ರಾಷ್ಟ್ರೀಯ ಕೈಗಾರಿಕಾ ಸಮೀಕ್ಷೆ (ಎ.ಎಸ್.ಐ) ಕ್ರೋಢೀಕರಿಸಿದ ಪ್ರಸಕ್ತ ಅಂಕಿ ಅಂಶಗಳ ಪ್ರಕಾರ, ನೊಂದಾಯಿತ 'ಸಂಘಟಿತ ವಲಯ ಉದ್ಯಮಗಳು" ಎಂದು ಕರೆಯಲಾಗಿದೆ. 2011 ಮತ್ತು 2016 ಅವಧಿಯ ಒಳಗಡೆ ಈ ವಿಭಾಗ ಶೇ. 0.03 ರಷ್ಟು ಮಾತ್ರ ಏರಿತು. ಒಟ್ಟಾರೆಯಾಗಿ ಕೇವಲ ಕಾಲು ಭಾಗದಷ್ಟು ಕಂಪನಿಗಳು ಮಾತ್ರ ರಿಜಿಸ್ಟರ್ ಆಗಿವೆ. ಅದೇ ವೇಳೆ ಅಸಂಘಟಿತ ವಲಯದ ಕೇವಲ 30% ರಷ್ಟು ಉದ್ಯಮಗಳೂ ಕಾರ್ಖಾನೆ ಕಾಯಿದೆಯಡಿ ರಿಜಿಸ್ಟರ್ ಆಗಿವೆ. ಹಾಗಾಗಿ 61% ಸಂಸ್ಥೆಗಳು ಇತ್ತ ಕಾರ್ಖಾನೆ ಅಥವಾ ಅತ್ತ ಕಂಪನಿ ಕಾಯಿದೆಗಳಡಿಯೂ ನೊಂದಾಯಿತವಾಗದಿರುವುದು. ಇವು ಹೆಚ್ಚಾಗಿ ಬಹಳ ಸಣ್ಣ ಉದ್ಯಮಗಳು. ಒಟ್ಟು ಕೃಷಿಯೇತರ ಸಂಘಟಿತ ಸಂಸ್ಥೆಗಳಲ್ಲಿ ಸುಮಾರು 84.2% ಸಂಸ್ಥೆಗಳ 'ಸ್ವಂತ ಖಾತೆಯ ಸಂಸ್ಥೆಗಳು' ಅಂದರೆ ಉದ್ಯಮದ ಮುಖ್ಯಸ್ಥ ಅಥವಾ ಮಾಲಿಕರೇ ಅಥವಾ ಆತನ ಕುಟುಂಬದ ಸದಸ್ಯರೇ ಕೆಲಸ ಮಾಡುತ್ತಾರೆ. ಎನ್.ಎಸ್.ಎಸ್.ಐ ಸಮೀಕ್ಷೆ ಪ್ರಕಾರ ಇಂತಹ ಸಂಸ್ಥೆಗಳಲ್ಲಿ ಅಪರೂಪಕ್ಕೆ ತುಂಬಾ ಕೆಲಸವಿದ್ದಾಗ ಮಾತ್ರ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತದೆ. ಅಥವಾ ಕೃಷಿ ಕೆಲಸದ ಅವಧಿಯಲ್ಲಿ ತುಂಬಾ ಒತ್ತಡವಿದ್ದಲೂ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತದೆ. 2011 ರಿಂದ 2016 ರ ಅವಧಿಯೂ ಈ ವಿಭಾಗದಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ.

2011 ರಲ್ಲಿ ಒಂದು ಸಂಸ್ಥೆಯ ಗಾತ್ರವನ್ನು ಅಂದಾಜಿಸಿದಾಗ ಸರಾಸರಿ ಕೆಲಸ ಮಾಡುವ/ ನೇಮಕಗೊಂಡ ಕಾರ್ಮಿಕರು 1.42% ಇತ್ತು. 2015-16 ರ ವೇಳೆಗೆ ಪ್ರತಿ ಸಂಸ್ಥೆಗೆ 1.28% ಕಾರ್ಮಿಕರ ಪ್ರಮಾಣಕ್ಕೆ ಇಳಿಯಿತು. ಸಣ್ಣ ಪ್ರಮಾಣದ ಆದಾಯ ಹೊಂದಿರುವ ಏಕ ಕಾರ್ಮಿಕ ನೊಂದಣಿ ರಹಿತ ಸಂಸ್ಥೆಗಳು ವಿಸ್ತೃತಗೊಳ್ಳುವುದರ ಬದಲಾಗಿ ದಿನೇ ಕುಗ್ಗುತ್ತಿವೆ. ಅದೇ ಸಂದರ್ಭದಲ್ಲಿ ಸಣ್ಣ ಪ್ರಮಾಣದಲ್ಲಿರುವ ನೊಂದಣಿಯಾಗಿರುವ ಸಂಘಟಿತ ಮತ್ತು ಅಸಂಘಟಿತ ಸಂಸ್ಥೆಗಳು ದೊಡ್ಡ ಪ್ರಮಾಣದ ಬಂಡವಾಳವನ್ನು ನಿಯಂತ್ರಿಸುತ್ತಿದ್ದು, ಜಿಡಿಪಿಗೆ 60% ಕೊಡುಗೆ ನೀಡುತ್ತಿವೆ. ಈ ಅಧ್ಯಯನವನ್ನು 2015 ರಲ್ಲಿ ಹಣಕಾಸು ಇಲಾಖೆ ಮಾಡಿತ್ತು.

ಮೇಲ್ಕಂಡ ಪಟ್ಟಿಯ ಪ್ರಕಾರ ಸರಿಸುಮಾರು 93.5% ವಹಿವಾಟನ್ನು 8.7% ತೆರಿಗೆ ಪಾವತಿಸುವ ಸಂಸ್ಥೆಗಳು ನಿಯಂತ್ರಿಸುತ್ತಿದೆ. ಅದೇ ಸಂದರ್ಭದಲ್ಲಿ 79% ತೆರಿಗೆ ಪಾವತಿಸುವ ಸಂಸ್ಥೆಗಳ 6.5% ಕ್ಕಿಂತ ಕಡಿಮೆ ವಹಿವಾಟನ್ನು ನಿಯಂತ್ರಿಸುತ್ತಿವೆ. ಇದರಿಂದಾಗಿ ವಿವಿಧ ಸಂಸ್ಥೆಗಳಲ್ಲಿ ಆದಾಯದ ಉತ್ಪಾದನೆ ಮತ್ತು ಸ್ವತ್ತಿನ ನಿಯಂತ್ರಣದಲ್ಲಿ ಇರುವ ಥಳುಕಿನ ಅಸಮಾನತೆ ಕಂಡುಬರುತ್ತದೆ. ಬೃಹತ್ ಸಂಖ್ಯೆಯ ಏಕಕಾರ್ಮಿಕ ಮಾಲೀಕತ್ವದ ಸಂಸ್ಥೆಗಳು ಮೇಲಿನ ಪಟ್ಟಿಯ ಮೊದಲೆರಡು ವರ್ಗೀಕರಣದ ಒಳಗೆ ಬರುತ್ತವೆ ಮತ್ತು ಸರಕು ಮಾರುಕಟ್ಟೆಯನ್ನು ನಿಯಂತ್ರಿಸುವ ವಿಷಯಕ್ಕೆ ಸಂಬಂಧ ಪಟ್ಟಂತೆ. ಅತಿಹೆಚ್ಚು ಅನಾನುಕೂಲಕ್ಕೆ ಒಳಗಾಗುತ್ತವೆ.

**ಯಾಕೆ ಸಣ್ಣ ಸಂಸ್ಥೆಗಳು ಅನಾನುಕೂಲಕ್ಕೆ ಒಳಗಾಗುತ್ತವೆ?**

ಜಿ.ಎಸ್.ಟಿ ಯು ನೊಂದಣಿ ಆದ ಅಥವಾ ಆಗದೇ ಇರುವ ಸಂಸ್ಥೆಗಳಿಂದ ಉತ್ಪಾದಿತವಾದ ಸರಕು ಮತ್ತು ಸೇವೆಗಳಿಗೆ ಅದರ ಮೂಲಸ್ಥಾನದಲ್ಲಿಯೇ ತೆರಿಗೆ ವಿಧಿಸುವುದನ್ನು ಕಡ್ಡಾಯ ಎಂದಿದೆ. ಹಾಗಾಗಿ ಜಿ.ಎಸ್.ಟಿ ಕಾಯ್ದೆಯನ್ನು ಅನುಸರಿಸಲು 6.34 ಕೋಟಿ ಅಸಂಘಟಿತ ಸಂಸ್ಥೆಗಳು ಆನ್‌ಲೈನ್ ಮೂಲಕ ನೊಂದಣಿ ಮಾಡಿಕೊಳ್ಳಬೇಕು. ಇದರಿಂದಾಗಿ 4.5 ಕೋಟಿ ಸಣ್ಣ ಮತ್ತು ಅತಿಸಣ್ಣ ಸಂಸ್ಥೆಗಳಿಗೆ ಆನ್-ಲೈನ್ ರಿಜಿಸ್ಟರ್ ಮಾಡಿಕೊಳ್ಳಲು ಮೂಲಭೂತ ಸೌರ್ಕಯ್ಯ ಹೆಚ್ಚಿಸಿಕೊಳ್ಳಲು ಹೆಚ್ಚಿನ ಖರ್ಚು ಮಾಡಲು ಬಲಾತ್ಕಾರ ಮಾಡಲಾಗುತ್ತದೆ. (60% ಕ್ಕೂ ಹೆಚ್ಚು ಸಂಸ್ಥೆಗಳಿಗೆ ಅಂತರ್ಜಾಲ ಸೌಲಭ್ಯ ಇಲ್ಲವಾಗಿದ್ದು, ಲೆಕ್ಕಪತ್ರಗಳನ್ನು ಸಾಂಪ್ರದಾಯಿಕ ಮಾದರಿಯಲ್ಲಿ ಮಾಡುತ್ತಿದ್ದಾರೆ). ಜಾಗತಿಕ ಬ್ಯಾಂಕ್‌ನ ಗುಂಪೊಂದು ಮಾಡಿದ ಅಧ್ಯಯನ ಪ್ರಕಾರ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವ್ಯಾಟ್ ಮತ್ತು ಜಿ.ಎಸ್.ಟಿ. ಯಂತಹ ತೆರಿಗೆಯು ಅಂಗಿಕಾರದ ವ್ಯಚ್ಚವನ್ನು ಸಣ್ಣ ಮತ್ತು ಅತಿಸಣ್ಣ ಸಂಸ್ಥೆಗಳು ತಮ್ಮ ಉತ್ಪಾದನಾ ವೆಚ್ಚದ 3.15% ರಷ್ಟು ಭರಿಸಬೇಕು. ಆದರೆ ದೊಡ್ಡ ದೊಡ್ಡ ಸಂಸ್ಥೆಗಳಿಗೆ ಇದು ಕೇವಲ 0.5% ರಷ್ಟು ಮಾತ್ರ.

**ಒಟ್ಟು ವಹಿವಾಟುವಾರಾಗಿ ತೆರಿಗೆ ಪಾವತಿದಾರರ ಹಂಚಿಕೆ, 2013**

| ಒಟ್ಟು ವಹಿವಾಟಿನ ಮೌಲ್ಯ (ರೂ. ಗಳಲ್ಲಿ) | ತೆರಿಗೆ ಪಾವತಿದಾರರ ಸಂಖ್ಯೆ | ಒಟ್ಟು ತೆರಿಗೆ ಪಾವತಿದಾರರ ಶೇಕಡಾವಾರು | ಒಟ್ಟು ವಹಿವಾಟಿನ ಮೌಲ್ಯ (ಕೋಟಿ ರೂ.ಗಳಲ್ಲಿ) | ಒಟ್ಟು ಮೌಲ್ಯದ ಶೇಕಡಾವಾರು |
|---|---|---|---|---|
| 0 -10 ಲಕ್ಷ | 64.33 ಲಕ್ಷ | 68.20% | 0.85 ಲಕ್ಷ | 0.40% |
| 10 -25 ಲಕ್ಷ | 6.82 ಲಕ್ಷ | 7.20% | 1.12 ಲಕ್ಷ | 0.50% |
| 25 - 40 ಲಕ್ಷ | 3.25 ಲಕ್ಷ | 3.50% | 1.04 ಲಕ್ಷ | 0.50% |
| 40 ಲಕ್ಷ – 1 ಕೋಟಿ | 6.68 ಲಕ್ಷ | 7.10% | 4.46 ಲಕ್ಷ | 2.00% |
| 1 - 2 ಕೋಟಿ | 5.03 ಲಕ್ಷ | 5.30% | 7.12 ಲಕ್ಷ | 3.20% |
| 2 - 5 ಕೋಟಿ | 4.27 ಲಕ್ಷ | 4.50% | 13.41 ಲಕ್ಷ | 6.00% |
| 5 -10 ಕೋಟಿ | 1.86 ಲಕ್ಷ | 2.00% | 13.07 ಲಕ್ಷ | 5.80% |
| 10 - 100 ಕೋಟಿ | 1.85 ಲಕ್ಷ | 2.00% | 46.92 ಲಕ್ಷ | 20.80% |
| 100 ಕೋಟಿ ಗಿಂತ ಹೆಚ್ಚು | 0.18 ಲಕ್ಷ | 0.20% | 137.26 ಲಕ್ಷ | 60.90% |
| **ಒಟ್ಟು** | **94.31 ಲಕ್ಷ** | **100.00%** | **225.26 ಲಕ್ಷ** | **100.00%** |


*ಮೂಲ : ಹಣಕಾಸು ಸಚಿವಾಲಯ, 2015*

ಇದರ ಅರ್ಥ ಜಿ.ಎಸ್.ಟಿ ಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಣ್ಣ ಮತ್ತು ಅತಿಸಣ್ಣ ಸಂಸ್ಥೆಗಳು ಈಗಾಗಲೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ದೊಡ್ಡ ಸಂಸ್ಥೆಗಳಿಗಿಂದ ಹೆಚ್ಚಿನ ವೆಚ್ಚವನ್ನು ಮಾಡಬೇಕಾಗುತ್ತದೆ.

ಸರ್ಕಾರ ಯಾವುದೇ ರೀತಿಯ ಸಬ್ಸಿಡಿಯನ್ನು ಇಂತಹ ವೆಚ್ಚಗಳನ್ನು ಭರಿಸಲು ನೀಡುವುದಿಲ್ಲ – ಸರ್ಕಾರ ಜಿ.ಎಸ್.ಟಿ. ಬಗ್ಗೆ ದೂರದರ್ಶನದಲ್ಲಿ ಮೂರು ಘಂಟೆಗಳ ತರಬೇತಿ ನೀಡಬಹುದು ಅಥವಾ 100 ಸಹಾಯಕ ಬೂತ್‌ಗಳನ್ನು ಸ್ಥಾಪಿಸಬಹುದು ವಿನಹ ಹಣಕಾಸಿನ ಸಹಾಯ ಅಲ್ಲ. ಇವ್ಯಾವುವೂ ಸಣ್ಣ ಅತಿ ಸಣ್ಣ ಸಂಸ್ಥೆಗಳ ಜಿ.ಎಸ್.ಟಿ. ಜಾರಿಯ ಖರ್ಚನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡುವುದಿಲ್ಲ. ಈಗ ರಿಜಿಸ್ಟರ್ ಆಗದಿರುವ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಜಿ.ಎಸ್.ಟಿ.ಗೆ ರಿಜಿಸ್ಟರ್ ಮಾಡಲು ಸಾಧ್ಯವಾಗದಿದ್ದರೆ ಏನಾಗುತ್ತದೆ? ಜಿ.ಎಸ್.ಟಿ. ನಿಯಮಗಳ ಪ್ರಕಾರ ರಿಜಿಸ್ಟರ್ ಆದ ಸಂಸ್ಥೆ ರಿಜಿಸ್ಟರ್ ಆಗದ ಸಂಸ್ಥೆಯಿಂದ ಸರಕು/ಸೇವೆ ಖರೀದಿಸಿದರೆ ಅದನ್ನು ಖರೀದಿ ಮಾಡಿದ ಸಂಸ್ಥೆ ಅನ್ವಯವಾಗುವ ಜಿ.ಎಸ್.ಟಿ. ತೆರಬೇಕು. ಇದು ರಿಜಿಸ್ಟರ್ ಆಗದಿರುವ ಸಂಸ್ಥೆಗಳಿಂದ ಸರಕು/ಸೇವೆ ಖರೀದಿಸದಂತೆ ಒತ್ತಡ. ಇನ್ನೊಂದು ಕಡೆ ತಮ್ಮ ಉತ್ಪಾದನಾ ಖರ್ಚು ತಗ್ಗಿಸಲು ದೊಡ್ಡ ಪ್ರಮಾಣದಲ್ಲಿ ಬಟ್ಟೆ, ಇಲೆಕ್ಟ್ರಾನಿಕ್ಸ್, ವಾಹನ ಕ್ಷೇತ್ರಗಳಲ್ಲಿ ಉತ್ಪಾದನೆಯನ್ನು ಸಣ್ಣ ಅತಿ ಸಣ್ಣ ಸಂಸ್ಥೆಗಳಿಗೆ ಹೊರಗುತ್ತಿಗೆ ಕೊಡುತ್ತವೆ. ಅವನ್ನು ಬಹುಶಃ ನಿಲ್ಲಿಸುವುದು ಸಾಧ್ಯವಾಗಲಿಕ್ಕಿಲ್ಲ. ಅವು ಇಂತಹ ರಿಜಿಸ್ಟರ್ ಆಗದಿರುವ ಸಂಸ್ಥೆಗಳಿಂದ ಸರಕು/ಸೇವೆ ಖರೀದಿಸಿ ಅನ್ವಯವಾಗುವ ಜಿ.ಎಸ್.ಟಿ.ಯನ್ನು ಅವುಗಳ ಹಣ ಪಾವತಿಯಿಂದ ಕಡಿತ ಮಾಡುವ ಸಾಧ್ಯತೆ ಹೆಚ್ಚು. ಇದರರ್ಥ ಜಿ.ಎಸ್.ಟಿ.ಯಿಂದಾಗಿ ಸರಕು/ಸೇವೆ ಮಾರುಕಟ್ಟೆಯಲ್ಲಿ ದೊಡ್ಡ ಕಂಪನಿಗಳು ಸಣ್ಣ ಮತ್ತು ಅತಿ ಸಣ್ಣ ಸಂಸ್ಥೆಗಳ ಜತೆ ಇನ್ನಷ್ಟು ಪ್ರತಿಕೂಲವಾದ ವ್ಯಾಪಾರದ ಶರತ್ತುಗಳನ್ನು ಹಾಕುವ ಅವಕಾಶ ಮಾಡಿಕೊಡುತ್ತದೆ.

ಸಣ್ಣ ಸಂಸ್ಥೆಗಳು ಇನ್ನೊಂದು ರೀತಿಯಲ್ಲಿ ಜಿ.ಎಸ್.ಟಿ.ಯಿಂದಾಗಿ ಸಂಕಷ್ಟಕ್ಕೆ ಒಳಗಾಗುತ್ತವೆ. ಅವು ಉತ್ಪಾಧಿಸುವ ಉತ್ಪನ್ನಗಳಿಗೆ ತೆರಿಗೆ ಹೆಚ್ಚಾದಾಗ ಅವನ್ನು ಖರೀದಿಸುವ ದೊಡ್ಡ ಸಂಸ್ಥೆಗಳು ಹೆಚ್ಚಿದ ಉತ್ಪಾದನಾ ವೆಚ್ಚ ತೂಗಿಸಲು ಸಣ್ಣ ಸಂಸ್ಥೆಗಳ ಉತ್ಪನ್ನಗಳ ಬೆಲೆಯ ಕಡಿತ ಮಾಡಬಹುದು. ಉದಾಹರಣೆಗೆ ಬಟ್ಟೆ ಉದ್ಯಮ ಶೇ. 96 ನೂಲನ್ನು ಸಣ್ಣ ಸಂಸ್ಥೆಗಳಿಂದ ಖರೀದಿ ಮಾಡುತ್ತದೆ. ಸಿಂಥೆಟಿಕ್ ನೂಲಿನ ಮೇಲೆ ಶೇ. 18 ತೆರಿಗೆ ಹಾಕಿದ್ದು ಬಟ್ಟೆಯ ಬೆಲೆ ಬಳಕೆದಾರರಿಗೆ ಹೆಚ್ಚಾಗಬಹುದು. ನೂಲು ಪೂರೈಕೆ ಮಾಡುವ ಸಣ್ಣ ಸಂಸ್ಥೆಗಳ ಲಾಭಾಂಶ ಕಡಿಮೆ ಮಾಡುವ ಬೆಲೆ ಹೇರಿಕೆ ಮಾಡಬಹುದು. ಇದೇ ರೀತಿ ವಾಹನ ಬಿಡಿ ಭಾಗಗಳ ತೆರಿಗೆ ಶೇ. 12ರಿಂದ 28ಕ್ಕೆ ಏರಿಸಿದ್ದು ದೊಡ್ಡ ವಾಹನ ಕೈಗಾರಿಕೆ ಬಿಡಿ ಭಾಗಗಳ ಬೆಲೆಯನ್ನು ಚೌಕಾಶಿ ಮಾಡಿ ಕಡಿಮೆ ಮಾಡಬಹುದು.

ಜಿ.ಎಸ್.ಟಿ. ತೆರಿಗೆ ವ್ಯವಸ್ಥೆ ಸರಕು ಮತ್ತು ಶ್ರಮದ ಮಾರುಕಟ್ಟೆಯಲ್ಲಿ ಸಣ್ಣ ಸಂಸ್ಥೆಗಳು ಮತ್ತು ಕಾರ್ಮಿಕರಿಗೆ ಅನಾನೂಕೂಲವಾದ ರೀತಿಯಲ್ಲಿ ಬದಲಾವಣೆಗಳನ್ನು ತರಲಿದೆ. ಈಗ ಈ ಮಾರುಕಟ್ಟೆಯಲ್ಲಿ ಇರುವ ಅಸಮಾನ ಮತ್ತು ಅಧಿಕಾರದ ಸಂಬಂಧಗಳ ಹಿನ್ನೆಲೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಸಂಸ್ಥೆಗಳಿಗೆ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯಿಂದ ಅನುಕೂಲ ಆಗುವ ಸಾಧ್ಯತೆ ಇಲ್ಲ. ಅನಾನುಕೂಲ ಆಗುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆ ಯಾವ ಸಂಸ್ಥೆಗಳಿಗೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದರ ಬಗೆಗೆ ಅಧ್ಯಯನ ಮಾಡಿ, ಸಾಮೂಹಿಕ ಪ್ರಜಾಸತ್ತಾತ್ಮಕ ಸಂಘಟನೆಗಳು ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಗೆ ಬದಲಾವಣೆ ಸೂಚಿಸಬೇಕು. ■




ಕೃಪೆ: ಸತೀಶ್ ಆಚಾರ್ಯ

# ಎಲ್‌ಡಿಎಫ್ ಸರಕಾರದ ಕರಡು ಕಾರ್ಮಿಕ ಧೋರಣೆ ಪ್ರಕಟ: ಕನಿಷ್ಟ ಸಂಬಳ 600 ರೂ.ಗೆ ಏರಿಕೆ

**ಕೇರಳದ ಎಲ್‌ಡಿಎಫ್ ಸರಕಾರ ತನ್ನ ಕಾರ್ಮಿಕ ಧೋರಣೆಯ ಕರಡನ್ನು ಪ್ರಕಟಿಸಿದೆ. ಇದರಲ್ಲಿ ರಾಜ್ಯದ ಆರ್ಥಿಕ ವ್ಯವಸ್ಥೆಯ ಮತ್ತು ಸಮಾಜದ ಸಮಗ್ರ ಅಭಿವೃದ್ಧಿಯೊಂದಿಗೆ ಕಾರ್ಮಿಕರ ಕಲ್ಯಾಣ ಮತ್ತು ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಬಗ್ಗೆ ಗಮನ ನೀಡಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.**

ಕೇರಳ ದೇಶದಲ್ಲಿ ಅತ್ಯಂತ ಹೆಚ್ಚು ಕೂಲಿದರಗಳಿರುವ ರಾಜ್ಯ ಎಂದೆನಿಸಿಕೊಂಡಿದೆ. ಇದಕ್ಕೆ ಇಲ್ಲಿ ಹೆಚ್ಚಿನ ವಲಯಗಳಲ್ಲಿ ದುಡಿಮೆಗಾರರು ಕಾರ್ಮಿಕ ಸಂಘಟನೆಗಳಲ್ಲಿ ಸಂಘಟಿತರಾಗಿರುವುದೇ ಕಾರಣ. ಅಲ್ಲದೆ ಇತರ ಹಲವು ರಾಜ್ಯಗಳಂತೆ ಕೇವಲ ಕಾಗದದ ಮೇಲಿರುವ ದರಗಳು ಮಾತ್ರವಲ್ಲ, ನಿಜವಾಗಿಯೂ ಕನಿಷ್ಟ ಕೂಲಿಗಳೇ, ಅಂದರೆ ಬಹಳಷ್ಟು ಕಾರ್ಮಿಕರು ಇದಕ್ಕಿಂತ ಹೆಚ್ಚಿನ ಕೂಲಿ ಪಡೆಯುತ್ತಾರೆ.

ಹೊಸ ಕಾರ್ಮಿಕ ಧೋರಣೆಯಲ್ಲಿ ಕನಿಷ್ಟ ದಿನಗೂಲಿಯನ್ನು 600ರೂ. ಗೆ ಏರಿಸುವ ಪ್ರಸ್ತಾಪ ಇದೆ. ಕನಿಷ್ಟ ಕೂಲಿ ಕಾಯ್ದೆಯ ಅಡಿಯಲ್ಲಿ ಬಾರದ ಕ್ಷೇತ್ರಗಳಲ್ಲಿ ಒಂದು ಮೂಲ ಕೂಲಿ ದರವಾದರೂ ಲಭ್ಯವಾಗುವಂತೆ ಮಾಡಲಾಗುವುದು. ಯಾವ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಬಳ ಕೊಡುವ ಸಾಧ್ಯತೆ ಇದೆಯೋ ಅಲ್ಲಿ 'ನ್ಯಾಯಯುತ ಕೂಲಿ'ಗಳನ್ನು ಜಾರಿ ಮಾಡಲಾಗುವುದು, ಯಾವುದಾದರೂ ಸಂಬಳ ಬಾಕಿ ಇದ್ದಲ್ಲಿ ಮಾಲಕರಿಂದ ಅದನ್ನು ವಸೂಲಿ ಮಾಡಲು ಒಂದು ರೆವಿನ್ಯೂ ವಸೂಲಿ ವ್ಯವಸ್ಥೆಯನ್ನು ಜಾರಿ ಮಾಡಲಾಗುವುದು ಎಂದು ಈ ಧೋರಣೆ ಹೇಳುತ್ತದೆ.

ಕಾರ್ಮಿಕ ಕಾಯ್ದೆಗಳ ರಕ್ಷಣೆ ಇಲ್ಲದ ಅನುದಾನವಿಲ್ಲದ ಶೈಕ್ಷಣಿಕ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೆಲಸ ಮತ್ತು ಸಂಬಳದ ಪರಿಸ್ಥಿತಿಯ ನಿಯಂತ್ರಣಕ್ಕಾಗಿ ಸೂಕ್ತ ಶಾಸನವನ್ನು ತರಲಾಗುವುದು ಎಂದೂ ಈ ಕರಡು ಧೋರಣೆ ಹೇಳಿದೆ. ಧೋರಣೆಯ ಇತರ ಅಂಶಗಳ ಸಂಕ್ಷಿಪ್ರ ಪಟ್ಟಿ ಇಲ್ಲಿದೆ:

* ಕೇರಳ ದೇಶದಲ್ಲೇ ಅತ್ಯಂತ ವ್ಯಾಪಕ **ಸಾಮಾಜಿಕ ಭದ್ರತಾ ಸೌಲಭ್ಯ**ಗಳಿರುವ ರಾಜ್ಯ ಕೂಡ. ಕಲ್ಯಾಣ ಯೋಜನೆಗಳು, ಮಂಡಳಿಗಳು ಇನ್ನಷ್ಟು ಸಮರ್ಪಕಗೊಳ್ಳುವಂತೆ, ಆಡಳಿತ ವೆಚ್ಚ ಇಳಿಸುವಂತೆ ಮತ್ತು ಆರೋಗ್ಯ, ವಸತಿಯಂತಹ ಸೌಲಭ್ಯಗಳನ್ನು ಒಳಗೊಳ್ಳುವಂತೆ ಮಾಡಲಾಗುವುದು.
* **ಕೈಗಾರಿಕಾ ಸಂಬಂಧಗಳು ಮತ್ತು ಸಾಮೂಹಿಕ ಚೌಕಾಶಿಯ** ವಿಷಯದಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆಯ 2010ರ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು ಎಂದು ಕರಡು ಧೋರಣೆ ತಿಳಿಸಿದೆ. ಕೈಗಾರಿಕಾ ಸಂಬಂಧಗಳ ಸಮಿತಿಗಳ ವ್ಯವಸ್ಥೆಯನ್ನು ಕೃಷಿ, ಮಾಹಿತಿ ತಂತ್ರಜ್ಞಾನ, ಮೀನಿ ಸಂಸ್ಕರಣೆ ಮುಂತಾದ ಕ್ಷೇತ್ರಗಳಿಗೆ ವಿಸ್ತರಿಸಲಾಗುವುದು; ಮನೆಗೆಲಸದವರ ಉದ್ಯೋಗ ಭದ್ರತೆಗೆ ಮತ್ತು ರಕ್ಷಣೆಗೆ ಒಂದು ಲೇಬರ್ ಬ್ಯಾಂಕ್ ರಚಿಸಲಾಗುವುದು.
* ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ದುಡಿಯುವ **ಅಸಂಘಟಿತ ಕಾರ್ಮಿಕರ ಕೆಲಸದ ಮತ್ತು ಸಂಬಳದ ಪರಿಸ್ಥಿತಿಗಳ** ಉಸ್ತುವಾರಿಯ ಕೆಲಸವನ್ನು ಸಮರ್ಪಕವಾಗಿ ನಡೆಸುವಂತೆ ಕಾರ್ಮಿಕ ಇಲಾಖೆಯ ಕೆಲಸವನ್ನು ಪುನಶ್ಚೇತನಗೊಳಿಸಲಗುವುದು; ಹೊಸದಾಗಿ ಕಾರ್ಮಿಕ ಗುಪ್ತಮಾಹಿತಿ ಕೋಶದ ಮೌಲ್ಯಮಾಪನದ ಆಧಾರದಲ್ಲಿ ಕಾರ್ಮಿಕ-ಸ್ನೇಹಿ ಉದ್ದಿಮೆಗಳನ್ನು ಗುರುತಿಸಲಾಗುವುದು ಎಂದು ಕರಡು ಧೋರಣೆ ಹೇಳುತ್ತದೆ.
* **ದುಡಿಮೆಯ ಸ್ಥಳಗಳನ್ನು ಮತ್ತು ದುಡಿಮೆಯನ್ನು ಮಹಿಳಾ-ಸ್ನೇಹಿಯಾಗಿಸಲು ಹಲವು ಕ್ರಮಗಳನ್ನು ಕರಡು ಧೋರಣೆ ವಿಶದ ಪಡಿಸಿದೆ.**
* **ವಲಸೆ ಕಾರ್ಮಿಕರ** ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಹಿಂದಿನ ಎಲ್‌ಡಿಎಫ್ ಸರಕಾರ ದೇಶದಲ್ಲೇ ಮೊದಲ ಬಾರಿಗೆ ಕಲ್ಯಾಣ ಯೋಜನೆಯೊಂದನ್ನು ಆರಂಬಿಸಿತ್ತು. ಈ ಎಲ್‌ಡಿಎಫ್ ಸರಕಾರ ಇತ್ತೀಚೆಗೆ ಆವಾಜ್ ಎಂಬ ಆರೋಗ್ಯ ವಿಮಾ ಯೋಜನೆಯನ್ನು ಆರಂಭಿಸಿದ್ದು ದೇಶದಲ್ಲೆಲ್ಲ ಮೆಚ್ಚುಗೆಗೆ ಪಾತ್ರವಾಗಿದೆ. ಹೊಸ ಕಾರ್ಮಿಕ ಧೋರಣೆಯನ್ನು ಇವನ್ನು ಇನ್ನಷ್ಟು ವಿಸ್ತರಿಸುವುದಾಗಿ ಹೇಳಿದೆ.
* **ತೋಟಕಾರ್ಮಿಕರ** ಜೀವನ ಪರಿಸ್ಥಿತಿಗಳನ್ನು ಉತ್ತಮ ಪಡಿಸುವುದು ಎಲ್‌ಡಿಎಫ್ ಚುನಾವಣಾ ಪ್ರಣಾಳಿಕೆಯ ಒಂದು ಮುಖ್ಯ ಅಂಶವಾಗಿದ್ದು ಅದನ್ನು ಈಡೇರಿಸುವ ಕ್ರಮಗಳನ್ನು ಈ ಕರಡು ಧೋರಣೆ ಒಳಗೊಂಡಿದೆ. ಇದರಲ್ಲಿ ತೋಟ ಕಾರ್ಮಿಕರ ಆರೋಗ್ಯ, ವಸತಿ ಮತ್ತು ಅವರ ಮಕ್ಕಳ ಶಿಕ್ಷಣದ ಸೌಲಭ್ಯಗಳೂ ಇದರಲ್ಲಿ ಸೇರಿದೆ.
* **ಪಾರಂಪರಿಕ ಕೈಗಾರಿಕೆಗಳ** ಕಾರ್ಮಿಕರ ಒಂದು ದೊಡ್ಡ ಸಮಸ್ಯೆಯೆಂದರೆ ವರ್ಷವಿಡೀ ಕೆಲಸ ದೊರೆಯದಿರುವುದು. ಆದಷ್ಟು ಹೆಚ್ಚಿನ ಕೆಲಸದ ದಿನಗಳು ಲಭ್ಯವಾಗುವ ಎಲ್ಲ ಸಾಧ್ಯತೆಗಳನ್ನು ಕಂಡು ಹಿಡಿಯಲು ಕಾರ್ಮಿಕ ಇಲಾಖೆ ಇತರ ಇಲಾಖೆಗಳ ಸಹಕಾರದೊಂದಿಗೆ ಯೋಜನೆಗಳನ್ನು ರೂಪಿಸುತ್ತದೆ; ಪಾರಂಪರಿಕ ಕೈಗಾರಿಕೆಗಳು ಉಳಿಯುವಂತೆ, ಅಗತ್ಯ ನವೀಕರಣ, ಸೂಕ್ತ ಆಧುನೀಕರಣ, ಉತ್ಪಾದಕತೆ ಹೆಚ್ಚಿಸುವ ಕ್ರಮಗಳು ಮತ್ತು ಬಿಕ್ಕಟ್ಟಿನಲ್ಲಿರುವ ಕೈಗಾರಿಕೆಗಳ ಪುನರುಜ್ಜೀವನದ ಯೋಜನೆಗಳನ್ನೂ ರೂಪಿಸಲಾಗುವುದು.
* **ಇಎಸ್‌ಐ ಯೋಜನೆ**ಯನ್ನು ವಿಸ್ತರಿಸಲಾಗುವುದು, ಇಎಸ್‌ಐ ಆಸ್ಪತ್ರೆಗಳು ಮತ್ತು ದವಾಖಾನೆಗಳನ್ನು ನವೀಕರಿಸಲಾಗುವುದು, ರಾಜ್ಯದ 9 ಇಎಸ್‌ಐ ಆಸ್ಪತ್ರೆಗಳಿಗೆ ಐಎಸ್‌ಐ ಪ್ರಮಾಣ ಪತ್ರ ಪಡೆಯಲಾಗುವುದು, ಎರಡು ಇಎಸ್‌ಐ ಆಸ್ಪತ್ರೆಗಳನ್ನು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಕರಡು ಧೋರಣೆ ಹೇಳುತ್ತದೆ.
* **ಕೌಶಲ ವೃದ್ಧಿಯ** ಕ್ಷೇತ್ರದಲ್ಲಿ ಎಲ್ಲ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಗಳಿಗೆ ಮಧ್ಯಾಹ್ನದ ಊಟದ ಯೋಜನೆಯನ್ನು ವಿಸ್ತರಿಸಲಾಗುವುದು; ಈ ಐಟಿಐಗಳನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೇರಿಸಲು ಆಧುನಿಕ ವಿಧಾನಗಳು, ತಂತ್ರಜ್ಞಾನಗಳನ್ನು ಅಳವಡಿಸಿ ಕೊಳ್ಳಲಾಗುವುದು; ಮಹಿಳೆಯರು ಮತ್ತು ವಂಚಿತ ಸಮುದಾಯಗಳಿಗಾಗಿ ವಿಶೇಷ ಕೌಶಲ ವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

**ಎಲ್ಲ ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಘನತೆಯ ದುಡಿಮೆಯ ಪ್ರತಿಫಲ ಮತ್ತು ಸಾಮಾಜಿಕ ಭದ್ರತೆ ಎಲ್‌ಡಿಎಫ್ ಸರಕಾರದ ಹೊಸ ಕಾರ್ಮಿಕ ಧೋರಣೆಯ ಒಟ್ಟಾರೆ ನಿಲುವು ಎಂದು ಹೇಳಲಾಗಿದೆ.**

## ರಾಜ್ಯಗಳ ಸುತ್ತ



# ಶಿಮ್ಲಾದ 'ಗುಡಿಯಾಗೆ ನ್ಯಾಯ': ದೇಶವ್ಯಾಪಿ ಪ್ರತಿಭಟನೆಗೆ ಎಸ್‌ಎಫ್‌ಐ ಕರೆ

ಜುಲೈ 4 ರಂದು ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾ ಬಳಿ ಶಾಲಾ ಬಾಲಕಿ ಗುಡಿಯಾಳ ಭೀಕರ ಮಾನಭಂಗ ಮತ್ತು ಕೊಲೆ ರಾಜ್ಯದಲ್ಲಿ ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ. ಇದಕ್ಕೆ ಕಾರಣ ಸರಕಾರ ಅಪರಾಧಿಗಳನ್ನು ರಕ್ಷಿಸುವ ಪ್ರಯತ್ನ ನಡೆಸಿದೆ ಎಂಬ ಭಾವನೆ ಉಂಟಾಗಿರುವುದು.

ಪೋಲೀಸ್ ಆಡಳಿತ ಸಂದೇಹಾಸ್ಪದ ರೀತಿಯಲ್ಲಿ ವರ್ತಿಸುತ್ತಿದೆ. ಏಕೆಂದರೆ ವಿವಿಧ ಪೋಲಿಸ್ ಅಧಿಕಾರಿಗಳು ಪರಸ್ಪರ ವಿರುದ್ಧ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಮುಖ್ಯಮಂತ್ರಿಗಳ ಅಧಿಕೃತ ಫೇಸ್‌ಬುಕ್‌ನಲ್ಲಿ ಅಪರಾಧಿಗಳೆನ್ನುವವರ ಫೋಟೋಗಳನ್ನು ಹಾಕಿದ್ದು ಅದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ಆದರೆ ಪೋಲಿಸರು ಕೆಲವು ದಿನಗೂಲಿಯುವರನ್ನು ಬಂಧಿಸಿದ್ದಾರೆ. ಪೋಲೀಸ್ ಕಸ್ಟಡಿಯಲ್ಲೇ ಒಬ್ಬ ಬಂಧಿತನ ಕೊಲೆಯೂ ಆಗಿದೆ. ಇವೆಲ್ಲ ಘಟನೆಗಳು ತೀವ್ರ ಸಂದೇಹವನ್ನುಂಟು ಮಾಡಿದೆ.

ಎಸ್‌ಎಫ್‌ಐ ನೇತೃತ್ವದಲ್ಲಿ ಇದರ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ವಿದ್ಯಾರ್ಥಿಗಳು ಮತ್ತು ಇತರ ನಾಗರಿಕರು ಶಿಮ್ಲಾದಲ್ಲಿ ರಾಜಭವನದ ಎದುರು ಪ್ರತಿಭಟನೆ ನಡೆಸಿದ್ದಾರೆ. ದಿಲ್ಲಿಯಲ್ಲಿ ಹಿಮಾಚಲ ಭವನದ ಎದುರು ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ.

ಈ ಸಮಸ್ತ ಘಟನೆಯ ಸಿಬಿಐ ತನಿಖೆ ನಡೆಸಬೇಕು, ತಕ್ಷಣವೇ ಕಸ್ಟಡಿಯಲ್ಲಿ ಒಬ್ಬನ ಸಾವಿಗೆ ಕಾರಣರಾದವರನ್ನು ಅಮಾನತು ಮಾಡಬೇಕು, ಅಪರಾಧಿಗಳನ್ನು ತಕ್ಷಣವೇ ಬಂಧಿಸಬೇಕು ಮತ್ತು ಹಿಮಾಚಲ ಪ್ರದೇಶದಲ್ಲಿ ಕಾನೂನು-ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸಬೇಕು ಎಂಬುದು ಪ್ರತಿಭಟನಾಕಾರರ ಬೇಡಿಕೆಗಳು.

ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ 'ಗುಡಿಯಾಗೆ ನ್ಯಾಯ'ಕ್ಕೆ ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಕರೆ ನೀಡಿದೆ.

ಜುಲೈ 3ರಂದು ಮುಂಬೈಯಲ್ಲಿ ದ್ವೇಷಪ್ರೇರಿತ ಅಪರಾಧಗಳು ಮತ್ತು ಗೋರಕ್ಷಕ ಕಾವಲುಕೋರರ ಹಿಂಸಾಕೃತ್ಯಗಳ ವಿರುದ್ಧ ಒಂದು ಬೃಹತ್ ಮೆರವಣಿಗೆ ನಡೆಯಿತು. ಡಾ.ಅಂಬೇಡ್ಕರ್ ಸ್ಮರಣೆಯ ಚೈತ್ಯಭೂಮಿಯಲ್ಲಿ ಸಾರ್ವಜನಿಕ ಸಭೆಯ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾವಿರಾರು ಜನ ಭಾಗವಹಿಸಿದರು. ಎಡಪಕ್ಷಗಳು, ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಸದಸ್ಯರು, ವಿದ್ಯಾರ್ಥಿ-ಯುವಜನ, ಮಹಿಳಾ ಮತ್ತು ಸಾಂಸ್ಕೃತಿಕ ಸಂಘಟನೆಗಳ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿದರು.



# ಶಾಂಘೈ ಸಹಕಾರ ಸಂಘಟನೆಗೆ ಭಾರತ ಸೇರ್ಪಡೆ, ಮುಂದಿನ ಹೆಜ್ಜೆ 'ಒಬೋರ್'?

ಪುಟ 15 ರಿಂದ

ನಡೆದ ಮೊದಲ ಸೌಹಾರ್ದ ಸಭೆ ಇದಾಗಿತ್ತು. ವಿಶೇಷವಾದ ಪರಮಾಣು ಸರಬರಾಜುದಾರರ ಗುಂಪು (ಎನ್.ಎಸ್.ಜಿ.) ಗೆ ಭಾರತ ಪ್ರವೇಶಿಸಲು ಚೀನಾವು ಮನಸ್ಸು ಮಾಡದಿರುವುದರಿಂದ ಭಾರತವು ಮುನಿಸಿಕೊಂಡಿದೆ. ಈ ಸಂದರ್ಭದಲ್ಲಿಯೇ ಚೀನಾ ಅಧ್ಯಕ್ಷರಿಗೆ ಮೋದಿಯವರು 'ಪರಸ್ಪರ ಗೌರವಿಸುವ ಪ್ರಮುಖ ಕಾಳಜಿಗಳ ಬಗ್ಗೆ ತಿಳಿಸಿದರು ಎನ್ನಲಾಗಿದೆ. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸಂವಹನದ ಮತ್ತು ಸಹಕಾರಗಳನ್ನು ಮತ್ತಷ್ಟು ಬಲಪಡಿಸಿ ಕೊಳ್ಳಬೇಕೆಂದು ಇಬ್ಬರು ನಾಯಕರು ಅಭಿಪ್ರಾಯ ಹೊಂದಿದ್ದಾರೆ. ಹಾಗೆಯೇ, ಬೀಜಿಂಗ್ ಬೆಂಬಲವಿಲ್ಲದಿದ್ದರೆ ಎಸ್.ಸಿ.ಓ ಗೆ ಬಾರತ ಸದಸ್ಯತ್ವವನ್ನು ಪಡೆಯುವುದು ಕಷ್ಟಸಾಧ್ಯವಾಗುತ್ತಿತ್ತು ಎಂದು ಮೋದಿಯವರು ಸಹಜವಾಗಿಯೇ ಒಪ್ಪಿಕೊಂಡು, ಬೆಂಬಲಿಸಿದ ಚೀನಾದ ಅಧ್ಯಕ್ಷರಿಗೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

ಚೀನಾ ಮತ್ತು ಪಾಕಿಸ್ತಾನ ನಿಕಟವಾಗಿದ್ದರೂ ಚೀನಿ ಅಧ್ಯಕ್ಷ ಭಾರತದ ಪ್ರಧಾನಿ ಭೇಟಿ ಮಾಡಿದರು. ಆದರೆ ಪಾಕಿಸ್ತಾನದ ಪ್ರಧಾನಿ ಬೇಟಿ ಮಾಡಲಿಲ್ಲ. ಬಲೂಚಿಸ್ತಾನದಲ್ಲಿ ಇಬ್ಬರು ಚೀನಿ ಶಿಕ್ಷಕರ ಅಪಹರಣ ಮತ್ತು ಅಲ್ಲೂ ಬೇರೆಡೆಯಲ್ಲೂ ಭಯೋತ್ಪಾದನೆಯನ್ನು ತಡೆಗಟ್ಟಲು ದೃಢ ಕ್ರಮ ಕೈಗೊಳ್ಳದಿರುವುದಕ್ಕೆ ಚೀನಾದ ಅಸಂತೋಷದ ಸಂಕೇತ ಇದು ಎನ್ನಲಾಗಿದೆ. ಆದರೆ ದಕ್ಷಿಣ ಏಪಿಯಾ ಪ್ರಾದೇಶಿಕ ಸಹಕಾರ ಸಂಸ್ಥೆ(ಸಾರ್ಕ್) ನಲ್ಲಿ ಭಾರತವು ಪ್ರಮುಖ ಶಕ್ತಿಯಾಗಿರುವುದರಿಂದ, ಚೀನಾವು ಸಾರ್ಕ್‌ನಲ್ಲಿ ಸದಸ್ಯತ್ವ ನಿರೀಕ್ಷಿಸುತ್ತಿಲ್ಲ. ಪ್ರಸ್ತುತ ಚೀನಾ ಸಾರ್ಕ್‌ನಲ್ಲಿ ವೀಕ್ಷಕ ಸ್ಥಾನ ಹೊಂದಿದೆ.

ಮೋದಿ ಮತ್ತು ಜಿಂಪಿಂಗ್ ನಡುವಿನ ಪರಸ್ಪರ ಮಾತುಕತೆ ಸಂದರ್ಭದಲ್ಲಿ 'ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ದೀರ್ಘವಾದ ಚರ್ಚೆ ನಡೆದಿದೆ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ತಿಳಿಸಿದ್ದಾರೆ.

## ಒಬೋರ್‌ಗೆ ಸೇರುವುದು ಮುಂದಿನ ತಾರ್ಕಿಕ ಹೆಜ್ಜೆ

ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳೆಂದರೆ, ಚೀನಾ ಮತ್ತು ಭಾರತ ಸರ್ವವಿದಿತ. ವಿಶ್ವದಲ್ಲಿ ಇದೀಗ ಆಳವಾದ ಮತ್ತು ಸಂಕೀರ್ಣವಾದ ರಾಜಕೀಯ ಬದಲಾವಣೆಗಳಾಗುತ್ತಿವೆ. ಆದ್ದರಿಂದ, ಈ ಎರಡು ರಾಷ್ಟ್ರಗಳು 'ಪಾಲುದಾರರಾಗಿ' ಪರಸ್ಪರ-ವ್ಯಾಪಾರ-ಹೂಡಿಕೆಯ ಸಹಕಾರಕ್ಕೆ ಹೆಚ್ಚು ಗಮನ ಹರಿಸಬೇಕಾದ ಅಗತ್ಯವಿದೆ.

ಆದ್ದರಿಂದ ಭಾರತಕ್ಕೆ ಒಬೋರ್ ಸೇರುವಲ್ಲಿ ಇರುವ ಹಿಂಜರಿಕೆಯನ್ನು ಪುನರ್ ವಿಮರ್ಶಿಸಬೇಕೆಂದು ಚೀನಾ ಆಹ್ವಾನ ಕೊಟ್ಟಿದೆ. ಮಾತ್ರವಲ್ಲದೆ ಯಾವುದೇ ರೀತಿಯಲ್ಲಿ ಭಾರತದ ನಿಲುವು-ನೀತಿಗಳನ್ನು ತಿರುಚಲು ಒತ್ತಡ ಹೇರ ಬಯಸುವುದಿಲ್ಲವೆಂದು ಎಚ್ಚರಿಕೆಯಿಂದಲೇ ಪ್ರತಿಪಾದಿಸಿದೆ. ಆದಾಗ್ಯೂ, ಎಸ್.ಸಿ.ಓ. ಭಾಗವಾಗಿ ಭಾರತಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವಲ್ಲಿ ಚೀನಾ ತನ್ನ ದೃಢವಾದ ಬದ್ಧತೆಯನ್ನು ವ್ಯಕ್ತಪಡಿಸಿದೆ.

ಒಬೊರ್ ಗೆ ಸೇರಲು ಭಾರತ, ಜಪಾನ್ ಸೇರಿದಂತೆ ಯಾವುದೇ ದೇಶವನ್ನು ಚೀನಾ ಒತ್ತಾಯಿಸುವುದಿಲ್ಲ. ಹಾಗೆಯೇ ಬೇಡಿಕೊಳ್ಳುವುದೂ ಇಲ್ಲ. ದಾರಿಯುದ್ದಕ್ಕೂ ಸಹಕಾರ ವೇದಿಕೆ ನಿರ್ಮಿಸಲು ಪ್ರಾರಂಭಿಕ ಸಹಕಾರವನ್ನು ಎಲ್ಲರಿಂದಲೂ ಚೀನಾ ಬಯಸುತ್ತದೆ ಎಂದು ಚೀನಾ ಮಾಧ್ಯಮಗಳೂ ಸಾರಿವೆ.

ಬಾಂಗ್ಲಾದೇಶ, ಚೀನಾ, ಭಾರತ ಮತ್ತು ಮಯನ್ಮಾರ್ (ಬಿಸಿಐಎಂ) ಕಾರಿಡಾರ್ ನಲ್ಲಿ ಸಂಪರ್ಕ ಮತ್ತು ವೇಗದ ಚಾಲನೆಯನ್ನು ಅಭಿವೃದ್ಧಿಪಡಿಸಲು ಭಾರತ-ಚೀನಾ ನಡುವಿನ ಸಹಕಾರದ ಅಗತ್ಯವಿದೆ. ಬಿಸಿಐಎಂ ಕಾರಿಡಾರ್ ನಲ್ಲಿ ಒಭೋರ್ ಹಲವು ಪ್ರಮುಖ ಯೋಜನೆಗಳ ಗುರಿ ಹೊಂದಿದೆ.

ಈ ಹಿನ್ನೆಲೆಯಲ್ಲಿ ಒಬೊರ್ ಯೋಜನೆಗೆ ಸೇರುವುದು ಹಾಗೂ ಅಂತರರಾಷ್ಟ್ರೀಯ ಮುಖ್ಯವಾಹಿನಿಯ ಭಾಗವಾಗುವುದು, ಭಾರತದ ತಾರ್ಕಿಕ ಮುಂದಿನ ಹೆಜ್ಜೆ ಆಗಬೇಕು. ●

# ಶಾಂಘೈ ಸಹಕಾರ ಸಂಘಟನೆಗೆ ಭಾರತ ಸೇರ್ಪಡೆ, ಮುಂದಿನ ಹೆಜ್ಜೆ 'ಒಬೊರ್'?




ನಾಗರಾಜ ನಂಜುಂಡಯ್ಯ



**ಒಬೊರ್ ಗೆ ಈಗ ವಿಶ್ವಾದ್ಯಂತ ಹೆಚ್ಚಿನ ದೇಶಗಳು ಬೆಂಬಲ ವ್ಯಕ್ತಪಡಿಸುತ್ತಿವೆ. ಭಾರತದ "ಸರ್ವಋತು ಮಿತ್ರ"ರು ಎಂದು ಹೇಳಲಾಗುವ ಮತ್ತು ಒಬೊರ್ ನ್ನು ಬಲವಾಗಿ ವಿರೋಧಿಸುತ್ತಿದ್ದ ಅಮೆರಿಕಾ ಮತ್ತು ಜಪಾನ ಗಳು ಸಹ ಬೀಜಿಂಗ್ ನಲ್ಲಿ ನಡೆದ ಒಬೊರ್ ಶೃಂಗಸಭೆಗೆ ತಮ್ಮ ಉನ್ನತ ಮಟ್ಟದ ಅಧಿಕೃತ ನಿಯೋಗವನ್ನು ಕಳುಹಿಸಿದ್ದು ಇದಕ್ಕೆ ಸಾಕ್ಷಿಯಾಗಿತ್ತು. ಭಾರತದ ಎಸ್.ಸಿ.ಒ ಸದಸ್ಯತ್ವ ಒಬೊರ್ ಸೇರಲು ಇನ್ನೂ ಹಿಂಜರಿಕೆಯಿಂದ ಕೂಡಿದ ಮೊದಲ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಭಾರತವು ಅಭಿವೃದ್ಧಿ ಪಡಿಸಬೇಕೆಂದಿರುವ ಅಂತರರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಕಾರಿಡಾರ್ ಯೋಜನೆಯನ್ನು ಒಬೊರ್ ಸಹಕಾರದೊಂದಿಗೆ, ಅತ್ಯುತ್ತಮವಾಗಿ ಜಾರಿ ಮಾಡಬಹುದು. ಬಾಂಗ್ಲಾದೇಶ, ಚೀನಾ, ಭಾರತ ಮತ್ತು ಮಯನ್ಮಾರ್ (ಬಿಸಿಐಎಂ) ಕಾರಿಡಾರ್ ನಲ್ಲಿ ಸಂಪರ್ಕ ಮತ್ತು ವೇಗದ ಚಾಲನೆಯನ್ನು ಅಭಿವೃದ್ಧಿಪಡಿಸಲು ಭಾರತ-ಚೀನಾ ನಡುವಿನ ಸಹಕಾರದ ಅಗತ್ಯವಿದೆ. ಬಿಸಿಐಎಂ ಕಾರಿಡಾರ್ ನಲ್ಲಿ ಒಭೋರ್ ಹಲವು ಪ್ರಮುಖ ಯೋಜನೆಗಳ ಗುರಿ ಹೊಂದಿದೆ. ಈ ಹಿನ್ನೆಲೆಯಲ್ಲಿ ಒಬೊರ್ ಯೋಜನೆಗೆ ಸೇರುವುದು ಹಾಗೂ ಅಂತರರಾಷ್ಟ್ರೀಯ ಮುಖ್ಯವಾಹಿನಿಯ ಭಾಗವಾಗುವುದು, ಭಾರತದ ತಾರ್ಕಿಕ ಮುಂದಿನ ಹೆಜ್ಜೆ ಆಗಬೇಕು.**

ಇದೇ ಜೂನ್ ತಿಂಗಳ ಎರಡನೆ ವಾರದಲ್ಲಿ ಕಝಾಕಿಸ್ತಾನದ ರಾಜಧಾನಿಯಾದ ಅಸ್ತಾನದಲ್ಲಿ ನಡೆದ, ಶಾಂಘೈ ಸಹಕಾರ ಸಂಘಟನೆ (ಎಸ್.ಸಿ.ಒ.) ಶೃಂಗ ಸಭೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ವಿಧ್ಯುಕ್ತವಾಗಿ ಸದಸ್ಯತ್ವ ಪಡೆದವು. ಹಲವು ವರ್ಷಗಳಿಂದ ಎಸ್.ಸಿ.ಓ. ಸಂಸ್ಥೆಯಲ್ಲಿ ಇವೆರಡೂ ವೀಕ್ಷಕ ಸ್ಥಾನ ಹೊಂದಿದ್ದವು. ಇದೀಗ ಪೂರ್ಣ ಸದಸ್ಯತ್ವವನ್ನು ಪಡೆದಿವೆ. ಮುಂದೆ ಇರಾನ್ ದೇಶ ಈ ಸಮೂಹಕ್ಕೆ ಸೇರ್ಪಡೆಯಾಗುವ ನಿರೀಕ್ಷೆಯಲ್ಲಿದೆ.

**ಎಸ್.ಸಿ.ಓ. ಮೂಲ ಮತ್ತು ಉದ್ದೇಶ**

1995 ರಲ್ಲಿ ಸ್ಥಾಪನೆಗೊಂಡ ಶಾಂಘೈ ಸಹಕಾರ ಸಂಘಟನೆಗೆ, ರಷ್ಯಾ ಚೀನಾ ಕಝಾಕಿಸ್ತಾನ, ಕರ್ಗಿಸ್ತಾನ ಮತ್ತು ತಜಾಕಿಸ್ತಾನ ಗಳು ಮೂಲ ಸದಸ್ಯ ರಾಷ್ಟ್ರಗಳಾಗಿದ್ದವು. ಭಾರತ ಮತ್ತು ಪಾಕಿಸ್ತಾನ ಈ ಸಮೂಹಕ್ಕೆ ಈಗ ಸೇರ್ಪಡೆಗೊಂಡಿದ್ದು, ವಿಶ್ವಸಂಸ್ಥೆ(ಯು.ಎನ್.) ಯ ಮೂರು ಪ್ರಮುಖ ವಿಶ್ವ-ಶಕ್ತಿಗಳಾದ ರಷಿಯಾ, ಚೀನಾ ಮತ್ತು ಭಾರತ ದೇಶಗಳು ಒಂದಾಗಿ ಸೇರಿದ್ದರಿಂದ, ಇದೀಗ ವಿಶ್ವದಲ್ಲೆ ಅತಿ ದೊಡ್ಡ ಶಕ್ತಿಶಾಲಿ ಸಂಘಟನೆಯಾಗಿ ಎಸ್.ಸಿ.ಒ. ಹೊರಹೊಮ್ಮಿದೆ. ಜಗತ್ತಿನ ಜನಸಂಖ್ಯೆಯಲ್ಲಿ ಶೇ. 44 ರಷ್ಟು, ಹಾಗೆಯೇ ವಿಶ್ವದ ಜಿ.ಡಿ.ಪಿ (ಒಟ್ಟು ಆಂತರಿಕ ಉತ್ಪಾದನೆ) ಯಲ್ಲಿ ಶೇ. 25 ರಷ್ಟು, ಜೊತೆಗೆ ಐದು ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಇಂಡಿಯಾ, ಚೀನಾ, ದಕ್ಷಿಣ ಆಫ್ರಿಕಾ) ದೇಶಗಳಲ್ಲಿ ಪ್ರಮುಖವಾದ ಮೂರು ದೇಶಗಳು – ಎಸ್.ಸಿ.ಓ. ದ ಭಾಗವಾಗಿರುವುದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವಾದ ಬೆಳವಣಿಗೆಯಾಗಿದೆ. ಪ್ರಾಥಮಿಕವಾಗಿ ಇದರ ಉದ್ದೇಶ ಭಯೋತ್ಪಾದನೆಯ ತಡೆಯೊಡ್ಡುವುದಾಗಿತ್ತು. ಆದರೀಗ ಇದರೊಂದಿಗೆ, ಈ ಪ್ರದೇಶದ ಆರ್ಥಿಕ-ಸಹಕಾರ ಹಾಗೂ ವಾಣಿಜ್ಯ ಅಭಿವೃದ್ಧಿಯ ಉದ್ದೇಶಗಳನ್ನೂ ಎಸ್.ಸಿ.ಒ ಹೊಂದಿದೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಎಸ್.ಸಿ.ಒ. ಉಜ್ಬೇಕಿಸ್ತಾನ್ ರಾಜಧಾನಿಯಾದ ತಾಷ್ಕೆಂಟ್‌ನಲ್ಲಿ ಭಯೋತ್ಪಾದನಾ ವಿರೋಧಿ ಪ್ರಾದೇಶಿಕ ಸಂರಚನೆ (RATS: Regional Anti-Terrorism Structure) ಯನ್ನು ಸ್ಥಾಪಿಸಿದೆ. ಶೃಂಗಸಭೆಯಲ್ಲಿ ಚೀನಾದ ಅ ಧ್ಯಕ್ಷರಾದ ಕ್ಸಿ ಜಿಂಪಿಂಗ್ ಮಾತನಾಡುತ್ತಾ, "ಭದ್ರತೆ ಅಭಿವೃದ್ಧಿಗೆ ಇರಬೇಕಾದ ಅಗತ್ಯ" ಎಂದು ಹೇಳಿದ್ದಾರೆ. ಅವರು "ಭಯೋತ್ಪಾದನೆ, ಪ್ರತ್ಯೇಕತಾವಾದ, ತೀವ್ರವಾದ, ಮಾದಕ ದ್ರವ್ಯ ಮತ್ತು ಅಂತರ-ರಾಷ್ಟ್ರೀಯ ಅಪರಾಧಗಳನ್ನು ಎದುರಿಸುವ ಕಾರ್ಯ ವಿಧಾನಗಳನ್ನು ಎಸ್.ಸಿ.ಓ ಮತ್ತಷ್ಟು ಹೆಚ್ಚಿಸಿಕೊಳ್ಳಲಿದೆ" ಎಂದಿದ್ದಾರೆ.

**ಭದ್ರತಾ, ಆರ್ಥಿಕ ಸಹಕಾರದತ್ತ**

ಇತ್ತೀಚಿನ ಇತ್ತೀಚಿನ ವರ್ಷಗಳಲ್ಲಿ ಎಸ್.ಸಿ.ಓ. ಸದಸ್ಯ ರಾಷ್ಟ್ರಗಳು ಜಂಟಿ-ಮಿಲಿಟರಿ ಕವಾಯತುಗಳಲ್ಲಿ ಪಾಲ್ಗೊಂಡಿವೆ. ಭವಿಷ್ಯದಲ್ಲಿ ಇಂತಹ ಜಂಟಿ ಮಿಲಿಟರಿ ಅಭ್ಯಾಸಗಳಲ್ಲಿ ಭಾರತೀಯ ಸೇನೆಯು ಸೇರುವ ವಿಶ್ವಾಸವನ್ನು ರಷ್ಯಾದ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನವು ಇದೀಗ ಸದಸ್ಯರಾಗಿರುವುದರಿಂದ, ಭಾರತ-ಪಾಕಿಸ್ತಾನ ಮಿಲಿಟರಿಗಳು ಎಸ್.ಸಿ.ಒ.ನ ಆಶ್ರಯದಲ್ಲಿ ಆಯೋಜಿಸಲಾಗುವ ಮಿಲಿಟರಿ ಕವಾಯತುಗಳಲ್ಲಿ ಪಾಲ್ಗೊಳುವಂತೆ ಮಾಢುವುದು ಒಂದು ರಾಜತಾಂತ್ರಿಕ ವ್ಯಾಜಿಕ್ ಆದೀತು. ಇಲ್ಲಿ ಭಾರತ-ಪಾಕಿಸ್ತಾನಗಳು ತಮ್ಮ ನಡುವಿನ ದ್ವಿಪಕ್ಷೀಯ ವಿವಾದಗಳನ್ನು ಎಸ್.ಸಿ.ಓ. ಕ್ಷೇತ್ರದಿಂದ ಹೊರಗಿಡಬೇಕೆಂಬ ಅಲಿಖಿತವಾದ ಕಟ್ಟು-ನಿಟ್ಟಿನ ಷರತ್ತಿನ ಮೇಲೆನೇ ಸದಸ್ಯತ್ವ ಕೊಡಲಾಗಿದೆ ಎಂಬುದನ್ನು ಗಮನಿಸಬೇಕು.

ಕೇಂದ್ರ-ಏಷ್ಯಾ ಪೈಪ್ ಲೈನ್‌ಗಳಿಗಾಗಿ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಮಾರ್ಗಗಳ ಹೆದ್ದಾರಿ ಆಗಿರುವುದರಿಂದ, ಎಸ್.ಸಿ.ಓ. ಆರ್ಥಿಕ ಕಾರ್ಯಸೂಚಿಗೆ ಹೆಚ್ಚಿನ ಗಮನ ಹರಿಸಿದೆ, ಎಸ್.ಸಿ.ಓ. ರೂಪುಗೊಂಡಾಗ, ಐದು ಮೂಲ ಸದಸ್ಯ ರಾಷ್ಟ್ರಗಳು ತಮ್ಮ ಪ್ರಾದೇಶಿಕ ಆರ್ಥಿಕತೆಯನ್ನು ಬಲಪಡಿಸಲು ಇಚ್ಛಿಸಿದ್ದರು. ಈ ಗುರಿಯು, ಇದೀಗ ಮಧ್ಯ ಏಷ್ಯಾದ ಬಹುತೇಕ ಪ್ರದೇಶಗಳಲ್ಲಿ ಈಡೇರಿದೆ ಎಂಬುದು ಗಮನಾರ್ಹ.

**'ಒಬೋರ್' ಬಗ್ಗೆ ಉತ್ಸಾಹ**

ಚೀನಾ ಸರ್ಕಾರದ "ಒಂದೇ ಬೆಲ್ಟ್, ಒಂದೇ ರೋಡ್" (ಒಬೋರ್ – ಒನ್ ಬೆಲ್ಟ್ ಒನ್ ರೋಡ್) ಯೋಜನೆಯಲ್ಲಿ ಈ ಪ್ರದೇಶದ ಮತ್ತು ದೂರ ಪ್ರದೇಶಗಳ ದೇಶಗಳೂ ಉತ್ಸಾಹದಿಂದ ಭಾಗವಹಿಸಿವೆ, ಇದು ಚೀನಾದ ಈ ಒಭೋರ್ ಯೋಜನೆಗಳ ಯಶಸ್ವಿಗೆ ಹಿಡಿದ ಕನ್ನಡಿಯಾಗಿದೆ. ಭಾರತ ಮತ್ತು ಭೂತಾನ್ ಹೊರತುಪಡಿಸಿ ಒಬೋರ್‌ಗೆ ಎಲ್ಲಾ ರಾಷ್ಟ್ರಗಳು ಆಕರ್ಷಿತರಾಗಿವೆ. ಆದರೆ ಭೂತಾನದ ವಿದೇಶಾಂಗ ನೀತಿ ದೆಹಲಿಯ ನಿರ್ದೇಶನದಲ್ಲಿರುವುದರಿಂದ, ಈ ವಿಷಯದಲ್ಲಿ ಅದಕ್ಕೆ ಯಾವುದೇ ಸ್ವಂತ ಆಯ್ಕೆ ಇರುವುದಿಲ್ಲ. ಭಾರತದ ಪ್ರಧಾನ ಮಂತ್ರಿಗಳ ಎದ್ದುಕಾಣುವ ಧ್ವನಿಯನ್ನು ಹೊರತುಪಡಿಸಿ ಎಸ್.ಸಿ.ಒ. ಶೃಂಗಸಭೆಯಲ್ಲಿ ಭಾಗವಹಿಸಿದ್ದ ಇತರೆ ಎಲ್ಲಾ ನಾಯಕರುಗಳು ಒಬೊರ್ ಯೋಜನೆಗಳನ್ನು ಬೆಂಬಲಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**"ಎಸ್.ಸಿ.ಓ 'ಒಬೋರ್'ನ್ನು ಖಾತ್ರಿ ಪಡಿಸುತ್ತದೆ"**

ಅಸ್ತಾನ ಶೃಂಗಸಭೆಯ ಘೋಷಣೆಯಲ್ಲಿ ಈ ವರ್ಷದ ಮೇ ತಿಂಗಳಲ್ಲಿ ಬೀಜಿಂಗ್‌ನಲ್ಲಿ ಅಂತರರಾಷ್ಟ್ರೀಯ ಸಹಕಾರಕ್ಕಾಗಿ ನಡೆದ "ಬೆಲ್ಟ್ ಮತ್ತು ರೋಡ್' ಫೋರಂ ನ್ನು ಹೊಗಳಿದ್ದು ಗಮನಾರ್ಹ ಅಂಶವಾಗಿತ್ತು. ಎಸ್.ಸಿ.ಒ. ಘೋಷಣೆಯಲ್ಲಿ "ಪರಸ್ಪರ ಗೌರವ, ಸಮಾನತೆ ಮತ್ತು ಪರಸ್ಪರ ಪ್ರಯೋಜನಗಳ ಆಧಾರದ ಮೇಲೆ ಸುಸ್ಥಿರ ಅಭಿವೃದ್ಧಿ ಸಾಧಿಸಿ ಕಾಪಾಡಿಕೊಂಡು ಹೋಗುವಲ್ಲಿ ಸಹಕಾರಕ್ಕಾಗಿ, ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಪ್ರಾದೇಶಿಕವಾಗಿ ಸಂಯೋಜಿತ ಯೋಜನೆಗಳ ಮೂಲಕ" ಅದನ್ನು ಜಾರಿ ಮಾಡುವ ಬಗ್ಗೆ" ಪ್ರಧಾನಿ ಮೋದಿ ಬಿಟ್ಟು ಎಲ್ಲಾ ದೇಶಗಳ ನಾಯಕರು ಮಾತನಾಢಿದರು.

ಒಭೊರ್ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ, ಇಂಧನಗಳ ಪೈಫ್ ಲೈನ್‌ಗಳ ಮತ್ತು ಪ್ರಾದೇಶಿಕವಾದ ದೊಡ್ಡ ಪ್ರಮಾಣದ ಮೂಲ ಸೌಕರ್ಯ ಯೋಜನೆಗಳ ಭದ್ರತೆ-ಸುರಕ್ಷತೆಗಳನ್ನು ಎಸ್.ಸಿ.ಒ. ಖಾತ್ರಿ ಪಡಿಸುತ್ತದೆ ಎಂದು ಚೀನಿ ಅಧ್ಯಕ್ಷರು ಹೇಳಿದರು. ಎಸ್.ಸಿ.ಒ ದ ವಿಸ್ತರಣೆ ಒಬೊರ್ ಯೋಜನೆಯ ಆರಂಭ ಹಾಗೂ ಜಾಗತಿಕ ಆರ್ಥಿಕದಲ್ಲಿ ಬಂದಿರುವ ಪ್ರಮುಖ ಬದಲಾವಣೆಗಳ ಹಿನ್ನೆಲೆಯಲ್ಲಿ "ಸೂಕ್ತ ಸಮಯ"ದಲ್ಲಿ ಬಂದಿದೆ ಎಂದು ಪಾಕಿಸ್ತಾನ ಪ್ರಧಾನಿ ಹೇಳಿದರು.

**'ಒಬೊರ್'ಗೆ ವಿಶ್ವಾದ್ಯಾಂತ ಬೆಂಬಲ**

ಒಬೊರ್ ಉಪಕ್ರಮಗಳಿಗೆ ಈಗ ವಿಶ್ವಾದ್ಯಂತ ಹೆಚ್ಚಿನ ದೇಶಗಳು ಬೆಂಬಲ ವ್ಯಕ್ತಪಡಿಸುತ್ತಿವೆ. ಭಾರತದ "ಸರ್ವಋತು ಮಿತ್ರ"ರು ಎಂದು ಹೇಳಲಾಗುವ ಮತ್ತು ಒಬೊರ್ ನ್ನು ಬಲವಾಗಿ ವಿರೋಧಿಸುತ್ತಿದ್ದ ಅಮೆರಿಕಾ ಮತ್ತು ಜಪಾನ ಗಳು ಸಹ ಬೀಜಿಂಗ್ ನಲ್ಲಿ ನಡೆದ ಒಬೊರ್ ಶೃಂಗಸಭೆಗೆ ತಮ್ಮ ಉನ್ನತ ಮಟ್ಟದ ಅಧಿಕೃತ ನಿಯೋಗವನ್ನು ಕಳುಹಿಸಿದ್ದು ಇದಕ್ಕೆ ಸಾಕ್ಷಿಯಾಗಿತ್ತು. ಜಪಾನಿ ಪ್ರಧಾನಿ ಒಬೊರ್ ಯೋಜನೆಗಳಿಗೆ ಸಹಕರಿಸಲು ಸಿದ್ದರಿದ್ದೇವೆ ಎಂದು ಘೋಷಿಸಿದ್ದಾರೆ. ಭಾರತದಂತೆ ಜಪಾನಿನ ಬಲಪಂಥೀಯ ಸರಕಾರದ ಸಹ ಒಬೊರ್ ಚೀನಾದ ಆರ್ಥಿಕ ಮತ್ತು ವ್ಯೂಹಾತ್ಮಕ ಉದ್ದೇಶಗಳನ್ನು ಮುನನಡೆಸುವ ಸಾಧನ ಎಂದು ಅರ್ಥೈಸುತ್ತದೆ. ಒಬೊರ್ ಯೋಜನೆ ಭೂಮಿ ಮತ್ತು ಸಮುದ್ರದಿಂದ ಏಷ್ಯಾ-ಯೂರೋಪ್ ಗಳ ದೇಶಗಳನ್ನು ಸಂಪರ್ಕಿಸುವ ಉದ್ದೇಶ ಹೊಂದಿದೆ. ಒಬೊರ್ ನ ದೊಡ್ಡ ರೈಲು ಮತ್ತು ಮೂಲಸೌಕರ್ಯ ಯೋಜನೆಗಳ ಲಾಭದಾಯಕ ವ್ಯಾಪಾರದ ಅವಕಾಶಗಳನ್ನು ಕಳೆದುಕೊಳ್ಳಲು ಜಪಾನ್ ತಯಾರಿಲ್ಲ. ಯುರೇಶ್ಯಾ ಪ್ರದೇಶದ ಅಭಿವೃದ್ಧಿಯಲ್ಲಿ ದೊಡ್ಡ ಪಾತ್ರ ವಹಿಸಲಿರುವ ಈ ಯೋಜನೆಯಿಂದ ಹೊರಗುಳಿಯುವುದು ವ್ಯೂಹಾತ್ಮಕವಾಗಿ ಸಹ ಜಪಾನಿನ ಹಿತಾಸಕ್ತಿಗೆ ಅನುಗುಣವಾಗಿಲ್ಲ ಎಂದು ಅರ್ಥಮಾಡಿಕೊಂಡಿದೆ. ಭಾರತದ ಎಸ್.ಸಿ.ಒ ಸದಸ್ಯತ್ವ ಒಬೊರ್ ಸೇರುವ ಯೋಚನೆಯ ಇನ್ನೂ ಹಿಂಜರಿಕೆಯಿಂದ ಕೂಡಿದ ಮೊದಲ ಹೆಜ್ಜೆಯೆನ್ನಲಾಗಿದೆ.

**ಒಬೊರ್ ಸೇರ್ಪಡೆಗೆ ಭಾರತದ ಮೊದಲ ಹೆಜ್ಜೆ**

ಭಾರತದ ಎಸ್.ಸಿ.ಒ ಸದಸ್ಯತ್ವ ಒಬೊರ್ ಸೇರಲು ಇನ್ನೂ ಹಿಂಜರಿಕೆಯಿಂದ ಕೂಡಿದ ಮೊದಲ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಅಸ್ತಾನ ಶೃಂಗಸಭೆಯಲ್ಲಿ ಪ್ರಧಾನಿ ಮೋದಿಯವರು ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವ ಭೌಮತ್ವದ ವಿಚಾರಗಳನ್ನು ಎತ್ತಿದರು, ಹಾಗೆಯೇ 50 ಟ್ರಿಲಿಯನ್ ಡಾಲರ್ ಯೋಜನೆಯಾದ "ಚೀನಾ ಪಾಕಿಸ್ತಾನದ ಆರ್ಥಿಕ ಕಾರಿಡರ್" (ಸಿ.ಪಿ.ಇ.ಸಿ) ಗೆ ಭಾರತವು ಆಕ್ಷೇಪಿಸಿದೆ. ಇದರಿಂದ ಬಾರತದ ಸಾರ್ವಭೌಮತ್ವಕ್ಕೆ ಧ-ಕ್ಕೆ ಉಂಟಾಗುತ್ತದೆ ಎಂದು ಪ್ರಧಾನಿ ಮೋದಿ ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಬೀಜಿಂಗ್ ಪ್ರಕಾರ "ಚೀನಾದಿಂದ ಸರಕು ಸಾಗಾಣಿಕೆಗೆ ಇರುವ ಏಕೈಕ ಮಾರ್ಗವೆಂದರೆ, ಪಾಕಿಸ್ತಾನ ಆಳ್ವಿಕೆಯ ಕಾಶ್ಮಿರದ ಭಾಗವಾಗಿರುವ ಗಿಲ್ಗಿಟ್/ಬಾಲ್ಟಿಸ್ತಾನ ವಿವಾದಿತ ಪ್ರದೇಶದ ಮೂಲಕ ಹಾದು ಹೋಗುವ ರಸ್ತೆ ಮತ್ತು ರೈಲು ಮಾರ್ಗಗಳು ಮಾತ್ರ, ರೈಲ್ವೆ ಮಾರ್ಗದಿಂದ ಸಾಗಾಣಿಕೆ ಮಾಡುವುದು ಕಾಶ್ಮೀರ ವಿವಾದದ ಬಗೆಗ ಚೀನಾದ ತಟಸ್ಥ ನೀತಿಯಲ್ಲಿ ಬದಲಾವಣೆ ಎಂದು ತಿಳಿದುಕೊಳ್ಳಬಾರದು ಎಂದು ಬೀಜಿಂಗ್ ಪದೇ ಪದೇ ಭಾರತದ ಮನವೊಲಿಸಲು ಪ್ರಯತ್ನಿಸುತ್ತಿದೆ. ಆದರೆ ಭಾರತ ಬೀಜಿಂಗ್‌ನ ಈ ನಿಲುವನ್ನು ಒಪ್ಪುತ್ತಿಲ್ಲ.

ಭಾರತವು ಅಭಿವೃದ್ಧಿ ಪಡಿಸಬೇಕೆಂದಿರುವ ಅಂತರರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಕಾರಿಡಾರ್ ಯೋಜನೆಯನ್ನು ಒಬೊರ್ ಸಹಕಾರದೊಂದಿಗೆ, ಅತ್ಯುತ್ತಮವಾಗಿ ಜಾರಿ ಮಾಡಬಹುದು. ಇರಾನಿನ ಭೂ-ಭಾಗವಾಗಿರುವ 'ಚಬಹಾರ್' ಅಭಿವೃದ್ಧಿ ಪಡಿಸುವ ಭಾರತದ ಪ್ರಯತ್ನಗಳಿಗೂ ಸಮಸ್ಯೆಗಳು ಎದುರಾಗಿವೆ. ಇರಾನಿನ ವಿರುದ್ಧ ಟ್ರಂಪ್ ಆಡಳಿತ ಮಿಲಿಟರಿ ಮತ್ತು ಆರ್ಥಿಕ ದಿಗ್ಬಂಧನದ ಬೆದರಿಕೆ ಒಡ್ಡುತ್ತಿರುವುದು ಇದಕ್ಕೆ ಕಾರಣ. ಆದರೆ ಅದೇ ಸಮಯದಲ್ಲಿ ಸಮೀಪವಿರುವ ಗ್ವಾಡರ್ ಬಂದರು ವ್ಯಾಪಾರಕ್ಕೆ ಸಿದ್ದವಾಗಿದೆ. ಇದು ಬೆಲ್ಟ್ ರಸ್ತೆ ಯೋಜನೆಯ ಪ್ರಮುಖ ಕೇಂದ್ರವಾಗಿದೆ. ಕೇಂದ್ರ ಏಷ್ಯಾದ ಮಾರುಕಟ್ಟೆಗೆ ಚಬಹಾರ್ ಭಾರತದ ಗೇಟ್ ವೇ ಮಾರ್ಗವಾಗಿದೆ. ಕಳೆದ ವರ್ಷ ಒಬಾಮ ಆಡಳಿತವು ಇರಾನಿನ ಮೇಲಿದ್ದ ನಿರ್ಬಂಧಗಳನ್ನು ಹಿಂಪಡೆದ ಬಳಿಕ ಭಾರತವು 'ಬಂದರು' ಅಭಿವೃದ್ಧಿ ಪಡಿಸಲು 500 ದಶಲಕ್ಷ ಡಾಲರ್ ಪಾವತಿಸುವುದಾಗಿ ಒಪ್ಪಿಕೊಂಡಿತ್ತು. ಆದರೆ, ಇದೀಗ ಚಬಹಾರ್ ಯೋಜನೆಗೆ ಭಾರೀ – ಯಂತ್ರೋಪಕರಣಗಳನ್ನು ಪೂರೈಸಲು ಹರಾಜು ಪ್ರಕ್ರಿಯೆಯಲ್ಲಿ, ಯುರೋಪಿನ ಕಂಪನಿಗಳು ಹಿಂದೇಟು ಹೊಡೆಯುತ್ತಿದ್ದು ಚೀನಾದ ಸಂಸ್ಥೆಗಳು ಮಾತ್ರ ಭಾಗವಹಿಸುತಿವೆ.

**ಪ್ರಧಾನಿ ಮೋದಿಯವರಿಂದ ಬೀಜಿಂಗ್‌ಗೆ ಕೃತಜ್ಞತೆ**

ಪ್ರಧಾನಿ ಮೋದಿಯವರು ಅಸ್ತಾನ್‌ನಲ್ಲಿ ಚೀನಾದ ಅಧ್ಯಕ್ಷರೊಂದಿಗೆ 'ಸೌಹಾರ್ದ' ಮಾತುಕತೆ ನಡೆಸಿದರು. ಬೀಜಿಂಗ್ ನ ಬೆಲ್ಟ್ ರಸ್ತೆ ಶೃಂಗ ಸಭೆಯಲ್ಲಿ ಭಾಗವಹಿಸಲು ಭಾರತ ನಿರಾಕರಿಸಿದ ನಂತರ ಇಬ್ಬರು ನಾಯಕರುಗಳ ನಡುವೆ **ಪುಟ 14 ಕ್ಕೆ**



JANASHAKTHI KANNADA VARA PATRIKE JULY 24-30 2017 Price : Rs. 10/- Date of Publication : 21 JULY 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

# ಕಳಸಾ ಬಂಡೂರಿ ಹಾಗೂ ಮಹದಾಯಿ ತಿರುವು ಯೋಜನೆಯಲ್ಲಿ ರಾಜ್ಯದ ರೈತರ ಹಿತಾಸಕ್ತಿಯನ್ನು ಕಡೆಗಣಿಸಿದ ಕೇಂದ್ರ ಬಿಜೆಪಿ ಸರಕಾರ

ಭಾರತ ವಿದ್ಯಾರ್ಥಿ ಫೇಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಬಹುಮುಖ್ಯ ನೀರಾವರಿ ಯೋಜನೆಗಳಲ್ಲಿ ಒಂದಾದ ಕಳಸಾ ಬಂಡೂರಿ ಹಾಗೂ ಮಹದಾಯಿ ತಿರುವು ಯೋಜನೆ ಹಾಗೂ ಕೃಷ್ಣಾ ಏತ ನೀರಾವರಿ ಯೋಜನೆ ಅನುಷ್ಠಾನಕ್ಕಾಗಿ ಒತ್ತಾಯಿಸಿ ಗಜೇಂದ್ರಗಡ ಸ್ಥಳಿಯ ಕಾಲಕಾಲೇಶ್ವರ ಸರ್ಕಲ್‌ದಲ್ಲಿ ಪ್ರತಿಭಟನೆ ಮಾನವ ಸರಪಳಿ ಮಾಡವುದರ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳಿಗೆ ವಿಶೇಷ ತಹಶಿಲ್ದಾರರ ಮೂಲಕ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿಗಳಾದ ಗುರುರಾಜ ದೇಸಾಯಿ ಮಾತನಾಡಿ ಕಳಸಾ ಬಂಡೂರಿ ಹಾಗೂ ಮಹದಾಯಿ ತಿರುವು ಯೋಜನೆ ಬಗ್ಗೆ ನಿಮಗೀಗಾಗಲೇ ಸಮಗ್ರವಾಗಿ ತಿಳಿದಿದೆ ಎಂದು ಭಾವಿಸುತ್ತಲೇ ಅದರ ವಿವರಣೆಗೆ ಹೋಗದೆ ನೇರವಾಗಿ ವಿಷಯಕ್ಕೆ ಪ್ರಸ್ತಾಪಿಸುತ್ತಿದ್ದೇವೆ. ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಮಹದಾಯಿ ತಿರುವು ಯೋಜನೆ ಮತ್ತು ಕಳಸಾ ಬಂಡೂರಿ ಮಹತ್ವದ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಒತ್ತಾಯಿಸಿ ಕಳೆದ ಎರಡು ವರ್ಷಗಳಿಂದ ಕರ್ನಾಟಕ ರಾಜ್ಯದ ರೈತರು ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ.ಈವರೆಗೂ ರೈತರ ನ್ಯಾಯೋಚಿತ ಈ ಬೇಡಿಕೆ ಈಡೇರಿಸುವ ಹೊಣೆಗಾರಿಕೆ ಹೊಂದಿರುವ ಕೇಂದ್ರ ಸರ್ಕಾರ ಜಾಣ ಮೌನವಹಿಸುತ್ತಿರುವುದನ್ನು ನಮ್ಮ ವಿದ್ಯಾರ್ಥಿ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ.

ಕರ್ನಾಟಕ ರಾಜ್ಯ ಸತತ ನಾಲ್ಕು ವರ್ಷಗಳ ತೀವ್ರ ಬರ ಅನುಭವಿಸಿರುವುದರಿಂದ ರೈತರು ದಿಕ್ಕು ತೋಚದಂತಾಗಿದ್ದಾರೆ. ಜೊತೆಗೆ ಅಲ್ಪ ಸ್ವಲ್ಪ ಬೆಲೆದ ಬೆಳೆಗೂ ಸರಿಯಾದ ಬೆಲೆ ಸಿಗದೆ ಕೃಷಿ ಚಟುವಟಿಕೆಗೆ ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕುಡಿಯುವ ನೀರಿಗೂ ತತ್ವಾರ ಬಂದಿದೆ. ಹೀಗಿರುವಾಗ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಗೆ ಈ ಯೋಜನೆ ಜಾರಿಯಾದರೆ ಮಾತ್ರ ಇಲ್ಲಿರುವ ಕೃಷಿ ಹಾಗೂ ಕೃಷಿಕ ಉಳಿಯಲು ಸಾದ್ಯ ಎಂದು ಆಗ್ರಹಿಸಿದರು..

ಹೋರಾಟವನ್ನು ಬೆಂಬಲಿಸಿ ಕಾರ್ಮಿಕ ಮುಖಂಡ ಎಂ ಎಸ್ ಹಡಪದ ಮಾತನಾಡಿ ಈಗಾಗಲೇ ಈ ನೀರಾವರಿ ಯೋಜನೆ ಅನುಷ್ಠಾನ ಕುರಿತಂತೆ ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಕರಣವು ಕೂಡಾ ಕರ್ನಾಟಕ, ಗೋವಾ ಮತ್ತು ಮಹರಾಷ್ಟ್ರ ಸರ್ಕಾರಗಳು ನ್ಯಾಯಾಲದ ಹೊರಗಡೆ ಸೌಹಾರ್ದ ಮಾತುಕತೆ ನಡೆಯಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂಬುವ ಇಂಗಿತವನ್ನು ವ್ಯಕ್ತಪಡಿಸಿದೆ.

ಹೀಗಿರುವಾಗ ಮಾನ್ಯ ಪ್ರಧಾನಿಯವರು ದೇಶದ ಯಾವುದೇ ಗ್ರಾಮೀಣ ಪ್ರದೇಶದಿಂದ ಒಬ್ಬ ವ್ಯಕ್ತಿ ಪತ್ರ ಬರೆದ ಕೂಡಲೇ ಸ್ಪಂಧಿಸಿ ಆ ಕುರಿತು ಸುದ್ಧಿವಾಹಿನಿಗಳಲ್ಲಿ ಕೀಳುಮಟ್ಟದ ವ್ಯಾಪಾಕ ಪ್ರಚಾರ ಗಿಟ್ಟಿಸಿಕೊಳ್ಳುವ ನೀವು ರಾಜ್ಯದ ರೈತರು ಎರಡು ವರ್ಷಗಳಿಂದ ನಡೆಸುತ್ತಿರುವ ಪ್ರತಿಭಟನೆ ಕೂಗು ನಿಮಗೆ ಕೇಳಿಸುತ್ತಿಲ್ಲವೆ? ಹಾಗೂ ಸ್ವತಃ ರಾಜ್ಯದ ಮುಖ್ಯಮಂತ್ರಿಗಳು ಬರೆದ ಪತ್ರಕ್ಕೆ ತಾವು ಈವರೆಗೂ ಸಮರ್ಪಕ ಉತ್ತರವನ್ನು ಏಕೆ ನೀಡುತ್ತಿಲ್ಲ? ಎಂದು ರಾಜ್ಯದ ಜನ ತಮ್ಮನ್ನು ಪ್ರಶ್ನಿಸುತ್ತಿದ್ದಾರೆ. ಈ ನೀರಾವರಿ ಯೋಜನೆ ಅನುಷ್ಠಾನ ಮಾಡುವ ಮೂಲಕ ರಾಜಕೀಯ ಮುತ್ಸದ್ದಿತನ ಪ್ರದರ್ಶಿಸಿ ತಾವೊಬ್ಬ ಸಮರ್ಥ ಪ್ರಧಾನಿ ಎಂಬುದನ್ನು ನಿರೂಪಿಸಿ ಇಲ್ಲವಾದರೆ ರಾಜೀನಾಮೆ ನೀಡಬೇಕು ಎಂದು ನಮ್ಮ ಸಂಘಟನೆ ರಾಜ್ಯದ ರೈತರ ಪರವಾಗಿ ಆಗ್ರಹಿಸಿದರು.

ಕೂಲಿಕಾರ ಸಂಘದ ಬಾಲು ರಾಠೋಡ ಮಾತನಾಡಿ ಭಾರತ ದೇಶದಲ್ಲಿ ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರ ಬಿಜೆಪಿ ಸರಕಾರ ತನ್ನ ಅಧಿಕಾರವನ್ನು ಬಳಸಿಕೊಂಡು ರಾಜಕೀಯ ಲಾಭ ನಷ್ಟಗಳ ಲೆಕ್ಕಾಚಾರ ಬದಿಗಿಟ್ಟು ಕರ್ನಾಟಕ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಕೇಂದ್ರ ಬಿಜೆಪಿ ಮೋದಿ ಸರಕಾರ ಕಡೆಗಣಿಸಿದೆ. ಈ ನೀರಾವರಿ ಯೋಜನೆಗಳ ಬಿಕ್ಕಟ್ಟಿನ ಪರಿಹಾರಕ್ಕೆ ಸಂಬಂಧಿಸಿ ನ್ಯಾಯಾಧಿಕರಣದ ಇಂಗಿತವನ್ನು ಗಮನದಲ್ಲಿ ಇಟ್ಟುಕೊಂಡು ಸಂಬಂಧಿಸಿದ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಸಮಸ್ಯೆಯನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಅಧ್ಯಕ್ಷರಾಬ ವ್ವಿ ಅಮರೇಶ, ಶಬ್ಬಿರ ಹವಾಲ್ದಾರ, ಶಿವಾನಂದ ಬೊಸ್ಲೆ, ಶಿವಾಜಿ ಗಡ್ಡದ, ಅಶೋಕ ಉಕ್ಕಿಸಲ, ಶಿವರಾಜ ನಾಯಕ, ಮಹಾಂತೇಶ ಹಡಪದ, ದೀಪಾ ಗಜಕೋಶ, ಕರಿಯಮ್ಮ ಗುರಿಕಾರ, ವೀರಶ ಬೆನಹಾಳ, ಮಾರುತಿ ನಿಡಗುಂದಿ, ಚಂದ್ರು ರಾಠೊಡ, ಬಸವರಾಜ ಮಾಲಿಪಾಟೀಲ, ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**– ಗುರುರಾಜ ದೇಸಾಯಿ**






ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ, ಇಂಧನ ಇಲಾಖೆಯ ಎಲ್ಲ ಉದ್ಯೋಗಿಗಳ ಖಾಯಂ ಮಾಡಲಿಕ್ಕಾಗಿ ಹಾಗೂ ಗುತ್ತಿಗೆ ಕಾರ್ಮಿಕರನು ಬಳಸಿ ಬಿಸಾಡುವ ನೀತಿಯನ್ನು ವಿರೋಧಿಸಿ ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಷನ್ ನೌಕರರ ಎರಡನೇ ರಾಜ್ಯ ಸಮ್ಮೇಳನದ ಬೃಹತ್ ಮೆರವಣಿಗೆ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಿಂದ ಮೈಸೂರು ಬ್ಯಾಂಕ್ ವೃತ್ತದ ಶಿಕ್ಷಕರ ಸದನದವರೆಗೂ ನಡೆಯಿತು. ಸಮೇಳನದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರೀಯ ಮುಖಂಡರಾದ ಕಾಂ. ಪ್ರಶಾಂತಿ ನಂದಿ ಚೌಧರಿ ಮತ್ತು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾ. ಎಸ್. ವರಲಕ್ಷ್ಮಿ ಮತ್ತು ಉಪಾಧ್ಯಕ್ಷರಾದ ವಿ.ಜೆ.ಕೆ.ನಾಯರ್ ಮಾತನಾಡಿದರು.













**JANASHAKTHI KANNADA VARA PATRIKE:** Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**